ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಏಪ್ರಿಲ್ 27, 2011 ಪುಟ 20 ರೂ. 12/-


ಬದುಕಿನ ಕೇಂದ್ರದಲ್ಲಿ ಬೆಳಗಿದ ಕಡಿದಾಳು ಶಾಮಣ್ಣ




ದಿಕ್ಕೆಟ್ಟ ಅಣ್ಣಾ

ಯಡ್ಡಿಗೆ ಶರಣಾದ ರೆಡ್ಡಿ





MLA ಆಗಲು ಸಿದ್ಧತೆ



RCB ಕನ್ನಡಿಗರೇ ಇಲ್ಲದ ತಂಡ


ರವಾಡ: ನೋಂದಣಾಧಿಕಾರಿ ಪ್ರತಿಭಾಳ ನುಂಗಾಟ

ಬದುಕಿನ ಕೇಂದ್ರದಲ್ಲಿ ಬೆಳಗಿದ ಕಡಿದಾಳು ಶಾಮಣ್ಣ

• ಜೆ.ಪಿ.ಬಸವರಾಜು

ಕೃಷಿಕನಾಗಿ, ಹಳ್ಳಿಯನ್ನು ಕೇಂದ್ರ ಮಾಡಿಕೊಂಡ ಸಮಾಜವಾದಿ ಶಾಮಣ್ಣ ಮಾಡಿದ, ಮಾಡುತ್ತಿರುವ ಕೆಲಸಗಳು ಲೆಕ್ಕವಿಲ್ಲದಷ್ಟು. ತಮ್ಮ ಸುತ್ತಲಿನ ಬಡಕೂಲಿಕಾರರ ಬದುಕನ್ನು ಹಸನು ಮಾಡಲು ಅವರು ಅನೇಕ ಚಳವಳಿಗಳನ್ನು ತಮ್ಮ ವ್ಯಾಪ್ತಿಯ ಮಿತಿಯಲ್ಲಿಯೇ ಮಾಡಿದರು. ತಮ್ಮ ಆಸಕ್ತಿಯ ಹಲವು ಕೇಂದ್ರಗಳಲ್ಲಿ ಶಾಮಣ್ಣ ಹಂಚಿಹೋದರು. ಎಷ್ಟೊಂದು ಪ್ರಯೋಗಗಳು, ಎಂಥ ಜೀವನಪ್ರೀತಿ, ಎಂಥ ತತ್ವನಿಷ್ಠೆ! ಹಲವು ಕೇಂದ್ರಗಳಲ್ಲಿ ಹಂಚಿಹೋದ ಶಾಮಣ್ಣ ತಮ್ಮ ಬದುಕಿನ ಕೇಂದ್ರದಲ್ಲಿ ಎಷ್ಟು ಅಗಾಧವಾಗಿ ಬೆಳೆದರು!

ಅಪಾರವಾದ ತಾಳ್ಮೆ, ಅಪ್ಪಟ ಪ್ರಾಮಾಣಿಕತೆ, ಆರೋಗ್ಯಕರವಾದ ನಿಲುವು, ಎಂಥ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಚಿತ್ತಸ್ವಾಸ್ಥ್ಯವನ್ನು ಉಳಿಸುವ ಹಾಸ್ಯಪ್ರವೃತ್ತಿ–ಇವು ಕಡಿದಾಳು ಶಾಮಣ್ಣ ಅವರ ವ್ಯಕ್ತಿತ್ವವನ್ನು ರೂಪಿಸಿರುವ ಜೀವಧಾತುಗಳು. ಅದ್ಭುತ ನಿರೂಪಣಾ ಸಾಮರ್ಥ್ಯವನ್ನು ದತ್ತವಾಗಿ ಪಡೆದಿರುವ ಶಾಮಣ್ಣ ಬರಹ ಕಲೆಯನ್ನು ಕೈಗೂಡಿಸಿಕೊಂಡಿದ್ದರೆ ತೇಜಸ್ವಿಯವರನ್ನು ಸರಿಗಟ್ಟುವ ಬರಹಗಾರರಾಗುವ ಸಾಧ್ಯತೆಯನ್ನು ಪಡೆದಿದ್ದರು. ಅದು ಹಾಗಾಗಿದ್ದರೆ ಇನ್ನೊಬ್ಬ ತೇಜಸ್ವಿ ಕನ್ನಡಕ್ಕೆ ದೊರೆಯುತ್ತಿದ್ದರು ಎನ್ನುವುದು ಉತ್ಪ್ರೇಕ್ಷೆಯ ಮಾತಾಗಲಾರದು. ಮುಂಬೈಯಲ್ಲಿ ಮಹಾನ್ ಕಲಾವಿದ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಮನೆಯಲ್ಲಿದ್ದುಕೊಂಡು, ಅವರ ಪ್ರಿಯ ಶಿಷ್ಯನಾಗಿ ಸರೋದ್ ವಾದನವನ್ನು ಕಲಿಯಲಾರಂಭಿಸಿದ್ದ ಶಾಮಣ್ಣ ತಮ್ಮ ಸರೋದ್ ಕಲಿಕೆಯನ್ನು ಹಾಗೆಯೇ ಮುಂದುವರಿಸಿದ್ದರೆ ಅವರೊಬ್ಬ ಅಂತರರಾಷ್ಟ್ರೀಯ ಖ್ಯಾತಿಯ ಸರೋದ್ ವಾದಕರಾಗಿಯೂ ಹೆಸರು ಗಳಿಸಬಹುದಿತ್ತು. ಇವತ್ತಿಗೂ ಹೆಗಲಿಗೆ ಕ್ಯಾಮರಾವನ್ನು ನೇತಾಡಿಸಿಕೊಂಡು ಕುತೂಹಲದ ಸಾವಿರಾರು ಸಂಗತಿಗಳಿಗೆ ಫೋಕಸ್ ಮಾಡುವ ಆಸಕ್ತಿಯನ್ನು ಇಟ್ಟುಕೊಂಡಿರುವ ಶಾಮಣ್ಣ ಈ ಕಲೆಯ ಹಾದಿಯೊಂದರಲ್ಲೇ ನಡೆದಿದ್ದರೆ ಎಂಥ ಅದ್ಭುತ ಫೋಟೋಗ್ರಾಫರ್ ನಮಗೆ ಸಿಕ್ಕುತ್ತಿದ್ದರು!



ಪಕ್ಷಿವೀಕ್ಷಣೆ, ಶಿಕಾರಿ(ಈಗ ಅದಕ್ಕೆ ಅವಕಾಶವಿಲ್ಲವಲ್ಲ)ಗಳೂ ಶಾಮಣ್ಣನವರ ಆಸಕ್ತಿಯ ಕೇಂದ್ರಗಳೇ. ತಮ್ಮ ಆಸಕ್ತಿಯ ಹಲವು ಕೇಂದ್ರಗಳಲ್ಲಿ ಶಾಮಣ್ಣ ಹಂಚಿಹೋದರು. ಎಲ್ಲಿಯೂ ಒಂದೆಡೆ ನಿಂತು ಅವರು ಧ್ಯಾನಿಸಿದಂತೆ ಕಾಣಲಿಲ್ಲ, ಹಾಗೆ ಹೇಳಿದರೆ, 'ಎಲ್ಲಿಯೂ ನಿಲ್ಲದಿರು...' ಎಂದು ಕುವೆಂಪು ಅವರೇ ಹೇಳಿದರಲ್ಲಾ ಮಾರಾಯ್ರೆ, ಎಂದು ನಕ್ಕುಬಿಡುತ್ತಾರೆ ಈ ಶಾಮಣ್ಣ.

ಆದರೂ ಶಾಮಣ್ಣ ಗಟ್ಟಿಯಾಗಿ ಬೇರೂರಿ ನಿಂತಿರುವ ಒಂದು ಕೇಂದ್ರವಿದೆ. ಅದು ಬದುಕಿನ ಕೇಂದ್ರ. ಈ ಬದುಕು ಕೇವಲ ಬದುಕಲ್ಲ, ತತ್ವನಿಷ್ಠೆಯ ಬದುಕು; ಪ್ರಾಮಾಣಿಕತೆಯ ಬದುಕು; ಜೀವಪರ ಧೋರಣೆಯ ಬದುಕು. ಶಾಮಣ್ಣನವರ ವ್ಯಕ್ತಿತ್ವಕ್ಕೊಂದು ಪ್ರಭೆಯಿದ್ದರೆ ಅದು ಪ್ರಾಪ್ತಿಯಾಗಿರುವುದೇ ಈ ತಾತ್ವಿಕತೆಯಿಂದ, ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ.

ಶಾಮಣ್ಣ ಏನೂ ಮಾಡಲಾಗದ ಅಸಹಾಯಕತೆಯಲ್ಲಿ ಕೃಷಿಗೆ ಬಂದವರಲ್ಲ; ಬೇರೆಲ್ಲಿಯೂ ಸಲ್ಲದೆ ಹಳ್ಳಿಯನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡವರಲ್ಲ, ಗಾಂಧಿ ಮತ್ತು ಲೋಹಿಯಾ ಅವರ ಕರೆಯನ್ನು ಗಂಭೀರವಾಗಿ ಪರಿಗಣಿಸಿ ಹಳ್ಳಿಗೆ ಮರಳಿದ ಕೆಲವೇ ಕೆಲವು ತರುಣರಲ್ಲಿ ತೇಜಸ್ವಿ, ಸುಂದರೇಶ್ ಮತ್ತು ಶಾಮಣ್ಣ ಬಹಳ ಮುಖ್ಯರಾದವರು. ತಮ್ಮ ತಂದೆಯ ಆಸ್ತಿಯಿದ್ದ ಕಡಿದಾಳಿನಲ್ಲಿಯೇ ಶಾಮಣ್ಣ ಕೃಷಿಯನ್ನು ಮುಂದುವರಿಸಬಹುದಿತ್ತು, ಅಪ್ಪನ ನೆರಳಿನಲ್ಲಿಯೇ ತಮ್ಮ ಬದುಕನ್ನು ರೂಪಿಸಿಕೊಳ್ಳಬಹುದಿತ್ತು, ಆದರೆ ಶಾಮಣ್ಣನವರ ವಿಚಾರ, ಚಿಂತನೆ, ಸ್ವತಂತ್ರ ಮನೋಧರ್ಮ ಅವರನ್ನು ಹೊಸ ಪ್ರಯೋಗಕ್ಕೆ ಒಡ್ಡಿಕೊಳ್ಳುವಂತೆ ಪ್ರೇರೇಪಿಸಿದವು. ತೇಜಸ್ವಿ ಮೈಸೂರಿನಿಂದ ಚಿಕ್ಕಮಗಳೂರು ಜಿಲ್ಲೆಯ ಕಾಡಿನ ಒಂದು ಮೂಲೆಗೆ ಹೋದರೆ, ಶಾಮಣ್ಣ ಮತ್ತು ಸುಂದರೇಶ್ ಭದ್ರಾವತಿ ತಾಲ್ಲೂಕನ್ನು ಆಯ್ಕೆಮಾಡಿಕೊಂಡರು. ಈಗ ಶಾಮಣ್ಣನವರ ಭಗವತೀಕೆರೆ ಒಂದು ನಂದನವನದಂತೆ ಕಾಣಿಸಬಹುದು. ಆದರೆ ಅವರು ಈ ಪ್ರಯೋಗಕ್ಕೆ ಹೊರಟು ಕಾಡುಭೂಮಿಯನ್ನು ಕೊಂಡಾಗ ನೂರಾರು ಸಮಸ್ಯೆಗಳು ಶಾಮಣ್ಣ ಮತ್ತು ಶ್ರೀದೇವಿಯವರನ್ನು ನುಂಗುವಂತೆ ಬಾಯ್ತೆರೆದಿದ್ದವು. ಗುಡ್ಡದ ಬುಡದಲ್ಲಿದ್ದ ಈ ಜಮೀನಿಗೆ ನರಿ, ಕರಡಿ, ತೋಳ, ಕಾಡುಹಂದಿ, ಚಿರತೆ, ಕಾಡೆಮ್ಮೆ–ಹೀಗೆ ಅನೇಕ ಕಾಡುಪ್ರಾಣಿಗಳ ಕಾಟ. ನೀರಿನ ಆಸರೆಯೊಂದೆ ಇದ್ದದ್ದು. ಒಂಟಿ ಮನೆ; ಸುಂದರೇಶ್ ಇದ್ದದ್ದು ಇನ್ನೊಂದು ಮೂಲೆ. ಶಿವಮೊಗ್ಗ ಹತ್ತಿರದಂತೆ ಕಾಣಿಸಿದರೂ ಹತ್ತಿರವಲ್ಲ, ಕೂಲಿಯಾಳುಗಳು ಸಿಕ್ಕುವ ಕಷ್ಟ. ವಿದ್ಯುತ್ ಇಲ್ಲದ ಗೋಳು. ಬಸ್ಸು ಕಾರುಗಳು ಬರುವುದಕ್ಕೂ ರಸ್ತೆಯಿಲ್ಲದ ಪರಿಸ್ಥಿತಿ. ತಮ್ಮ ಜಮೀನಿನಲ್ಲಿಯೇ ಗುಡಿಸಲೊಂದನ್ನು ಕಟ್ಟಿಕೊಂಡ ಶಾಮಣ್ಣ–ಶ್ರೀದೇವಿಯವರದು ಎಂಥ ಹೋರಾಟದ ಬದುಕು. ಮಕ್ಕಳ ವಿದ್ಯಾಭ್ಯಾಸಕ್ಕೂ ಇವರು ಹೋರಾಡಿದ ಪರಿ ಇವತ್ತಿಗೂ ಕಣ್ಣಿಗೆ ಕಟ್ಟುತ್ತದೆ.

ಶಾಮಣ್ಣ ಲೋಹಿಯಾ ವಿಚಾರಧಾರೆಯಿಂದ ಪ್ರಭಾವಿತರಾದ, ನಿಜವಾದ ಅರ್ಥದ ಸಮಾಜವಾದಿ. ಗೋಪಾಲಗೌಡರನ್ನು ಹತ್ತಿರದಿಂದ ಬಲ್ಲ ಅವರ ಒಡನಾಡಿ. ತೀರ್ಥಹಳ್ಳಿ ಸಮೀಪದ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದ ಶಾಮಣ್ಣ ಅದನ್ನು ಬಿಟ್ಟುಕೊಟ್ಟು ಕೃಷಿಯನ್ನ ಆಯ್ದುಕೊಂಡವರು. ಗೋಪಾಲ ಗೌಡರನ್ನು ಅವರ ಸಿದ್ಧಾಂತಕ್ಕಾಗಿ ಪ್ರೀತಿಸಿದವರು. ಗೌಡರ ಮಾತುಗಳನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದವರು. 'ಅತ್ತ ನೌಕರಿಯೂ ಮಾಡಿ, ಇತ್ತ ಕೃಷಿಯನ್ನೂ ಮಾಡುತ್ತೇನೆಂದು ಹೊರಡುವುದು ಸರಿಯಲ್ಲ' ಎಂದು ಹೇಳುತ್ತಿದ್ದ ಗೋಪಾಲ ಗೌಡರ ಮಾತು ಶಾಮಣ್ಣನವರ ಹೃದಯಕ್ಕೆ ಮುಟ್ಟಿದ್ದೇ ಅವರು ನೌಕರಿ ಬಿಡುವುದರ ಹಿಂದಿನ ಒತ್ತಡವಾಯಿತು.

'ಸಮಾಜವಾದಿ ಯುವಜನ ಸಭಾ'ದ ಸಕ್ರಿಯ ಸದಸ್ಯರಾಗಿ (ಶಾಮಣ್ಣ, ತೇಜಸ್ವಿ, ಸುಂದರೇಶ್, ನಂಜುಂಡಸ್ವಾಮಿ ಮೊದಲಾದವರು) ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ನೋಡಿದವರು. ಈ ಗುಂಪು ನಡೆಸಿದ ಸರಳ ಮದುವೆಗಳು, ಕಪ್ಪು ಬಾವುಟ ಪ್ರದರ್ಶನದ ಪ್ರತಿಭಟನೆಗಳಿಗೆ ಲೆಕ್ಕವೇ ಇಲ್ಲ. ತಮ್ಮ ಬಂಧುವೂ, ಆಗಿನ ಮುಖ್ಯಮಂತ್ರಿಯೂ ಆಗಿದ್ದ ಕಡಿದಾಳ್ ಮಂಜಪ್ಪನವರ ವಿರುದ್ಧವೇ ಕಪ್ಪು ಬಾವುಟ ಪ್ರದರ್ಶಿಸಿ ಅವರ ಮಕ್ಕಳ ವಿವಾಹವನ್ನು ಸರಳವಾಗಿ ಮಾಡಬೇಕೆಂದು ಒತ್ತಾಯಿಸಿದ ಸಾಹಸವನ್ನೂ ಈ ಗುಂಪು ಮಾಡಿತ್ತು. ಇಂಥ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನೇಕ ತೊಂದರೆಗಳನ್ನು ಅನುಭವಿಸಿದವರು ಶಾಮಣ್ಣ, ತೇಜಸ್ವಿ ಮತ್ತು ಸುಂದರೇಶ್ ಮೊದಲಾದವರು. ಮಂತ್ರಮಾಂಗಲ್ಯ ಮದುವೆಗೆ ಎಲ್ಲಿಂದಲೇ ಆಮಂತ್ರಣ ಬರಲಿ ಅದಕ್ಕೆ ತಮ್ಮೆಲ್ಲ ಕೆಲಸಗಳನ್ನು ಬದಿಗೆ ಸರಿಸಿ, ಹಲವಾರು ತೊಂದರೆಗಳನ್ನು ಸಹಿಸಿ ಈ ಶಾಮಣ್ಣ ಮತ್ತು ಸುಂದರೇಶ್ ಓಡುತ್ತಿದ್ದುದು ಆ ಸಿದ್ಧಾಂತದ ಬಗೆಗೆ ಅವರಿಗಿದ್ದ ನಿಷ್ಠೆಯಿಂದಾಗಿ.

1980ರ ದಶಕದಲ್ಲಿ ಕರ್ನಾಟಕ ರಾಜ್ಯ ರೈತಸಂಘ ಅಸ್ತಿತ್ವಕ್ಕೆ ಬಂದಾಗ ಅದರ ಆಧಾರಸ್ತಂಭಗಳಲ್ಲಿ ಶಾಮಣ್ಣ ಮುಖ್ಯರು. ಅದರೆಂದೂ ವೇದಿಕೆಯನ್ನು ಹತ್ತಿ ಭಾಷಣ ಮಾಡಲಿಲ್ಲ, ಅವರದೇನಿದ್ದರೂ ವೇದಿಕೆಯ ಕೆಳಗೆ, ಜನರ ಜೊತೆಗಿನ ಒಡನಾಟದಲ್ಲಿ, ಹೋರಾಟದಲ್ಲಿ ಅರಳುತ್ತಿದ್ದ ಕ್ರಿಯಾಶೀಲತೆ. ಆಗ ಹಗಲು ರಾತ್ರಿಗಳನ್ನು ಲೆಕ್ಕಿಸದೆ ರೈತ ಚಳವಳಿಯಲ್ಲಿ ಶಾಮಣ್ಣ ತಮ್ಮನ್ನು ತೊಡಗಿಸಿಕೊಂಡ ಕಾರಣ ಅವರು ಅನುಭವಿಸಿದ ತೊಂದರೆ ಅಪಾರ. ಅವರ ವೈಯಕ್ತಿಕ ಕೃಷಿ ಚಟುವಟಿಕೆಗಳು ಅಸ್ತವ್ಯಸ್ತವಾದವು; ಅವರ ಆರೋಗ್ಯವೂ ಗಣನೀಯ ಪ್ರಮಾಣದಲ್ಲಿ ತೊಂದರೆಗೊಳಗಾಯಿತು. ಹಣಕಾಸಿನ ತೊಂದರೆ. ಹಲವರ ವಿರೋಧ. ಊಟ ನಿದ್ರೆಗಳಿಲ್ಲದ ಓಡಾಟ. ಇಷ್ಟಾದರೂ ಶಾಮಣ್ಣ ಎಂದೂ ಸಿಟ್ಟಿಗೆದ್ದವರಲ್ಲ, ಇನ್ನೊಬ್ಬರನ್ನು ದೂರಿದವರಲ್ಲ, ತಾವು ನಂಬಿದ ತತ್ವಗಳಿಂದ ದೂರಸರಿದವರಲ್ಲ, ಹಾಗೆ ದೂರ ಸರಿದವರ ವಿರುದ್ಧ ಗಟ್ಟಿ ಧ್ವನಿ ಎತ್ತಿದರೂ ಎಂದೂ ಅದು ವೈಯಕ್ತಿಕ ನಿಂದೆಯಾಗುತ್ತಿರಲಿಲ್ಲ, ಅವರ ಹಾಸ್ಯಪ್ರವೃತ್ತಿ ಎಲ್ಲವನ್ನೂ ತನ್ನೊಳಗೆ ನುಂಗಿಕೊಳ್ಳುವಂತೆ ಮಾಡುತ್ತಿತ್ತು, ರೈತ ಸಂಘದಿಂದಲೇ ಶಾಮಣ್ಣನವರನ್ನು ಉಚ್ಚಾಟಿಸುವ ಹುನ್ನಾರವೊಂದು ನಡೆದಾಗಲೂ ಶಾಮಣ್ಣ ಕಂಗೆಟ್ಟವರಲ್ಲ, ಉದ್ವೇಗವಿಲ್ಲದೆ ರೈತ ಸಂಘದ ಉಚ್ಚಾಟನೆಯನ್ನು ಒಪ್ಪಿಕೊಂಡು ತಣ್ಣಗೆ ಹೊರನಡೆದವರು ಈ ಶಾಮಣ್ಣ, ಮುಂದೆ ತಾವು ಮಾಡಿದ್ದು ತಪ್ಪು ಎಂದು ರೈತ ಮುಖಂಡರಿಗೆ ಅನಿಸಿದಾಗಲೂ ಶಾಮಣ್ಣ ಆ ಬಗ್ಗೆ ತಲೆಕೆಡಿಸಿ ಕೊಳ್ಳದೆ ರೈತಹಿತವನ್ನೇ ಸದಾ ಧ್ಯಾನಿಸಿದವರು. ರೈತರ ವಿಚಾರಗಳನ್ನು, ರೈತ ಸಂಘದ ಚಟುವಟಿಕೆಗಳ ಮಾಹಿತಿಯನ್ನು ರಾಜ್ಯದ ಎಲ್ಲ ಜನರಿಗೆ ತಲುಪಿಸುವ ಏಕೈಕ ಉದ್ದೇಶದಿಂದಲೇ ಅವರು ಲಂಕೇಶ್ ಪತ್ರಿಕೆಗೆ ವರದಿಗಳನ್ನು ಬರೆಯುವ ಅಭ್ಯಾಸವನ್ನು ಮಾಡಿಕೊಂಡಿದ್ದರು. ಲಂಕೇಶ್ ಪತ್ರಿಕೆಗೆ ಅದ್ಭುತವಾದ ಫೋಟೋಗಳನ್ನು ಕೂಡಾ ಅವರು ನೀಡಿದ್ದರು. ಇದೇ ಹಲವರ ಕಣ್ಣುರಿಗೆ ಕಾರಣವಾಗಿತ್ತು.

ಕೃಷಿಕನಾಗಿ, ಹಳ್ಳಿಯನ್ನು ಕೇಂದ್ರ ಮಾಡಿಕೊಂಡ ಸಮಾಜವಾದಿ ಶಾಮಣ್ಣ ಮಾಡಿದ, ಮಾಡುತ್ತಿರುವ ಕೆಲಸಗಳು ಲೆಕ್ಕವಿಲ್ಲದಷ್ಟು. ತಮ್ಮ ಸುತ್ತಲಿನ ಬಡಕೂಲಿಕಾರರ ಬದುಕನ್ನು ಹಸನು ಮಾಡಲು ಅವರು ಅನೇಕ ಚಳವಳಿಗಳನ್ನು ತಮ್ಮ ವ್ಯಾಪ್ತಿಯ ಮಿತಿಯಲ್ಲಿಯೇ ಮಾಡಿದರು, ಅವರು ರೂಪಿಸಿದ ಮದ್ಯಪಾನ ವಿರೋಧ ಚಳವಳಿಯಲ್ಲಿ ಕೃಷಿ ಕಾರ್ಮಿಕ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಇರುತ್ತಿದ್ದರು. ಶ್ರೀದೇವಿಯವರೇ ಈ ಚಳವಳಿಯ ನೇತೃತ್ವವಹಿಸಿದ್ದರು. ನಿರ್ಮಲ ಕರ್ನಾಟಕ ಯೋಜನೆಯ ಲಾಭ ಈ ಕಾರ್ಮಿಕರಿಗೆ ಸಿಕ್ಕಬೇಕೆಂದು ಬಯಸಿದ ಶಾಮಣ್ಣ ಕಕ್ಕಸು ಕಟ್ಟಿಸುವಂತೆ ಹಲವರನ್ನು ಪ್ರೇರೇಪಿಸುವ ಕೆಲಸದಲ್ಲಿ ತೊಡಗಿದ್ದರು. ಅದಕ್ಕಾಗಿ ಆಗಿನ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವ ಎಂ.ಪಿ.ಪ್ರಕಾಶ್ ಅವರ ಬಳಿಗೆ ಓಡಾಡಿದವರು. ತಮ್ಮ ಮನೆಯ ಸಮೀಪದಲ್ಲಿಯೇ ಒಂದು ಶಾಲೆಯನ್ನು ಮಾಡಿ ಹಿಂದುಳಿದ ಬಡವರು ಮತ್ತು ಕೃಷಿಕಾರ್ಮಿಕರ ಮಕ್ಕಳು ಈ ಶಾಲೆಯಲ್ಲಿ ಓದಲೆಂದು ಬಯಸಿದರು. ತಮ್ಮ ಸುತ್ತಮುತ್ತಲಿನ ಅವಿದ್ಯಾವಂತರಿಗೆ ಅಕ್ಷರ ಹೇಳಿಕೊಡುವುದಕ್ಕಾಗಿ ಶ್ರೀದೇವಿ ಮತ್ತು ಶಾಮಣ್ಣ ಲಾಟೀನು ಹಿಡಿದು ರಾತ್ರಿಶಾಲೆಯನ್ನು ನಡೆಸಿದ್ದೂ ಇದೆ. ಮೌಢ್ಯಗಳ ವಿರುದ್ಧವೂ ಶಾಮಣ್ಣ ಅನೇಕ ರೀತಿಯ ಹೋರಾಟವನ್ನು ಮಾಡಿದರು. ತಮ್ಮ ಸುತ್ತಮುತ್ತಲಿನ ಎಳೆಯ ತಲೆಮಾರಿನಲ್ಲಿ ಪ್ರತಿಭಾವಂತರು ಕಾಣಿಸಿದರೆ ಅವರನ್ನು ಪ್ರೋತ್ಸಾಹಿಸುವುದಕ್ಕಾಗಿ ಅವರು ಮಾಡಿದ ಕೆಲಸಗಳೂ ಹಲವಾರು. ಅನೇಕರಿಗೆ ಫೋಟೋಗ್ರಫಿ ಹೇಳಿಕೊಟ್ಟರು. ಹಾಡುವ ಸಾಮರ್ಥ್ಯವಿದ್ದ ಮಕ್ಕಳಿಗೆ ತಾವೇ ಸ್ವಲ್ಪ ತರಬೇತಿಕೊಟ್ಟು, ತಮ್ಮ ವಾಹನದಲ್ಲಿಯೇ ಅಂಥ ಮಕ್ಕಳನ್ನು ಕರೆದುಕೊಂಡು ಶಿವಮೊಗ್ಗ ಮೊದಲಾದ ಊರುಗಳನ್ನು ಸುತ್ತಿ ಆ ಪ್ರತಿಭೆಗಳನ್ನು ವೇದಿಕೆ ಹತ್ತಿಸಿದವರು. ಗ್ರಾಮಾಂತರ ಪ್ರದೇಶದ ಜನರಿಗೂ ಅಗತ್ಯ ಸೌಲಭ್ಯಗಳು ಸಿಕ್ಕಬೇಕೆಂದು ವಾದಿಸುತ್ತ ಅದಕ್ಕಾಗಿ ಅಗತ್ಯ ಬಂದಾಗಲೆಲ್ಲ ಹೋರಾಡಿದವರು.

ಶಾಮಣ್ಣ ಫೋಟೋಗ್ರಫಿಯ ಬಗ್ಗೆ ತಲೆಕೆಡಿಸಿಕೊಂಡದ್ದು ನೆನೆದಾಗ ನಗು ಬರುತ್ತದೆ. ತಮ್ಮ ಮನೆಯ ಒಂದು ಕೋಣೆಯನ್ನ ರಾತ್ರಿಯ ಹೊತ್ತು ಡಾರ್ಕ್ ರೂಂ ಮಾಡಿದ್ದರು. ಅಲ್ಲಿ ನಾವೆಲ್ಲ ಇಡೀ ರಾತ್ರಿ ನೆಗೆಟಿವ್‌ಗಳನ್ನು ಪ್ರಿಂಟ್ ಹಾಕುತ್ತಿದ್ದೆವು. ಬಾಗಿಲು ಮುಚ್ಚುವುದು, ಕಿಟಕಿಗಳಿಗೆ ಬೆಡ್‌ಶೀಟ್ ಹೊದಿಸಿ ಬೆಳಕು ಬರದಂತೆ ಮಾಡಿ ಶಾಮಣ್ಣನವರೇ ರೂಪಿಸಿದ ಎನ್‌ಲಾರ್ಜರ್ ಮೊದಲಾದ ಸ್ಥಳೀಯ ಉಪಕರಣಗಳನ್ನು ಬಳಸಿ, ಅವುಗಳ ಅತ್ಯುತ್ತಮ ಪ್ರಯೋಜನ ಪಡೆಯುವಂತೆ ಇಡೀ ರಾತ್ರಿ ಪ್ರಿಂಟ್‌ಹಾಕಿ ಬೆಳಗಿನ ನಾಲ್ಕು ಗಂಟೆಗೋ, ಐದು ಗಂಟೆಗೋ ಮಲಗುತ್ತಿದ್ದೆವು. ಬೆಳಗ್ಗೆ ಎದ್ದು ನೋಡಿದರೆ ನಮ್ಮ ಸುತ್ತ ಒಣಗಲು ಹಾಕಿದ್ದ ಪ್ರಿಂಟ್‌ಗಳೇ. ರಾತ್ರಿ ಶಾಮಣ್ಣ ಹಾಡುವುದು, ಸರೋದ್ ಬಾರಿಸುವುದು, ತಬಲಾ ನುಡಿಸುವುದು ಇತ್ಯಾದಿ ಎಲ್ಲವೂ ಮುಗಿದ ಮೇಲೆ ರಾತ್ರಿ 10 ರ ಸುಮಾರಿಗೆ ಊಟ; ಅದರ ನಂತರ ನಮ್ಮ ಡಾರ್ಕ್ ರೂಂ. ಎಂಥ ದಿನಗಳು ಅವು!

ಶಾಮಣ್ಣನವರಿಗೆ ಪಕ್ಷಿವೀಕ್ಷಣೆ ಒಂದು ಹವ್ಯಾಸವಲ್ಲ. ತಮ್ಮ ತೋಟಕ್ಕೆ ಬರುವ ಪ್ರತಿಯೊಂದು ಹಕ್ಕಿ, ಅದು ಗೂಡುಕಟ್ಟುವ ವಿಧಾನ, ಮರಿಮಾಡುವುದು, ಹಾಡುವುದು ಎಲ್ಲವನ್ನೂ ಅವರು ಅತ್ಯಂತ ಶ್ರದ್ಧೆಯಿಂದ ಅಪಾರ ಕುತೂಹಲದಿಂದ ನೋಡುತ್ತಿದ್ದರು. ತಮ್ಮ ಮನೆಗೆ ಅತಿಥಿಗಳಾಗಿ ಬಂದ ಆಸಕ್ತ ಮಿತ್ರರೂ ಅದರಲ್ಲಿ ತೊಡಗುವಂತೆ ಮಾಡುತ್ತಿದ್ದರು. ತಮ್ಮ ಸುತ್ತಲಿನ ಎಲ್ಲ ಜೀವಿಗಳನ್ನೂ, ಗಿಡಮರಗಳನ್ನೂ ಅವರು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದರು. ಅವರ ಮನೆಯ ನಾಯಿಗಳಂತೂ ದೊಡ್ಡ ಕಾವಲು ಪಡೆಯಂತೆ ಕಾರ್ಯನಿರ್ವಹಿಸುತ್ತಿದ್ದವು. ಒಂದು ನಾಯಿಗಂತೂ ಗುಂಡ ಎಂದು (ಆಗಿನ ಮುಖ್ಯಮಂತ್ರಿ ಗುಂಡೂರಾವ್) ಹೆಸರಿಟ್ಟು ಪ್ರೀತಿಯಿಂದ ಕರೆಯುತ್ತಿದ್ದರು.

ಕಳ್ಳಬಟ್ಟಿಯನ್ನು ಕುಡಿದು ಅನೇಕರು, ವಿಶೇಷವಾಗಿ ಬಡವರು ಸಾಯುತ್ತಿದ್ದಾಗಲೆಲ್ಲ ಶಾಮಣ್ಣ ಬಹಳ ನೊಂದುಕೊಳ್ಳುತ್ತಿದ್ದರು. ಈ ಸರ್ಕಾರ ಮದ್ಯಪಾನವನ್ನು ನಿಷೇಧಿಸಬೇಕು, ಇಲ್ಲದಿದ್ದರೆ ಒಳ್ಳೆಯ ಮದ್ಯವನ್ನಾದರೂ ಬಡವರಿಗೆ ಒದಗಿಸಬೇಕು ಎಂದು ಹೇಳುತ್ತಿದ್ದರು. ಮನೆ ಮದ್ಯದ ಪ್ರಸ್ತಾಪವೂ ಆಗಾಗ ಬರುತ್ತಿತ್ತು.

ಬಟ್ಟಿ ಇಳಿಸುವುದರಲ್ಲಿ ನಿಷ್ಣಾತನಾಗಿದ್ದ ಒಬ್ಬ ಲಂಬಾಣಿಯ ಮುದುಕ ಶಾಮಣ್ಣನವರ ಹತ್ತಿರದ ಕಾಲೋನಿಯಲ್ಲಿ ಬದುಕುತ್ತಿದ್ದ. ಮದ್ಯಪಾನ ವಿರೋಧಿಯಾಗಿದ್ದ ಶಾಮಣ್ಣ ಈ ಮುದುಕನ ಪರಿಣತಿಯನ್ನು ನಮಗೆ ತೋರಿಸುವುದಕ್ಕಾಗಿಯೇ ಒಂದು ರಾತ್ರಿ ತಮ್ಮ ತೋಟದ ಒಂದು ಮೂಲೆಯಲ್ಲಿ ಅಡಿಕೆ ಬೇಯಿಸುವ ಒಲೆಯನ್ನು ಬಳಸಿ ಸರಾಯಿ ತಯಾರಿಸಲು ಆ ಮುದುಕನಿಗೆ ಹೇಳಿದ್ದರು. ನಾವೆಲ್ಲ ತಯಾರಿಕೆಯ ವೈಭವವನ್ನು ಮಧ್ಯರಾತ್ರಿಯ ನಂತರ ವೀಕ್ಷಿಸಿದೆವು. ಆಹಾ! ಅದೆಂಥ ಅದ್ಭುತ ಮದ್ಯ! ಆ ಮುದುಕ ಎಂಥ ಪರಿಣತ! ರುಚಿ ನೋಡುವವರು ಯಾರೂ ನಮ್ಮಲ್ಲಿ ಇರಲಿಲ್ಲವಾಗಿ ಒಂದು ಬಾಟಲಿಯಲ್ಲಿ ಅದನ್ನು ತುಂಬಿಸಿ, ಉಳಿದದ್ದನ್ನು ತೆಗೆದುಕೊಂಡು ಹೋಗಲು ಆ ಮುದುಕನಿಗೆ ಪರವಾನಗಿ ನೀಡಿದ ಶಾಮಣ್ಣ ಮುಂದೊಮ್ಮೆ ಪ್ರೊ.ನಂಜುಂಡಸ್ವಾಮಿಯವರು ಬಂದಾಗ ಅದನ್ನವರಿಗೆ ನೀಡಿದರು. ನಂಜುಂಡಸ್ವಾಮಿ ಅದರ ಘಾಟಿಗೆ, ಸ್ವಾದಕ್ಕೆ ಮನಸೋತರಾದರೂ ಆ ಮದ್ಯವನ್ನು ಮತ್ತೆ ತಯಾರಿಸಲು ಶಾಮಣ್ಣ ಆ ಮುದುಕನಿಗೆ ಅನುಮತಿ ನೀಡಲಿಲ್ಲ.

ಎಷ್ಟೊಂದು ಪ್ರಯೋಗಗಳು, ಎಂಥ ಜೀವನಪ್ರೀತಿ, ಎಂಥ ತತ್ವನಿಷ್ಠೆ! ಹಲವು ಕೇಂದ್ರಗಳಲ್ಲಿ ಹಂಚಿಹೋದ ಶಾಮಣ್ಣ ತಮ್ಮ ಬದುಕಿನ ಕೇಂದ್ರದಲ್ಲಿ ಎಷ್ಟು ಅಗಾಧವಾಗಿ ಬೆಳೆದರು! ಎಂಥ ಅದ್ಭುತ ವ್ಯಕ್ತಿತ್ವವನ್ನು ಕಟ್ಟಿಕೊಂಡರು!


(ಮುಂದುವರೆಯುವುದು)

ಭ್ರಷ್ಟಾಚಾರದ ನೆಪದಲ್ಲೊಂದು ಭ್ರಮೆಯ ದರ್ಶನ!



• ಗೌರಿ ಲಂಕೇಶ್
editorlankesh@gmail.com

ಕಳೆದ ಶುಕ್ರವಾರ ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಆಂದೋಲನದ ಪರವಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿದ್ದ ಪ್ರತಿಭಟನೆಗೆ ಹೋಗಿದ್ದೆ. ಅಲ್ಲಿ ಕಂಡದ್ದು ನನ್ನಲ್ಲಿ ಅಚ್ಚರಿ ಮೂಡಿಸಿತು. ಮೊದಲನೆಯದಾಗಿ ನಾನು ಇಲ್ಲಿಯತನಕ ಭಾಗವಹಿಸಿರುವ ಯಾವ ಪ್ರತಿಭಟನೆಯಲ್ಲೂ ಅಷ್ಟು ಅದ್ದೂರಿಯಾದ ಶಾಮಿಯಾನ ಹಾಕಿಸಿದ್ದನ್ನು



ನೋಡಿರಲಿಲ್ಲ. ಎರಡನೆಯದಾಗಿ ಇಲ್ಲಿಯತನಕ ಯಾವ ಪ್ರತಿಭಟನೆಯಲ್ಲಾಗಲಿ, ವಿಚಾರಸಂಕಿರಣದಲ್ಲಾಗಲಿ ಎಂದೂ ಕಂಡಿರದಿದ್ದ ಜನ ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ಸೇರಿದ್ದರು. ಹೊರಗಡೆ ನೂರಾರು ಕಾರುಗಳು ಮತ್ತು ಬೈಕುಗಳು ನಿಂತಿದ್ದವು.

ಅಲ್ಲಿ ತರಹೇವಾರಿ ಜನ ಸೇರಿದ್ದರು. ಐಟಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಟೆಕ್ಕಿಗಳು, ಖಾಸಗಿ ಕಂಪನಿಗಳಲ್ಲಿ ದುಡಿಯುತ್ತಿರುವ ಮಧ್ಯಮ ಮತ್ತು ಮೇಲು ಮಧ್ಯಮ ವರ್ಗದವರು, ಉನ್ನತ ಕಾಲೇಜುಗಳ ವಿದ್ಯಾರ್ಥಿಗಳು, ಹೈಸೊಸೈಟಿ ಯುವರು, ಎನ್‌ಜಿಓಗಳ ಮೂಲಕ ಸಾಮಾಜಿಕ ಬದಲಾವಣೆ ತರುತ್ತಿರುವವರು... ಅಲ್ಲಿದ್ದ ಬಹಳಷ್ಟು ಮಂದಿ ಸುಶಿಕ್ಷಿತ ರಾಗಿದ್ದರು. ಅವತ್ತು ಎಷ್ಟೇ ಹುಡುಕಿದರೂ ಅಲ್ಲೊಬ್ಬ ಬಡವನಾಗಲಿ, ಸ್ಲಂ ನಿವಾಸಿಯಾಗಲಿ ನನ್ನ ಕಣ್ಣಿಗೆ ಬೀಳಲೇ ಇಲ್ಲ! ಭ್ರಷ್ಟಾಚಾರ ಎಂಬ ಪೀಡೆ ನಮ್ಮ ಸಮಾಜದ ಕೆಳಸ್ತರದಲ್ಲಿರುವ ಬಡವರಿಗೆ ಸಂಬಂಧಿಸಿದ್ದೇ ಅಲ್ಲವೇನೋ ಎನ್ನಿಸುವಂತಿತ್ತು ಅಲ್ಲಿ ನೆರೆದಿದ್ದ ಜನ ಸಮೂಹವನ್ನು ನೋಡಿದರೆ...

ಅಂದಮಾತ್ರಕ್ಕೆ ಅಲ್ಲಿದ್ದ ಜನರಿಗೆ ಭ್ರಷ್ಟಾಚಾರವನ್ನು ಬಡಿದೋಡಿಸುವ ಆಶೆ ಇರಲಿಲ್ಲ ಎಂದಲ್ಲ. ಆ ಬಗ್ಗೆ ಅವರಲ್ಲಿ ಅಪಾರ ಕಾಳಜಿ ಇದ್ದದ್ದು ನಿಜ. ಆದರೆ ಇವತ್ತು ಭ್ರಷ್ಟಾಚಾರ ಎಂದರೆ ಬರೀ ಲಂಚಕ್ಕೆ ಸಂಬಂಧಿಸಿದ್ದೇ? ಇವತ್ತಿನ ಆರ್ಥಿಕ ನೀತಿಗಳಿಗೂ ಏರುತ್ತಿರುವ ಕೋಟಿಕೋಟಿ ರೂಪಾಯಿಗಳ ಹಗರಣಗಳಿಗೂ ಇರುವ ಸಂಬಂಧದ ಬಗ್ಗೆ ಅಲ್ಲಿದ್ದ ಜನರಲ್ಲಿ ಎಷ್ಟು ಅರಿವಿತ್ತು? ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವ ಸರ್ಕಾರದ ಖಾಸಗೀಕರಣ- ಉದಾರೀಕರಣ- ಜಾಗತೀಕರಣ ಪರವಾದ ನಿಲುವು ಗಳಿಂದಾಗಿ ನಮ್ಮ ದೇಶದ ಬಡಜನರ ಬದುಕೇ ಮೂರಾಬಟ್ಟೆ ಯಾಗುತ್ತಿರುವ ಬಗ್ಗೆ ಅಲ್ಲಿದ್ದ ಜನರಲ್ಲಿ ಎಷ್ಟು ಕಾಳಜಿ ಇತ್ತು? ರತನ್ ಟಾಟಾ ಮತ್ತು ಇನ್ಫೋಸಿಸ್ ನಾರಾಯಣ ಮೂರ್ತಿ ತರಹದ ಉದ್ಯಮಿಗಳನ್ನೇ ತಮ್ಮ ಆರಾಧ್ಯ ದೈವಗಳನ್ನಾಗಿಸಿ ಕೊಂಡಿರುವ ಆ ವರ್ಗದ ಜನರಲ್ಲಿ ಬಂಗಾಲದ ಸಿಂಗೂರಿನ ರೈತರ ಭೂಮಿಯನ್ನು ಕಸಿದುಕೊಳ್ಳಲು ಟಾಟಾ ಯತ್ನಿಸಿದ ಬಗ್ಗೆಯಾಗಲಿ, ಇನ್ಫೋಸಿಸ್ ಎಂಬ ಕೋಟ್ಯಾಧಿಪತಿಗಳ ಕಂಪನಿ ತಾನು ಖರೀದಿಸಿರುವ ಸಾವಿರಾರು ಎಕರೆ ಭೂಮಿಗೆ ಎಲ್ಲರಂತೆ ಭೂಕಂದಾಯ ಕಟ್ಟುವುದರಿಂದ ರಾಜ್ಯ ಸರ್ಕಾರದಿಂದ ವಿಶೇಷ ರಿಯಾಯಿತಿ ಪಡೆದಿರುವ ಬಗ್ಗೆಯಾಗಲಿ ಗೊತ್ತೇ? ಅದೆಲ್ಲ ಅವರಿಗೆ ಭ್ರಷ್ಟಾಚಾರದಂತೆ ಕಾಣಿಸುವುದಿಲ್ಲವೇಕೆ? ಇವರೆಲ್ಲ ಯಾರ ಮತ್ತು ಯಾವ ತರಹದ ಭ್ರಷ್ಟಾಚಾರದ ವಿರುದ್ಧ ಸ್ಲೋಗನ್‌ಗಳನ್ನು ಕೂಗುತ್ತಿದ್ದಾರೆ? ಅಣ್ಣಾ ಹಜಾರೆ ಅವರು ಒತ್ತಾಯಿಸು ತ್ತಿರುವ ಲೋಕಪಾಲ್ ಮಸೂದೆಯ ಮೂಲಕವೇ ಭಾರತದಿಂದ ಭ್ರಷ್ಟಾ ಚಾರವನ್ನು ಒದ್ದೋಡಿಸಬಹುದು ಎಂಬ ಭ್ರಮೆ ಇವರಲ್ಲಿ ಮೂಡಿದೆ ಯಲ್ಲ? ಎಂದೆಲ್ಲ ಯೋಚಿಸುತ್ತಾ ಕೂತಿದ್ದೆ...

ದೇಶದ ಎಲ್ಲಾ ಟಿವಿ ಚಾನೆಲ್ ಗಳಂತೆ ನಮ್ಮ ಕನ್ನಡ ಟಿವಿ ಚಾನೆಲ್ ಗಳೂ ಈ 'ಸಂಗ್ರಾಮ'ವನ್ನು ಲೈವ್‌ಆಗಿ ಪ್ರಸಾರ ಮಾಡುತ್ತಿದ್ದವು. ಅಷ್ಟೇ ಅಲ್ಲ, ಕೆಲವು ಟಿವಿ ಚಾನೆಲ್ ನವರು ತಾವೇ ಈ ಸಂಗ್ರಾಮಕ್ಕೆ ಕರೆ ಕೊಟ್ಟಿರುವಂತೆ ಮತ್ತು ಅದಕ್ಕೆ ಸ್ಪಂದಿಸಿಯೇ ಫ್ರೀಡಂಪಾರ್ಕಿನಲ್ಲಿ ಜನಸಾಗರ ಸೇರುತ್ತಿರುವಂತೆ ವರದಿ ಮಾಡುತ್ತಿದ್ದವು. ಕೆಲ ಟಿವಿ ವರದಿಗಾರರು ಭ್ರಷ್ಟಾಚಾರದ ವಿರುದ್ಧದ ಸ್ಲೋಗನ್‌ಗಳಿರುವ ವಿಶೇಷವಾದ ಟೀಶರ್ಟ್‌ಗಳನ್ನು ಧರಿಸಿ ತಮ್ಮ ಓಬಿ ವ್ಯಾನ್‌ಗಳಿಗೂ ವಿಶೇಷ ಅಲಂಕಾರ ಮಾಡಿಸಿದ್ದರು! ಒಟ್ಟಾರೆ ಇದೊಂದು ಗಂಭೀರ ಹೋರಾಟದಂತಿರದೆ ಒಂದು ಜಾತ್ರೆಯ ರೂಪ ಪಡೆದಿತ್ತು.

ನನ್ನನ್ನು ನೋಡಿ ಟಿವಿ ವರದಿಗಾರ್ತಿಯೊಬ್ಬಳು ನನ್ನ ಅಭಿಪ್ರಾಯವನ್ನು ಕೇಳಲು ಬಂದಳು. "ಈ ಆಂದೋಲನದ ಬಗ್ಗೆ ನಿಮಗೇನನ್ನಿಸುತ್ತದೆ?" ಎಂದು ಆಕೆ ಸಂಭ್ರಮದಿಂದ ಕೇಳಿದಳು.

"ಇಲ್ಲಿ ಸೇರಿರುವ ಬಹಳಷ್ಟು ಜನ ಮೊದಲ ಬಾರಿಗೆ ಬಂದು ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದಾರೆ. ಅವರನ್ನೆಲ್ಲ ತಮ್ಮ ತಮ್ಮ ಆಫೀಸುಗಳಿಂದ, ಮನೆಗಳಿಂದ, ಐಶಾರಾಮಿ ಕೊಠಡಿಗಳಿಂದ ಈ ಹೋರಾಟವಾದರೂ ಹೊರತಂದಿರುವುದು, ಪ್ರತಿಭಟಿಸುವಂತೆ ಮಾಡಿರುವುದು ಒಳ್ಳೆಯ ಬೆಳವಣಿಗೆ. ಈ ಕಾರಣಕ್ಕಾದರೂ ಅವರೆಲ್ಲ ಇನ್ನುಮುಂದೆ ಯಾವುದಾದರೂ ಪ್ರತಿಭಟನೆ ನಡೆಯುತ್ತಿದ್ದರೆ ಅದರಿಂದ ಆಗುವ ಟ್ರಾಫಿಕ್ ಜಾಮ್‌ನ ಬಗ್ಗೆ ಕಿಡಿಕಾರುವ ಬದಲು ಆ ಪ್ರತಿಭಟನೆಗೆ ಕಾರಣವೇನೆಂದು ಚಿಂತಿಸುವಂತಾದರೆ ಅದೂ ಒಂದು ಯಶಸ್ಸು" ಎಂದೆ.

ನನ್ನ ಉತ್ತರದಿಂದ ಆಕೆಗೆ ನಿರಾಶೆ ಆಯಿತು ಅನಿಸುತ್ತದೆ. ಅದಕ್ಕೆ ಆ ಯುವ ವರದಿಗಾರ್ತಿ "ಇಲ್ಲ, ಲೋಕಪಾಲ್ ಮಸೂದೆಯಿಂದಾಗಿ ಭ್ರಷ್ಟಾಚಾರ ನಿರ್ಮೂಲನ ಆಗುತ್ತದೆ ಎಂದು ನಿಮಗೆ ಅನ್ನಿಸುವುದಿಲ್ಲವೇ?" ಎಂದು ಕೇಳಿದಳು.

"ಇಲ್ಲ, ಈ ಮಸೂದೆಯಿಂದಾಗಿ ಭ್ರಷ್ಟಾಚಾರ ನಿಲ್ಲುವುದಿಲ್ಲ. ನಮ್ಮ ರಾಜ್ಯದಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿರುವ ಲೋಕಾಯುಕ್ತರು ಇದ್ದಾರೆ. ಆದರೆ ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಂತಿಲ್ಲ, ಬದಲಾಗಿ ಹೆಚ್ಚಾಗುತ್ತಾ ಹೋಗಿ ಇಡೀ ದೇಶದಲ್ಲೇ ಅತಿ ಭ್ರಷ್ಟ ರಾಜ್ಯ ಎನಿಸಿಕೊಂಡಿಲ್ಲವೇ?" ಎಂದು ಆಕೆಯನ್ನು ಕೇಳಿದೆ.

ಅಲ್ಲಿದ್ದ ಎಲ್ಲರಂತೆ ನಾನೂ ಕೂಡ ಇದೊಂದು ಅದ್ಭುತವಾದ ಜನಹೋರಾಟ ಎಂದು ಹೇಳುತ್ತೇನೆಂದು ಆಕೆ ಭಾವಿಸಿದ್ದಳೋ ಏನೋ ಪಾಪ! "ಇದೆಂತಹ ವಿಪರ್ಯಾಸ ನೋಡು. ಇಲ್ಲಿ ಈ ಜನ ಭ್ರಷ್ಟಾಚಾರದ ವಿರುದ್ಧ ಸ್ಲೋಗನ್‌ಗಳನ್ನು ಕೂಗುತ್ತಿರುವ ಹೊತ್ತಿನಲ್ಲೇ ನಮ್ಮ ರಾಜ್ಯದಲ್ಲಿ ನಡೆಯಲಿರುವ ಮೂರು ಉಪಚುನಾವಣಾ ಕ್ಷೇತ್ರಗಳಲ್ಲಿನ ಜನ ಯಾರು ಹೆಚ್ಚು ದುಡ್ಡು ಕೊಡುತ್ತಾರೋ ಅವರಿಗೆ ತಮ್ಮ ಮತ ಹಾಕುತ್ತೇವೆ ಎನ್ನುತ್ತಿದ್ದಾರೆ. ಆದ್ದರಿಂದ ಈ ಒಂದು ಮಸೂದೆಯಿಂದಾಗಲಿ, ಕಾನೂನಿನಿಂದಾಗಲಿ ಭ್ರಷ್ಟಾಚಾರವನ್ನು ತೊಡೆದುಹಾಕುವುದು ಸಾಧ್ಯವಿಲ್ಲ. ಇವತ್ತು ಎಲ್ಲ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ ಹಾಸುಹೊಕ್ಕಿದೆ. ಚುನಾವಣೆಯಿಂದ ಹಿಡಿದು ಪ್ರತಿಯೊಂದು ಯೋಜನೆ, ಕಾರ್ಯಕ್ರಮದಲ್ಲೂ ಅದು ತಾಂಡವವಾಡುತ್ತಿದೆ. ಆದ್ದರಿಂದ ಇಡೀ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಗಳಾಗುವ ತನಕ ಇದೆಲ್ಲ ಹೀಗೇ ಮುಂದುವರೆಯುತ್ತದೆ..." ಎಂದೆ.

"ಅಂದರೆ ನಿಮ್ಮ ಪ್ರಕಾರ ಇದರಿಂದ ಯಾವ ಪ್ರಯೋಜನವೂ ಇಲ್ಲವೇ?"

"ನಾನು ಅಷ್ಟು ನಿರಾಶಾವಾದಿಯಲ್ಲ. ಇಲ್ಲಿರುವ ಬಹಳಷ್ಟು ಜನರಿಗೆ ನಮ್ಮ ದೇಶದ ಆರ್ಥಿಕ ನೀತಿಗಳಿಂದಾಗಿ ಆಗುತ್ತಿರುವ ಭ್ರಷ್ಟಾಚಾರ, ಅನ್ಯಾಯಗಳ ಬಗ್ಗೆ ಗೊತ್ತೇ ಇಲ್ಲ, ಬದಲಾಗಿ ಅವರೆಲ್ಲ ತಮಗೆ ಅರಿವಿಲ್ಲದಂತೆ ಆ ನೀತಿಗಳನ್ನು ಬೆಂಬಲಿಸುತ್ತಿದ್ದಾರೆ. ಈ ಹೋರಾಟದ ನಂತರವಾದರೂ ಅವರೆಲ್ಲ ಅವುಗಳ ಬಗ್ಗೆ ಚಿಂತಿಸುವಂತಾಗಲಿ ಎಂದು ಆಶಿಸುತ್ತೇನೆ. ಹಾಗಾದಾಗ ನಮ್ಮ ದೇಶದಲ್ಲೂ ಒಂದು ದೊಡ್ಡ ಕ್ರಾಂತಿ ಸಂಭವಿಸಿ ನಮ್ಮ ವ್ಯವಸ್ಥೆಯಲ್ಲಿ ಅಗತ್ಯವಾದ ಮೂಲಭೂತ ಬದಲಾವಣೆಗಳು ಆಗುತ್ತವೆ ಎಂಬ ಕನಸು ನನ್ನದು" ಎಂದೆ....

*****




ಮೊನ್ನೆ ಎರಡು ದಿನಗಳ ಕಾಲ ಅಮ್ಮನ ನೆಲಮಂಗಲ ತೋಟಕ್ಕೆ ಹತ್ತಿರವೇ ಇರುವ ಕೆರೆಯಿಂದ ಗೋಡು ಮಣ್ಣನ್ನು ಹೊಡೆಸಿದೆ. ಅದಕ್ಕೊಂದು ಐದು ಟ್ರ್ಯಾಕ್ಟರ್‌ಗಳನ್ನು ಮತ್ತು ಒಂದು ಜೆಸಿಬಿ ಯಂತ್ರವನ್ನು ಕರೆಸಿದ್ದೆ.

ಈ ಜೆಸಿಬಿಯ ಕಾರ್ಯವೈಖರಿ ಎಲ್ಲರಲ್ಲೂ ವಿಸ್ಮಯ ಹುಟ್ಟಿಸುತ್ತದೆ. ನಾನು ಬಲ್ಲಂತೆ ಮನುಷ್ಯ ನಿರ್ಮಿಸಿರುವ ಬಹಳಷ್ಟು ವಾಹನಗಳು ಯಾವುದಾದರೂ ಒಂದು ಪ್ರಾಣಿಯನ್ನೋ, ಪಕ್ಷಿಯನ್ನೋ ಹೋಲುತ್ತವೆ. ಉದಾಹರಣೆಗೆ ಏರೋಪ್ಲೇನು ಹಕ್ಕಿಯನ್ನು, ಆಟೋರಿಕ್ಷಾ ಗೊದ್ದಗಳನ್ನು, ಕಾರುಗಳು ಜಿರಲೆಗಳನ್ನು ಹೋಲುತ್ತವೆ! ಆದರೆ ಈ ಜೆಸಿಬಿ ವಿಚಿತ್ರವಾಗಿದೆ. ಇದಕ್ಕೆ ಹಿಂದೆ ಯಾವುದು, ಮುಂದೆ ಯಾವುದು ಎಂದು ಗೊತ್ತಾಗುವುದು ಕಷ್ಟ. ಅದಕ್ಕೆ ಸರಿಯಾಗಿ ಇದರ ಚಾಲಕನ ಕುರ್ಚಿ ಎರಡೂ ದಿಕ್ಕಿನಲ್ಲಿ ತಿರುಗುತ್ತದೆ. ಈ ಯಂತ್ರವನ್ನು ಮೊನ್ನೆ ನೋಡುತ್ತಿದ್ದಾಗ ಅನಿಸಿದ್ದೇನೆಂದರೆ ತೆರೆದ ಬಾಯಿಯಂತಿರುವ ಈ ಯಂತ್ರದ ಮುಂಭಾಗ ಪುರುಷ ಶಕ್ತಿಗೂ, ಅರ್ಧ ಮುಚ್ಚಿರುವ ಹಸ್ತದಂತಿರುವ ಹಿಂಭಾಗವನ್ನು ಸ್ತ್ರೀ ಶಕ್ತಿಗೂ ಹೋಲಿಸಬಹುದು. ಯಾಕೆಂದರೆ ಇದರ ಮುಂಭಾಗವನ್ನು ಉಪಯೋಗಿಸಿ ದೊಡ್ಡ ಬಂಡೆಗಳನ್ನೇ ಸ್ಥಳಾಂತರ ಮಾಡಬಹುದು. ಹಾಗೆಯೇ ಇದರ ಹಿಂಭಾಗ ಮಕ್ಕಳಿಗೆ ತುತ್ತಿಡುವ ತಾಯಿಯ ಕೈ ರೀತಿ ಅತಿ ನಾಜೂಕಾಗಿ, ಸೂಕ್ಷ್ಮವಾಗಿ ಕೆಲಸ ಮಾಡುತ್ತದೆ.

ಮೊನ್ನೆ ಏನಾಯಿತೆಂದರೆ, ಈ ಜೆಸಿಬಿಯು ತನ್ನ ಎದುರಿಗೆ ಸಾಲುಸಾಲಾಗಿ ಬಂದು ನಿಲ್ಲುತ್ತಿದ್ದ ಟ್ರ್ಯಾಕ್ಟರ್‌ಗಳಿಗೆ ತಾಯಿಯೊಬ್ಬಳು ಅಕ್ಕರೆಯಿಂದ ತನ್ನ ಮಕ್ಕಳಿಗೆ ತುತ್ತು ನೀಡುವಂತೆ ಮಣ್ಣನ್ನು ಬಗೆದುಬಗೆದು ಟ್ರ್ಯಾಕ್ಟರ್‌ಗಳ ಹೊಟ್ಟೆ ಭರ್ತಿ ಆಗುವಂತೆ ತುಂಬಿಸುತ್ತಿತ್ತು. ಹೀಗೆ ಹೊಟ್ಟೆ ತುಂಬ ಉಂಡ ಟ್ರ್ಯಾಕ್ಟರ್ ಒಂದು ತೇವವಾಗಿದ್ದ ಮಣ್ಣಿನಲ್ಲಿ ಹೂತುಕೊಂಡಿತು. ಆಗ ಏರಿಯ ಮೇಲೆ ನಿಂತಿದ್ದ ಈ ಜೆಸಿಬಿ ಯಂತ್ರವು ಒಂದು ದೊಡ್ಡ ಹಿಪ್ಪೋಪೊಟಮಸ್ ಇಳಿಯುವಂತೆ ಏರಿಯಿಂದ ಇಳಿದು ಹೂತುಕೊಂಡಿದ್ದ ಟ್ರ್ಯಾಕ್ಟರಿನ ಹಿಂಭಾಗಕ್ಕೆ ತನ್ನ ಮೂತಿಯನ್ನು ಇಟ್ಟು ಒಂದು ತಾಯಿ ಪ್ರಾಣಿ ತನ್ನ ಕೂಸನ್ನು ನಿಧಾನಕ್ಕೆ ಮುಂದೆ ನೂಕುವಂತೆ ನೂಕಿ ಆ ಟ್ರ್ಯಾಕ್ಟರ್‌ಅನ್ನು ಬಚಾವು ಮಾಡಿತು!

ಎರಡು ದಿನಗಳ ಕಾಲ ಸುಡುವ ಬಿಸಿಲಿನಲ್ಲಿ ಕೂತು ಇದನ್ನೆಲ್ಲ ನೋಡುತ್ತಿದ್ದಾಗ ಅನಿಸಿದ್ದನ್ನು ಸುಮ್ಮನೆ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿತು... ●

ಮೀಡಿಯಾ ಖೊ ಖೋ ಆಟ ಕ್ಯಾಪ್ಟನ್ ರಂಗನಾಥ್ ಔಟ್!



ಕನ್ನಡ ಮೀಡಿಯಾ ಜಗತ್ತಿನಲ್ಲಿ ಇನ್ನೊಂದು ಸಣ್ಣ ಭೂಕಂಪವಾಗಿದೆ. ರಿಕ್ಟರ್ ಮಾಪಕದಲ್ಲಿ ಅಷ್ಟೇನೂ ದೊಡ್ಡದಾಗಿ ದಾಖಲಾಗದ ಈ ಕಂಪನ ಸುನಾಮಿಗೂ ಕಾರಣವಾಗಿಲ್ಲ.

ಎಚ್.ಆರ್. ರಂಗನಾಥ್‌ರನ್ನು ಸುವರ್ಣ ನ್ಯೂಸ್ ಚಾನಲ್ ಬೀಳ್ಕೊಟ್ಟಿದೆಮ. ಆಶ್ಚರ್ಯದ ಸಂಗತಿ ಏನೆಂದರೆ ವಿಶ್ವೇಶ್ವರ ಭಟ್ ವಿಜಯ ಕರ್ನಾಟಕದಿಂದ ಹೊರಟಾಗ, ರವಿ ಹೆಗಡೆ ಸುವರ್ಣ ಚಾನಲ್ ಬಿಟ್ಟು ಉದಯವಾಣಿ ಸೇರಿದಾಗ, ಶಿವಸುಬ್ರಹ್ಮಣ್ಯಂ ಕನ್ನಡ ಪ್ರಭಕ್ಕೆ ರಾಜೀನಾಮೆ ಕೊಟ್ಟಾಗ ಎಷ್ಟೊಂದು ಸುದ್ದಿಯಾಗಿತ್ತಲ್ಲ, ಆದರೆ ಈಗ ರಂಗನಾಥ್ ನಿರ್ಗಮನ ಆದರ ನಾಲ್ಕಾಣೆಯಷ್ಟೂ ಸುದ್ದಿಯಾಗುತ್ತಿಲ್ಲ.

ಹಾಗೆ ನೋಡಿದರೆ ಕನ್ನಡ ಮೀಡಿಯಾ ಜಗತ್ತಿನಲ್ಲಿ ವ್ಯಕ್ತಿಗಳು ಸ್ಟಾರ್‌ವ್ಯಾಲ್ಯು ಪಡೆದುಕೊಳ್ಳುವ ಟ್ರೆಂಡ್ ಆರಂಭವಾಗಿದ್ದೇ ರಂಗನಾಥರಿಂದ. ಅದಕ್ಕೂ ಮೊದಲು ಪತ್ರಿಕಾ ಸಂಸ್ಥೆಗಳ ಹೆಸರು, ಪತ್ರಿಕೆ ಹಾಗೂ ಚಾನಲ್‌ಗಳ ಹೆಸರುಗಳೇ ಒಂದು ಬ್ರಾಂಡ್‌ನಂತಿರುತ್ತಿತ್ತು, ಈಗ್ಗೆ ನಾಲ್ಕಾರು ವರ್ಷಗಳ ಹಿಂದೆ ದಿಢೀರನೆ ಪತ್ರಕರ್ತರು ಮತ್ತವರ ಹಿಂಬಾಲಕರ ಟೀಂಗಳದ್ದೇ ಪದೇಪದೇ ಸುದ್ದಿ ಯಾಗುವ ಕಾಲ ಬಂದಿತ್ತು. ಆದರೀಗ ನೋಡಿದರೆ ಕನ್ನಡ ಪ್ರಭದ ಎಚ್.ಆರ್. ರಂಗನಾಥ್, ಸುವರ್ಣ ಚಾನಲ್‌ನ ಕ್ಯಾಪ್ಟನ್ ರಂಗನಾಥ್ ಕೆಲಸ ಕಳೆದುಕೊಂಡಿರುವುದೇ ಸುದ್ದಿಯಾಗುತ್ತಿಲ್ಲ... ಕೆಲವು ಕನ್ನಡ ಬ್ಲಾಗ್‌ಗಳಲ್ಲಿ ಬಿಟ್ಟು.



ಬಹುಶಃ ಪತ್ರಕರ್ತರ ಆಗಮನ ನಿರ್ಗಮನಗಳು ಸುದ್ದಿಯಾಗಬೇಕೆಂದರೆ ಟೈಮಿಂಗ್ ಸರಿಯಾಗಿರಬೇಕೆಂದು ಕಾಣುತ್ತದೆ.

ಕನ್ನಡ ಪ್ರಭ ತ್ಯಜಿಸಿ ದೊಡ್ಡ ದನಿಯಲ್ಲಿ ಮಾತಾಡುತ್ತಾ ಸುವರ್ಣ ನ್ಯೂಸ್ ಚಾನಲ್ಲಿಗೆ ರಂಗನಾಥ್ ಕಾಲಿಟ್ಟ ನಂತರ ಚಾನಲ್ ಮಾಲೀಕ ರಾಜೀವ್ ಚಂದ್ರಶೇಖರ್ ನಾಲ್ಕು ಕೋಟ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕಳೆದುಕೊಂಡರೆಂಬ ಸುದ್ದಿ ಕೇಳಿಬರುತ್ತಿದೆ.

ಅಂದರೆ, ಚಾನಲ್‌ಗೆ ಜಾಸ್ತಿ TRP ತಂದುಕೊಡುತ್ತೇನೆ, ರಿಲಾಂಚ್ ಮಾಡುತ್ತೇನೆಂದು ರಂಗನಾಥ್ ಹೇಳಿದ ಮಾತನ್ನು ನಂಬಿ ರಾಜೀವ್ ಚಂದ್ರಶೇಖರ್ ಇಷ್ಟು ಹಣ ನಷ್ಟ ಮಾಡಿಕೊಂಡಿದ್ದಾರಂತೆ. ಆದರೆ ರಂಗನಾಥ್ ಏನೆಲ್ಲಾ ಪ್ರಯತ್ನ ಮಾಡಿದರೂ ಟೀವಿ 9 ನ TRP 200 ರ ಗಡಿ ದಾಟ ಮುನ್ನುಗ್ಗಿ ಹೋಯಿತು. ಸುವರ್ಣಗೂ 30 ರಿಂದ 60 ರವರೆಗೂ TRP ಏರಿತಾದರೂ ಸುವರ್ಣಾಗಿದ್ದ ಇಮೇಜಿಗೆ ಅದು ಕಡಿಮೆಯೇ ಆಗಿತ್ತು. ಈ ನಡುವೆ ಸಮಯ ಚಾನಲ್‌ನವರೂ ಎಷ್ಟು ರಭಸದಿಂದ ನುಗ್ಗಿ ಬಂದರೆಂದರೆ ಅದರ TRP ಯೂ ಹತ್ತಿರತ್ತಿರ ಸುವರ್ಣ ನ್ಯೂಸ್ ಚಾನಲ್‌ವರೆಗೂ ರೀಚ್ ಆಗೇಬಿಟ್ಟಿತ್ತು.

ಪರಿಸ್ಥಿತಿ ಹೀಗೆ ತಿರುಗಾಮುರುಗಾದ ಮೇಲೆ ಅದರಲ್ಲಿ ರಂಗನಾಥ್‌ರ ಹೆಚ್ಚುಗಾರಿಕೆ ಯೇನು ಬಂತು ಎಂದು ರಾಜೀವ್ ಚಂದ್ರಶೇಖರ್‌ಗೆ ಅನ್ನಿಸಿರಬಹುದು. ಹಾಗಾಗಿ ಎರಡು ವರ್ಷ ಮುಗಿಸಿದ ರಂಗನಾಥ್‌ರ contract ಅನ್ನು ಮುಂದುವರೆಸಲಿಲ್ಲ. ಹಮೀದ್ ಪಾಳ್ಯ ಈಗ ಸುವರ್ಣ ನ್ಯೂಸ್ ಚಾನಲ್‌ನ ಮುಖ್ಯಸ್ಥರಾಗಿ ಜವಾಬ್ದಾರಿ ತೆಗೆದುಕೊಂಡಿದ್ದಾರೆ.

ಅವರಿಗೆ best wishes

ಆರ್ಭಟದಲ್ಲಿ ಮರೆಯಾದ ಕುಶಲತೆ

ರಂಗನಾಥ್‌ರ ಸಾಮರ್ಥ್ಯ ಹಾಗೂ ಮಿತಿಗಳೆರಡನ್ನೂ ನೋಡಲು ಈಗ ಸಾಧ್ಯ. ರಂಗನಾಥ್ ಕನ್ನಡಪ್ರಭ ಸಂಪಾದಕರಾಗಿದ್ದಾಗ ಆಲಸ್ಯದಿಂದಿದ್ದ ಇಡೀ ಟೀಂ ಅನ್ನೇ ಯುದ್ಧಕ್ಕೆ ರೆಡಿ ಮಾಡುವಂತೆ ಸಜ್ಜುಗೊಳಿಸಿ ದಿನಪತ್ರಿಕೆಗಳ ಪೈಪೋಟಿಗೊಂದು ವೇಗ ಹಾಗೂ leap ತಂದುಕೊಟ್ಟಿದ್ದರು. ಅದಕ್ಕೆ ತಕ್ಕಂತೆ ಕನ್ನಡ ಪ್ರಭದ ಸರ್ಕುಲೇಷನ್ನು ಏರಿತು, ಜಾಹೀರಾತು ಆದಾಯವೂ ಹೆಚ್ಚಾಗಿತ್ತು. ರಂಗನಾಥ್‌ಗೂ ಒಂದು ಮಾರ್ಕೆಟ್ ವ್ಯಾಲ್ಯೂ ಸಿಕ್ಕಿತ್ತು. ಅದನ್ನೇ ಸ್ಪ್ರಿಂಗ್ ಬೋರ್ಡ್‌ನಂತೆ ಬಳಸಿ ರಂಗನಾಥ್ ಸುವರ್ಣ ನ್ಯೂಸ್ ಚಾನಲ್ಲಿಗೆ ಬಂದರು. ಶಶಿಧರ್ ಭಟ್ ಸುವರ್ಣದ ಮುಖ್ಯಸ್ಥರಾಗಿದ್ದಾಗ ಒಮ್ಮೆ ಚರ್ಚೆಯೊಂದಕ್ಕೆ ರಂಗನಾಥರನ್ನು ಸ್ಟುಡಿಯೋಗೆ ಕರೆಸಿಕೊಂಡಿದ್ದರು. ಆಗಲೇ ಮಾಲೀಕ ರಾಜೀವ್ ಚಂದ್ರಶೇಖರ್ ಸಂಪರ್ಕ ಬೆಳೆಸಿಕೊಂಡ ರಂಗ ಸುವರ್ಣ ಚಾನಲ್‌ಗೆ ಒಂದು face lift ಕೊಟ್ಟು TRP ಹೆಚ್ಚಿಸಬಲ್ಲೆ ಎಂದಿದ್ದರು. ಒಂದು ಡೈಲಿ ಪೇಪರನ್ನೂ ಶುರು ಮಾಡುವ ಸಲಹೆ ಕೊಟ್ಟಿದ್ದರು. ರಾಜೀವ್ ಚಂದ್ರಶೇಖರ್ ಕಿವಿಗೆ ಇದೆಲ್ಲಾ ಹಿತವಾಗಿ ಕೇಳಿಸಿತೇನೋ.... ಓಕೆ ಅಂದರು.

ಸುವರ್ಣ ನ್ಯೂಸ್ ಚಾನಲ್‌ಗೆ ರಂಗನಾಥ್ ಪ್ರವೇಶವಾಗಿದ್ದು ಹೀಗೆ. ಇಲ್ಲೇ ರಂಗನಾಥ್‌ರ ಬಗ್ಗೆ ಹೇಳಬೇಕಾದ ಮಾತೆಂದರೆ ಆತ ಕನಸುಗಾರ. ಹೊಸ ಹೊಸದನ್ನು ಯೋಚಿಸುತ್ತಾ ಹುಡುಕುತ್ತಾ ಇರುವಾತ... ಆದರೆ ಒಳ್ಳೆಯ ಟೀಂ ಲೀಡರ್ ಆಗಲಿಲ್ಲ ಅಷ್ಟೆ. ಈ ಮಾತೇಕೆಂದರೆ ರಂಗನಾಥ್ ರಂಗನಾಥ್ ಪ್ರವೇಶವಾದ ನಂತರ ಸುವರ್ಣ ನ್ಯೂಸ್ ಚಾನಲ್‌ನ ಇಡೀ ಟೀಂನ ಸ್ಫೂರ್ತಿ ಛಿದ್ರವಾಗಿ ಹೋಯಿತು. ದಿನ ಬೆಳಗಾದರೆ ಕೂಗಾಟ, ಮಾತೇಕೆಂದರೆ ಬೈಯ್ಯುಳ ರಂಗನಾಥ್‌ನ ಶೈಲಿಯಾಯಿತು. ಇದರಿಂದ ರೋಸಿಹೋದ ಮಮ್ತಾಜ್ ಆಲೀಂ, ಹಬೀಬ್ ದಂಡಿ, ರಿಪೋರ್ಟರ್ ಲಿಂಗರಾಜು, ಪ್ರೋಗ್ರಾಂ ಹೆಡ್ ಮಹೇಶ್, ಕ್ಯಾಮೆರಾಮೆನ್ ಶ್ರೀನಾಥ್ ಮುಂತಾದವರು ಚಾನಲ್ ಕೆಲಸ ಬಿಟ್ಟು ಹೊರ ನಡೆದರು. ವಿನಾಃಕಾರಣ ಚಾನಲ್ ಅನುಭವಿ, ಪರಿಣೀತರ ಸಿಬ್ಬಂದಿ ಯನ್ನು ಕಳೆದುಕೊಳ್ಳು ವಂತಾಯಿತು. ಸ್ವಾಮಿ ಎನ್ನುವ ಇನ್ನೊಬ್ಬ ಒಳ್ಳೆಯ ಕೆಲಸಗಾರನಿಗೆ ರಂಗನಾಥ್ ರಾಂಗಾಗಿ 'ಏನ್ ಕತ್ತೆ ಕಾಯ್ತಿದ್ದಿಯಾ- ಲೋಫರ್' ಎಂದು ಆಫೀಸ್‌ನಲ್ಲಿ ಬೈಯ್ದದ್ದು ಟಿವಿ ನ್ಯೂಸ್‌ಗಿಂತಾ ವೇಗವಾಗಿ ಹಬ್ಬಿತ್ತು. ಅವತ್ತು ಈ ಸ್ವಾಮಿ ವಿಭಾಗಕ್ಕೆ ಹೊರಟು ಹೋದವರು ಇವತ್ತು ರಂಗನಾಥ್‌ನೇ ಆಚೆ ಹೋದಮೇಲೆ ಮತ್ತೆ programme execu tive editor ಎಂಬ ಮುಖ್ಯ ಹುದ್ದೆಗೆ ಮರಳಿ ದ್ದಾರೆ. ಅವರ ಸಾಮರ್ಥ್ಯಕ್ಕೆ ತಕ್ಕ ಹುದ್ದೆ ಅದು ಎನ್ನುವುದು ಸುವರ್ಣ ಸಿಬ್ಬಂದಿಯ ಅನಿಸಿಕೆ.

ರಂಗನಾಥ್‌ರ ಸಮಸ್ಯೆ ಇದ್ದಿದ್ದು ಅವರ ಅಹಂನಲ್ಲಿ. ಇವತ್ತು ವೀಕ್ಷಕನೊಬ್ಬ ರಿಮೋಟ್ ಕೈಗೆತ್ತಿಕೊಂಡರೆ ನೂರು ಚಾನೆಲ್ ಸಿಗುತ್ತಿದೆ. ಆದರೆ ರಂಗನಾಥ್ ಆ ನೂರೂ ಚಾನಲ್‌ಗಳಲ್ಲೂ ಸುವರ್ಣ ನ್ಯೂಸೇ ಬರುತ್ತಿದೆಯೆಂದು ಭಾವಿಸಿದ್ದರೋ ಏನೋ ತಾವೊಬ್ಬರೆ ಬಿಟ್ಟೂಬಿಡದೆ ಮಾತಾಡಲು ಶುರು ಮಾಡಿಬಿಟ್ಟರು. ಬಹಳ ಮುಖ್ಯವಾಗಿ ನಾನ್ ಸ್ಟಾಪ್ ಗುರು ಬೋಧನೆ ರೀತಿಯ ಅವರ ಮಾತು ಅತೀ ಎನ್ನುವ ಮಟ್ಟ ತಲುಪಿತ್ತು. ಸಾಮಾನ್ಯವಾಗಿ ಅನುಭವಿ ಆಂಕರ್‌ಗಳು ಇಷ್ಟು ಅತಿರೇಕಕ್ಕೆ ಹೋಗುವುದಿಲ್ಲ. ಆದರೆ ರಂಗ ಹೋದರು. ಅದೇ ಈಗವರನ್ನು ಸುವರ್ಣದಿಂದ ಹೊರತಂದು ನಿಲ್ಲಿಸಿದೆ.

ಮುಂದೇನು?

ವಿಶೇಷ ತರಬೇತಿ ಪಡೆಯಲು ಅಥವಾ ಹೊಸ ದಿನಪತ್ರಿಕೆ ಲಾಂಚ್ ಮಾಡುವ ಸಲುವಾಗಿ ರಂಗನಾಥ್ ಮಲೇಶಿಯಾಗೆ ಹೋಗುತ್ತಾರಂತೆ ಅನ್ನುವ ಸುದ್ದಿ ಕೇಳಿಬರುತ್ತಿದೆ. ಸಮಯ ಚಾನಲ್ ಸೇಲಿಗಿದ್ದಾಗ ಕುಮಾರಸ್ವಾಮಿ ಜೊತೆ ಪಾಲುದಾರಿಕೆಯಲ್ಲಿ ಆ ಚಾನಲ್ ಖರೀದಿಸಲು ರಂಗನಾಥ್ ಮೈಸೂರಿನಲ್ಲಿದ್ದ ಕೋಟ್ಯಂತರ ರೂಪಾಯಿ ಬೆಲೆಯ ಆಸ್ತಿಯನ್ನು ಮಾರಿ ಹಣ ಜೋಡಿಸಲು ಯತ್ನಿಸಿದ್ದರೆಂಬ ಸುದ್ದಿಯೂ ಇತ್ತು. ಇವೆಲ್ಲಾ ಏನೇ ಇರಲಿ, ರಂಗನಾಥ್ ಅನೇಕ ಮಿತಿಗಳ ನಡುವೆಯೂ ಅಪಾರ ಸಾಮರ್ಥ್ಯವಿರುವ ವ್ಯಕ್ತಿ. ಬಹಳ ಕಾಲ ಅವರೇನು ಸುಮ್ಮನೆ ಕುಳಿತಿರಲಾರರು. ಕೆಪಾಸಿಟಿ ಇರುವವರಿಗೆ ಕನ್ನಡ ಮೀಡಿಯಾಗಳಲ್ಲಿ ಈಗ ಅವಕಾಶಗಳಿಗೇನು ಕೊರತೆಯಿಲ್ಲ.

ಬೆಂ.ವಿ.ವಿ: ಹೆಂಡತಿಯಿಂದಲೇ ಹೊಡೆಸಿಕೊಂಡ ಪ್ರೊ. ಮೂರ್ತಿ!

ಇತ್ತೀಚೆಗ್ಯಾಕೋ ಬಹುತೇಕ ವಿಶ್ವವಿದ್ಯಾಲಯಗಳ ಕ್ಯಾಂಪಸ್ಸುಗಳು ಕಾಮ ಕಲರವಕ್ಕೆ ವೇದಿಕೆಯಾಗುತ್ತಿವೆ. ತರಹೇವಾರಿ ಭಾನಗಡಿಗಳ ಮೂಲಕ ಸದಾ ಸುದ್ದಿಯಲ್ಲಿರುವ ಬೆಂಗಳೂರು ವಿವಿಯೂ ಅದಕ್ಕೆ ಹೊರತಾಗಿಲ್ಲವೆಂಬುದೀಗ ಸಾಬೀತಾಗಿದೆ; ವಿದ್ಯಾರ್ಥಿನಿಯೊಂದಿಗೇ ಸಂಸಾರ ಶುರುವಿಟ್ಟುಕೊಂಡು ಹೆಂಡತಿಯಿಂದ ತಾರಾಮಾರಾ ಒದೆ ತಿಂದ ಪ್ರೊ. ಟಿ.ಎಚ್. ಮೂರ್ತಿಯ ಅಸಹ್ಯ ವೃತ್ತಾಂತ ಬಯಲಾಗುವ ಮೂಲಕ.

ಟಿ.ಎಸ್. ಮೂರ್ತಿ ಬೆಂಗಳೂರು ವಿವಿಯ ಗ್ರಾಮೀಣಾಭಿವೃದ್ಧಿ ವಿಭಾಗದ ಮುಖ್ಯಸ್ಥ. ಮೂಲತಃ ತುಮಕೂರಿನ ತಾವರೆಕೆರೆಯ ಈತ ದಲಿತನಾಗಿ ಹುಟ್ಟಿ ಕಡುಬಡತನ ಕಂಡುಂಡು ಬೆಳೆದವನು. ಈತ ಬೆಂಗಳೂರು ವಿವಿಯಲ್ಲಿ ಕೆಲಸ ಸಿಗುವ ಮೊದಲು ಮತ್ತು ಆನಂತರ ಒಂದಷ್ಟು ಕಾಲ ದಲಿತಪರ ಕಾಳಜಿಗಳೊಂದಿಗೆ ಹೋರಾಡುವ ಸಂವೇದನೆ ಇಟ್ಟುಕೊಂಡಿದ್ದು ನಿಜ. ಆ ದಿನಗಳಲ್ಲಿ ಈ ಆಸಾಮಿಯನ್ನು ಕಂಡಿದ್ದ ಅನೇಕರು ಈತನ ಇಂದಿನ ದುಷ್ಟತನಗಳನ್ನು ಕಂಡು ಹೌಹಾರುವಂತಾಗಿದೆ.

ಬೆಂಗಳೂರು ವಿವಿಯಲ್ಲಿ ಆಯಕಟ್ಟಿನದ್ದೊಂದು ಹುದ್ದೆ ಸಿಕ್ಕುತ್ತಲೇ ಮೂರ್ತಿ ಮೆಲ್ಲಗೆ ಬದಲಾಗಲಾರಂಭಿಸಿದ್ದ. ಇಂಥ ಬದಲಾವಣೆ ಕೈಗೆ ಸಿಕ್ಕ ಹೆಣ್ಮಕ್ಕಳನ್ನು ಬಲೆ ಬೀಳಿಸುವ ಮಟ್ಟಕ್ಕೂ ಬೆಳೆದಿತ್ತು. ಮೂರ್ತಿ ತನ್ನೆಲ್ಲ ಲಂಪಟತನವನ್ನೂ ದಲಿತಪರ ಕಾಳಜಿ, ಚಿಂತನೆಗಳ ಹೊದಿಕೆಯಡಿ ಮುಚ್ಚಿಟ್ಟೆ ಮಾಡುತ್ತಾ ಬಂದಿದ್ದ. ಈ ನಡುವೆಯೇ ಸುನಂದಾ ಎಂಬಾಕೆ ಗ್ರಾಮೀಣಾಭಿವೃದ್ಧಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದು ಮೂರ್ತಿಯ ಬಳಿ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿಕೊಂಡಳು. ಈಕೆ ಈ ಹಿಂದೆ ಮೂರ್ತಿ ಬಳಿ ಸಂಶೋಧನಾ ವಿದ್ಯಾರ್ಥಿಯಾಗಿದ್ದ ನಾರಾಯಣಸ್ವಾಮಿ ಎಂಬಾತನ ತಂಗಿ.

ಕಡುಬಡತನದ ಕುಟುಂಬದಿಂದ ಬಂದ ಸುನಂದಾ ಹಲವಾರು ಕನಸು, ಮಹತ್ವಾಕಾಂಕ್ಷೆಗಳನ್ನಿಟ್ಟುಕೊಂಡು ಬೆಂ.ವಿ.ವಿ. ಆವರಣಕ್ಕೆ ಕಾಲಿರಿಸಿದ್ದಳು. ಅದೇ ಹುಮ್ಮಸ್ಸಿನೊಂದಿಗೆ ಮೂರ್ತಿಯನ್ನು ಗುರುವಾಗಿ ಸ್ವೀಕರಿಸಿದ್ದಳು. ಆದರೆ ದುಷ್ಟ ಮೂರ್ತಿ ನಯ ನಾಜೂಕಿನ ಮಾತುಗಳಿಂದ ಹಂತಹಂತವಾಗಿ ಈ ಹುಡುಗಿಯನ್ನು ಸೆಳೆದುಕೊಳ್ಳಲಾರಂಭಿಸಿದ. ಬಡತನದ ಬೇಗೆ ಎಂಥಾದ್ದಿರುತ್ತದೆಂದರೆ, ಪರಿಹಾರವಾಗೋದಿಲ್ಲ ಅಂತ ಗೊತ್ತಿದ್ದರೂ ಮಿಡಿವ ಮನಸು ಸಿಕ್ಕರೆ ಕಷ್ಟ ಹೇಳಿಕೊಂಡು ನಿಸೂರಾಗುವ ತಹತಹಿಕೆಯಿರುತ್ತದೆ. ಸುನಂದಾಳ ಬೇಗೆಗೆ ಮಿಡಿಯುತ್ತಲೇ ಆಕೆಯನ್ನು ಸಂಪೂರ್ಣವಾಗಿ ಆವರಿಸಿಕೊಂಡ ಮೂರ್ತಿ ಗುಪ್ತ್ ಗುಪ್ತ್ ಆಗಿ ಆಕೆಯೊಂದಿಗೆ ಸಂಸಾರವನ್ನೇ ಶುರುವಿಟ್ಟುಕೊಂಡ. ಅಂದಹಾಗೆ ಈ ಹುಡುಗಿ ಮೂರ್ತಿಗಿಂತ ಇಪ್ಪತ್ತು ವರ್ಷ ಚಿಕ್ಕವಳು!

ಅಷ್ಟಕ್ಕೂ ಮೂರ್ತಿಗೆ ಹದಿನೆಂಟು ವರ್ಷದ ಮಗನಿದ್ದಾನೆ. ಸಾಮಾಜಿಕವಾಗಿ ಮಹತ್ತರವಾದ ಜವಾಬ್ದಾರಿಗಳೂ ಈತನಿಗಿವೆ. ದಲಿತನಾಗಿ ಹುಟ್ಟಿ, ಅದರ ಬೇಗೆಗೆ ಮೈಯೊಡ್ಡುತ್ತಲೇ ಉನ್ನತ ಸ್ಥಾನಕ್ಕೇರಿದುದರಿಂದ ಆ ಸಮುದಾಯದ ತಲ್ಲಣಗಳಿಗೆ ಸ್ಪಂದಿಸುವ, ಪರಿಹಾರದ ದಾರಿ ಹುಡುಕುವ ಗೈರತ್ತೂ ಕೂಡಾ ಈತನಿಗಿದೆ. ಇದಕ್ಕೆಲ್ಲ ಬೆನ್ನು ತಿರುಗಿಸಿದ ಮೂರ್ತಿ ವಿದ್ಯಾರ್ಥಿನಿಯನ್ನು ಬೇರೆ ಮನೆಯಲ್ಲಿಟ್ಟು ಸಂಸಾರ ಶುರುವಿಟ್ಟ. ಈ ವಿಚಾರ ಮೊದಲ ಹೆಂಡತಿ ಮತ್ತು ಮಗನಿಗೆ ಗೊತ್ತಾಗದಿರುವಂತೆ ಪ್ರತೀಕ್ಷಣ ಹರಸಾಹಸ ಪಡುತ್ತಿದ್ದ, ತನ್ನ ಘನಂದಾರಿ ಕೆಲಸ ಎಲ್ಲಿ ಬಹಿರಂಗವಾಗುತ್ತದೋ ಎಂಬ ಹೆದರಿಕೆ ನೀಗಿಕೊಳ್ಳುವುದಕ್ಕೋಸ್ಕರವೇ ಬಾರಿನತ್ತ ಹೆಜ್ಜೆ ಹಾಕಿದವನು ಫುಲ್‌ಟೈಂ ಕುಡುಕನಾಗಿ ಬದಲಾದ.

ಮೂರ್ತಿಯ ಮೊದಲ ಹೆಂಡತಿ ಸೂಕ್ಷ್ಮ ಸ್ವಭಾವದ ಗಟ್ಟಿ ಹೆಂಗಸು. ಆದುದರಿಂದಲೇ ಪತಿರಾಯ ಬೇಲಿ ಹಾರಿದ ಬಗ್ಗೆ ಡೌಟು ಬರಲಾರಂಭಿಸಿ ಆ ಬಗ್ಗೆ ತಲಾಶ್ ನಡೆಸಲು ಶುರುವಿಟ್ಟಿದ್ದರು. ಎರಡನೇ ಸಂಸಾರ ಮತ್ತು ಎಣ್ಣೆ ಏಟಿನ ಅಮಲಲ್ಲಿ ತೇಲಾಡುತ್ತಿದ್ದ ಮೂರ್ತಿಗೆ ಇದು ಗೊತ್ತಾಗಲೇ ಇಲ್ಲ. ಅದೊಂದು ದಿನ ರೆಡ್‌ಹ್ಯಾಂಡಾಗಿ ಹೆಂಡತಿ ಕೈಗೆ ತಗುಲಿಕೊಂಡ. ನಡುರಸ್ತೇಲಿ ಹೆಂಡತಿಯಿಂದ ಹೀನಾಯವಾಗಿ ಚಪ್ಪಲೀಲಿ ಹೊಡೆಸಿಕೊಂಡು ಟಿವಿ ಚಾನೆಲ್ಲುಗಳಿಗೆ ಆಹಾರವಾದ. ಈತ ಎಂಥಾ ಅವಿವೇಕಿಯೆಂದರೆ ಏಟು ತಿಂದು ಹೈರಾಣಾಗಿ ಮಾಧ್ಯಮಗಳೆದುರು 'ನಂಗೆ ಹೆಣ್ಣುಮಗು ಬೇಕೆನಿಸ್ತು, ಅದಕ್ಕೇ ಆಕೇನ ಮದುವೆಯಾದೆ. ಯಾರಿಗೂ ಮೋಸ ಮಾಡಿಲ್ಲ' ಅಂತೆಲ್ಲ ಅಸಂಬದ್ಧ ಮಾತುಗಳನ್ನಾಡಿದ್ದ.

ಇದು ಗುರುವಾದವನೊಬ್ಬ ತಲುಪಬಾರದ ಹೀನಾಯ ಸ್ಥಿತಿ. ಈತನ ತೆವಲಿಗೆ ಚೆಂದಗೆ ಬದುಕಬೇಕಿದ್ದ ಬಡ ವಿದ್ಯಾರ್ಥಿನಿಯೊಬ್ಬಳು ಅನ್ಯಾಯವಾಗಿ ಬಲಿಬಿದ್ದಿದ್ದಾಳೆ. ಆದರೀತ ಮತ್ತೊಮ್ಮೆ ದಲಿತನೆಂಬ ಕಾರ್ಡು ಮುಂದಿಟ್ಟುಕೊಂಡು ಬಚಾವಾಗಲೆತ್ನಿಸುತ್ತಿದ್ದಾನೆ.

ತಕ್ಷಣ ಈತನ ಬುಡಕ್ಕೊಂದು ಸರಿಯಾದ್ದೊಂದು ಕ್ರಮ ಜರುಗಿಸುವ ಜರೂರಿದೆ. ಯಾಕೆಂದರೆ ಈ ರಸಿಕ ಮಹಾಶಯನಿಗೆ ಮತ್ತೊಂದು ಕೂಸಿನ ಹಂಬಲ ಅಟಕಾಯಿಸಿಕೊಂಡು ಮತ್ಯಾರೋ ಪಾಪದ ಹುಡುಗಿ ಬಲಿಯಾಗೋ ಅಪಾಯವಿದೆ!

ದಣಿವರಿಯದ ಹೋರಾಟಗಾರನಿಗೆ ಅಕ್ಷರದ ಹಾರೈಕೆಗಳು

ಇತ್ತೀಚೆಗೆ ತಾನೆ ಚಿತ್ರದುರ್ಗದ ಮುರುಘಾಮಠದ ಬಸವಶ್ರೀ ಪ್ರಶಸ್ತಿ ಸ್ವೀಕರಿಸಿ ದುರ್ಗದ ಜನರ ಅಭಿನಂದನೆಗೂ ಪಾತ್ರರಾಗಿದ್ದ ಹಿರಿಯ ದಲಿತ ಮುಖಂಡ, ಜನಪರ ಹೋರಾಟಗಾರ ಎಂ. ಜಯಣ್ಣನವರಿಗೆ ಇದೀಗ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುವ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಸಂದಿದೆ.

ಹಾಗೆ ನೋಡಿದರೆ ಮೂಲತಃ ಸಜ್ಜನರಾದ ಜಯಣ್ಣ ಪ್ರಶಸ್ತಿ-ಸನ್ಮಾನಗಳು ಬಂದಾಗ ಹಿಗ್ಗುವ ವ್ಯಕ್ತಿತ್ವದವರೇನಲ್ಲ. ಮೂರೂವರೆ ದಶಕಗಳಷ್ಟು ಸುದೀರ್ಘ ಹೋರಾಟದ ಹಾದಿ ಜಯಣ್ಣನವರನ್ನು ಪಕ್ವಗೊಳಿಸಿದೆ.

ಕೋಟಗಟ್ಟಲೆ ಲ್ಯಾಂಡ್ ಡೀಲುಗಳು, ಕಾಂಟ್ರಾಕ್ಟುಗಳು, ಅಧಿಕಾರಸ್ಥರ ಚಮಚಾಗಿರಿ, ದಲಿತ ಸಮುದಾಯದ ಹಿತಕ್ಕಿಂತ ಸ್ವಾರ್ಥ ಸಾಧನೆಯನ್ನೇ ಧ್ಯೇಯವಾಗಿಸಿಕೊಂಡಿರುವ ಸೋಕಾಲ್ಡ್ ದಲಿತ ನಾಯಕರಂತಲ್ಲ ಎಂ. ಜಯಣ್ಣ.

ಜಯಣ್ಣನವರ ದಲಿತಪರ-ಜನಪರ ಕಾಳಜಿ ಪ್ರಶ್ನಾತೀತವಾದದ್ದು. ಜಯಣ್ಣನವರ ಪ್ರಭಾವವನ್ನು ತಮಗಿಷ್ಟ ಬಂದಂತೆ ಬಳಸಿಕೊಂಡು ಉದ್ಧಾರವಾದವರು, ವಶೀಲಿಬಾಜಿ ಮಾಡಿದವರು ಇಂದು ಆರಾಮಾಗಿದ್ದಾರೆ. ಜನತೆಯ ಸಮಸ್ಯೆಗಳತ್ತ ಎಂದೂ ಮುಖ ಮಾಡದವರು, ಸಾರ್ವಜನಿಕ ಬದುಕಿನ ಸೂಕ್ಷ್ಮತೆ ಅರಿಯದವರು, ಮಹಾನ್ ನಾಯಕರುಗಳಂತೆ ಪೋಸು ಕೊಡುವವರು ಸರ್ವೇಸಾಮಾನ್ಯ ಎಂಬಂತಾಗಿರುವ ಈ ವಿಷಮ ಸಂದರ್ಭದಲ್ಲಿ ಜಯಣ್ಣ ವಿಭಿನ್ನವಾಗಿ ನಿಲ್ಲುತ್ತಾರೆ.

ಭದ್ರಾ ಮೇಲ್ದಂಡೆ ಯೋಜನೆಯ ಜಾರಿಗೆ ಸರ್ಕಾರ ಹಸಿರು ನಿಶಾನೆ ತೋರಿಸಿದ ನಂತರ ಜಯಣ್ಣನವರ ಹೋರಾಟದ ವ್ಯಕ್ತಿತ್ವಕ್ಕೆ ಜಿಲ್ಲೆಯಲ್ಲಿ ಪಕ್ಷಾತೀತ ಸ್ಪಂದನೆ, ನಾಯಕತ್ವಕ್ಕೊಂದು ವಿಶೇಷತೆ ಪ್ರಾಪ್ತವಾಗಿದೆ.

ತತ್ವ, ಸಿದ್ಧಾಂತ, ಬದ್ಧತೆಗಳ ಪಾಲನೆಯ ವಿಷಯದಲ್ಲಿ ಎಂದೂ ಹಿಂಜರಿದವರಲ್ಲ, ಅವರ ರಾಜಕೀಯ ನಡೆ ಪದೇಪದೇ ಕಹಿ ಅನುಭವ ಉಂಟು ಮಾಡಿದಾಗಲೂ ಜನ ಇಂದಲ್ಲ ನಾಳೆ ಸ್ಪಂದಿಸಿಯೇ ತೀರುತ್ತಾರೆ ಎಂಬ ಅಚಲ ಆತ್ಮವಿಶ್ವಾಸವನ್ನುಳಿಸಿಕೊಂಡೇ ಹೋರಾಟಗಳಲ್ಲಿ ಸಕ್ರಿಯವಾಗುತ್ತಾರೆ.

ಈಗಲೂ ಜಯಣ್ಣನವರಿಗಿರುವುದು ತೀರಾ ಸಾಧಾರಣವಾದ ಹೆಂಚಿನ ಮನೆ. ಅವರ ಆದಾಯದ ಮೂಲ ಎಲ್‌ಐಸಿಯ ಕಮೀಷನ್ ಮತ್ತು ಚಿತ್ರದುರ್ಗ ನಗರಸಭೆಯಲ್ಲಿ ಡಿ'ಗ್ರೂಪ್ ನೌಕರನಾಗಿರುವ ಅವರ ಶ್ರೀಮತಿಯ ಸಂಬಳ ಮಾತ್ರ. ಅವರ ಬಳಿ ಇರುವ ಒಂದೇ ಐಷಾರಾಮಿ ವಸ್ತು ಎಂದರೆ ಜಯಣ್ಣನವರನ್ನು ತುಂಬ ಅಭಿಮಾನಿಸುವ ಯುವ ಉದ್ಯಮಿಯೊಬ್ಬರು ಕೊಡಿಸಿರುವ ಸ್ಕಾರ್ಪಿಯೋ ವಾಹನ ಮಾತ್ರ.

ಜಯಣ್ಣನವರಿಗೆ ಅವರ ಆರ್ಥಿಕ ಪರಿಸ್ಥಿತಿಯ ಬಗೆಗೆ ವಿಷಾದವೇನೂ ಇದ್ದಂತಿಲ್ಲ. ನಿಜವಾದ ಹೋರಾಟಗಾರನಾದವನಿಗೆ ಇದೆಲ್ಲ ಸಹಜ ಎಂಬ ಧೋರಣೆ ಅವರದು. ಆದರೆ ರಾಜಕೀಯದಲ್ಲಿ ಜನ ಕೈಹಿಡಿಯದಿರುವ ಬಗ್ಗೆ ತಣ್ಣನೆಯ ವಿಷಾದ ಭಾವನೆ ಇದ್ದೇ ಇದೆ. ಹಾಗೆ ನೋಡಿದರೆ ಜಯಣ್ಣನವರ ರಾಜಕೀಯ ಸೋಲಿಗೆ ಪ್ರಮುಖ ಕಾರಣವಾಗಿದ್ದೇ ಅವರು ಪ್ರತಿನಿಧಿಸುತ್ತಿದ್ದ ಬಹುಜನ ಸಮಾಜ ಪಕ್ಷದ ಮಿತಿಯೇ ಆಗಿತ್ತು. ಬಿಎಸ್‌ಪಿಯು ಎಲ್ಲ ಜನವರ್ಗಗಳನ್ನು ಒಳಗೊಳ್ಳುವ ಸ್ಥಿತಿ ಇದ್ದಿದ್ದರೆ ಜಯಣ್ಣ ಎಂದೋ ಶಾಸಕರಾಗುತ್ತಿದ್ದರು. ಜಯಣ್ಣನವರಿಗೂ ಇದು ಮನವರಿಕೆಯಾಗಿದೆ.

ಆಯ್ತು ಒಂದು ಕೈ ನೋಡೇಬಿಡೋಣ ಎಂಬಂತಹ ನಿರ್ಧಾರಕ್ಕೆ ಬಂದಂತಿದೆ. ದುರ್ಗದ ರಾಜಕೀಯ ಸನ್ನಿವೇಶಗಳೂ ಇದಕ್ಕೆ ಪೂರಕವಾಗಿವೆ. ಜಯಣ್ಣ ಎಂಬ ಮಾನವಂತ ನಾಯಕ ಈ ಜಿಲ್ಲೆಯ ರಾಜಕಾರಣವನ್ನು ಪ್ರತಿನಿಧಿಸುವಂತಾಗಲಿ. ಪ್ರಶಸ್ತಿಯ ನೆಪದಲ್ಲಿ ದಣಿವರಿಯದ ಹೋರಾಟಗಾರನಿಗೆ ಅಕ್ಷರದ ಹಾರೈಕೆಗಳು. ●

ಯಡ್ಡಿಗೆ ಶರಣಾದ ರೆಡ್ಡಿಗಳು

ಪಾಪಿ ಚಿರಾಯು......!


ಇಂಡಿಯಾ ದೇಶದ ಕಡುಭ್ರಷ್ಟ ಮುಖ್ಯಮಂತ್ರಿ ಎನಿಸಿಕೊಂಡಿರುವ ಯಡಿಯೂರಪ್ಪ ಇನ್ನೊಂದು ಆಪತ್ತಿನಿಂದ ಪಾರಾಗುತ್ತಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪನ ನಾಯಕತ್ವದಲ್ಲಿ ಬಂಡಾಯವೆದ್ದಿದ್ದ ಗುಂಪು ಪುನಃ ತಣ್ಣಗಾಗುತ್ತಿದೆ.

ಇದಕ್ಕೆ ಗಣಿಧಣಿ ಜನಾರ್ದನ ರೆಡ್ಡಿ ಮಾಡಿದ ಡಬಲ್ ಕ್ರಾಸ್ ಮುಖ್ಯ ಕಾರಣ ಎನ್ನಲಾಗುತ್ತಿದೆ.

ಯಡ್ಡಿ ವಿರುದ್ಧ ಕಳೆದೆರಡು ವರ್ಷದಿಂದಲೂ ಸೆಣೆಸಾಡುತ್ತಿದ್ದ ರೆಡ್ಡಿ ಗ್ಯಾಂಗ್‌ಗೆ ಈಗ ಸಂಕಷ್ಟಗಳು ಸಾಲುಸಾಲಾಗಿ ಬರುತ್ತಲೇ ಇವೆ. ರಾಜ್ಯದ ಅತಂತ್ರ ರಾಜಕೀಯ ಪರಿಸ್ಥಿತಿಯನ್ನು ಬಳಸಿಕೊಂಡು ತನ್ನ ಗಣಿ ಸಾಮ್ರಾಜ್ಯದ ರಕ್ಷಣೆಗಾಗಿ ಸರ್ಕಸ್ ನಡೆಸುತ್ತಿದ್ದ ರೆಡ್ಡಿ ಈಗ ಯಡ್ಡಿಯೊಂದಿಗೆ ರಾಜಿ ಸಂಧಾನಕ್ಕೆ ಮುಂದೆ ಬಂದಿರುವುದರಿಂದ ಭಿನ್ನಮತೀಯರಿಗೆ ಹಿನ್ನಡೆಯುಂಟಾಗಿದೆ.

ರೆಡ್ಡಿಗಳ ಅಕ್ರಮ ಗಣಿಗಾರಿಕೆ, ಅಕ್ರಮ ಅದಿರು ರಫ್ತು, ಕರ್ನಾಟಕ-ಆಂಧ್ರ ಗಡಿ ನಾಶದ ಆರೋಪ ಕುರಿತಂತೆ ಲೋಕಾಯುಕ್ತ, ಸಿಬಿಐ, ಆಂಧ್ರ ಸರ್ಕಾರ ಹಾಗೂ ಸುಪ್ರೀಂಕೋರ್ಟ್‌ನ Central Empowered Committee ಗಳು ಏಕಕಾಲದಲ್ಲಿ ತನಿಖೆ ಚಾಲೂ ಮಾಡಿವೆ.

ಒಂದಾದಮೇಲೊಂದರಂತೆ ಬೀಳುತ್ತಿರುವ ಪೆಟ್ಟುಗಳನ್ನು ತಡೆಯಲಾಗದೆ ಸುಸ್ತಾದ ರೆಡ್ಡಿ ತನ್ನೆರಡು ಹೊಸ ಉಕ್ಕಿನ ಕಾರ್ಖಾನೆಯ ಯೋಜನೆಗಳನ್ನೇ ಈಗ ಕೈ ಬಿಟ್ಟಿದ್ದಾನೆ. ತಲಾ ಮೂವತ್ತು ಸಾವಿರ ಕೋಟಿ ರೂಪಾಯಿಗಳ ಈ ಬೃಹತ್ ಪ್ರಾಜೆಕ್ಟ್‌ಗಳು ತಲೆ ಎತ್ತುವ ಮೊದಲೇ ಉರುಳಿಬಿದ್ದಿವೆ. ಜೊತೆಗೆ ರೆಡ್ಡಿಗಳ ಅನುಕೂಲಕ್ಕಾಗೆಂದೇ ಅದಿರು ರಫ್ತು ನಿಷೇಧಿಸಿ ಯಡ್ಡಿ ಸರ್ಕಾರ 2010 ರ ಜುಲೈ 26 ರಂದು ಹೊರಡಿಸಿದ್ದ ಆದೇಶವು ಈಗ ಅದೇ ರೆಡ್ಡಿಗಳ ಪಾಲಿಗೇ ಉರುಳಾಗಿ ಪರಿಣಮಿಸಿರುವ ನಾಟಕೀಯ ತಿರುವೂ ಪಡೆದುಕೊಂಡಿದೆ.



ರೆಡ್ಡಿ ಗ್ಯಾಂಗ್ ಯಡ್ಡಿ ಸರ್ಕಾರ ಹಾಗೂ ವಿರೋಧಿ ಬಣದಲ್ಲಿ ಪದೇಪದೇ ನಿಲುವನ್ನು ಬದಲಾಯಿಸುತ್ತಾ ಇರಲು ಅವರ ಗಣಿ ದಂಧೆಯ ಕಷ್ಟಗಳೇ ಪ್ರಧಾನ ಕಾರಣವಾಗಿದೆ.

ಏಪ್ರಿಲ್ 13 ರ ಬುಧವಾರ ಈಶ್ವರಪ್ಪ ಹುಬ್ಬಳ್ಳಿಗೆ ಹೋಗಿ ಆರ್‌ಎಸ್‌ಎಸ್‌ನ ದಕ್ಷಿಣ ಭಾರತದ ಮುಖಂಡ ಮಂಗೇಶ್ ಬೇಂಡೆಯನ್ನು ಕಂಡು ಯಡ್ಡಿ ವಿರುದ್ಧ ಚಾಡಿ ಹೇಳುತ್ತಿದ್ದಾಗ ರೆಡ್ಡಿ ಅಲ್ಲಿರಲಿಲ್ಲ, ಬದಲಾಗಿ ಅದೇ ಸಮಯದಲ್ಲಿ ಬೆಂಗಳೂರಿನಲ್ಲಿ ಯಡ್ಡಿ ಮನೆಗೆ ಹೋಗಿ ಗುಟ್ಟಾಗಿ ಹಲ ವಿಚಾರ ಮಾತಾಡಿಬಂದಿದ್ದಾರೆ. ಬಿಜೆಪಿ ಮೂಲಗಳ ಪ್ರಕಾರ ಅದಿರು ರಫ್ತು ನಿಷೇಧ ಕೈಬಿಡುವಂತೆ ಯಡ್ಡಿಯನ್ನು ಒತ್ತಾಯಿಸಲು ರೆಡ್ಡಿ ಹೋಗಿದ್ದ ಎನ್ನಲಾಗಿದೆ. ತನ್ನ ಈ ಬೇಡಿಕೆ ಈಡೇರಿಸಿದರೆ ಭಿನ್ನಮತೀಯರೊಂದಿಗೆ ತಾನು ಗುರುತಿಸಿಕೊಳ್ಳುವುದಿಲ್ಲವೆಂಬ ಭರವಸೆಯನ್ನು ರೆಡ್ಡಿ ಕೊಟ್ಟಿದ್ದಾನೆ ಎನ್ನಲಾಗಿದೆ.

ನಿಜಕ್ಕೂ ಇದೊಂದು ವಿಚಿತ್ರ ಸನ್ನಿವೇಶ.

ರೆಡ್ಡಿ ಜುಟ್ಟು ಈಗ ಯಡ್ಡಿ ಕೈಲಿದೆ. ಇತ್ತೀಚಿನ ಸಮಾವೇಶದಲ್ಲಿ 36 ಸಾವಿರ ಕೋಟಿ ರೂಪಾಯಿಗಳ ಸ್ಟೀಲ್ ಕಾರ್ಖಾನೆಯ ಯೋಜನೆ ಪ್ರಕಟಿಸಿದ್ದ ರೆಡ್ಡಿ. ಈಗ ನೋಡಿದರೆ ರಾತ್ರೋರಾತ್ರಿ ತನ್ನ ಯೋಜನೆಯನ್ನೇ ಮಿಗಲಾನಿ ಎಂಬ ಮಾರ್ವಾಡಿಗಳಿಗೆ ಮಾರಿಕೊಂಡಿದ್ದಾನೆ. ಆಂಧ್ರದಲ್ಲೂ ಹೀಗೇ ಮಾಡಿದ್ದರಿಂದ ಅಲ್ಲೊಂದು ವಂಚನೆಯ ಹೊಸ ಕೇಸು ರೆಡ್ಡಿ ಗ್ಯಾಂಗ್ ವಿರುದ್ಧ ದಾಖಲಾಗಿದೆ.



ಯಡ್ಡಿ ಸರ್ಕಾರ ಅದಿರು ರಫ್ತಿಗೆ ನಿಷೇಧ ಹೇರಿದ್ದೇ ರೆಡ್ಡಿಗಳ ಬ್ರಹ್ಮಿಣಿ ಸ್ಟೀಲ್ ಕಾರ್ಖಾನೆಗೆ ನೆರವಾಗಲೆಂದು. ಆಗ ಓಬಳಾಪುರಂ ಮೈನಿಂಗ್ ಕಂಪೆನಿಯ ಅದಿರು ಮಾತ್ರವಲ್ಲದೆ ಕರ್ನಾಟಕದ ಇನ್ನಿತರ ಗಣಿ ಮಾಲೀಕರೂ ಕೂಡ ರೆಡ್ಡಿ ಹೇಳಿದ ರೇಟಿಗೆ ಅವನ ಕಾರ್ಖಾನೆಗೇ ಅದಿರು ಪೂರೈಸಬೇಕಾಗಿ ಬರುತ್ತಿತ್ತು. ಆದರೆ ಅದೀಗ ಬಹುತೇಕ ಅಸಾಧ್ಯ ಎಂದಾಗಿದೆ. ರಾಜ್ಯದ ಕೆಲ ಅದಿರು ರಫ್ತುದಾರರು ಸುಪ್ರೀಂಕೋರ್ಟ್‌ಗೆ ಅರ್ಜಿ ನೀಡಿ ಅದಿರು ರಫ್ತು ನಿಷೇಧಕ್ಕೆ ತಡೆಯಾಜ್ಞೆ ಕೇಳಿದ್ದರು. ಕೋರ್ಟ್ ಅದನ್ನು ಪರಿಗಣಿಸಿ ಯಡ್ಡಿ ಸರ್ಕಾರಕ್ಕೆ ನೋಟಿಸ್ ನೀಡಿದೆ. ಸರ್ಕಾರ ಈ ನೋಟಿಸ್‌ಗೆ ಉತ್ತರಿಸಬೇಕಾದ ಹಂತದಲ್ಲೇ ಯಡ್ಡಿ-ರೆಡ್ಡಿ ಭೇಟಿ ಆಗಿರುವುದು. ರೆಡ್ಡಿಗೀಗ ಅದಿರು ರಫ್ತು ಬೇಕಾಗಿದೆ. ಅವರ ಬ್ರಹ್ಮಿಣಿ ಸ್ಟೀಲ್ ಫ್ಯಾಕ್ಟರಿ ಸ್ಥಾಪನೆಯಾಗದ ಕಾರಣ ರೆಡ್ಡಿಗೆ ಎಕ್ಸ್‌ಪೋರ್ಟ್ ದಂಧೆಯೊಂದೇ ಈಗ ಉಳಿದಿರುವುದು. ಹಾಗಾಗಿ ಸುಪ್ರೀಂಕೋರ್ಟ್ ಸ್ಟೇ ವಿರೋಧಿಸಿ ಪುನಃ ಅಪೀಲು ಸಲ್ಲಿಸದಂತೆ ಒತ್ತಾಯಿಸಿದ್ದಾನೆ ರೆಡ್ಡಿ.

ಒಟ್ಟಾರೆಯಾಗಿ ಹೇಳಬೇಕೆಂದರೆ ರೆಡ್ಡಿ ಜುಟ್ಟು ಈಗ ಯಡ್ಡಿ ಕೈಲಿದೆ. ಇತ್ತೀಚಿನ ಸಮಾವೇಶದಲ್ಲಿ 36 ಸಾವಿರ ಕೋಟಿ ರೂಪಾಯಿಗಳ ಸ್ಟೀಲ್ ಕಾರ್ಖಾನೆಯ ಯೋಜನೆ ಪ್ರಕಟಿಸಿದ್ದ ರೆಡ್ಡಿ. ಈಗ ನೋಡಿದರೆ ರಾತ್ರೋರಾತ್ರಿ ತನ್ನ ಯೋಜನೆಯನ್ನೇ ಮಿಗಲಾನಿ ಎಂಬ ಮಾರ್ವಾಡಿಗಳಿಗೆ ಮಾರಿಕೊಂಡಿದ್ದಾನೆ. ಆಂಧ್ರದಲ್ಲೂ ಹೀಗೇ ಮಾಡಿದ್ದರಿಂದ ಅಲ್ಲೊಂದು ವಂಚನೆಯ ಹೊಸ ಕೇಸು ರೆಡ್ಡಿ ಗ್ಯಾಂಗ್ ವಿರುದ್ಧ ದಾಖಲಾಗಿದೆ.




ರೆಡ್ಡಿ ಹೋದ, ಮಿಗಲಾನಿ ಬಂದ

ಕಳೆದ ದಶಕದಲ್ಲಿ ಕರ್ನಾಟಕ ಹಾಗೂ ಆಂಧ್ರ ಸರ್ಕಾರಗಳೆರಡನ್ನೂ ಕಂಟ್ರೋಲ್ ಮಾಡುತ್ತಾ ತಮ್ಮ ಗಣಿ ಸಾಮ್ರಾಜ್ಯ ಕಟ್ಟಿಕೊಂಡಿದ್ದ ರೆಡ್ಡಿಗಳಿಗೆ ಈಗ ಯಮಗಂಡ ಕಾಲ. ಆಂಧ್ರದಲ್ಲಿ ವೈ.ಎಸ್. ರಾಜಶೇಖರ ರೆಡ್ಡಿ ಸತ್ತು ಇತ್ತ ಕರ್ನಾಟಕದಲ್ಲೂ ಯಡ್ಡಿ ಜೊತೆ ಜಂಗೀ ಕುಸ್ತಿಗೆ ಬಿದ್ದು ಹೈರಾಣಾಗಿದ್ದಾನೆ ರೆಡ್ಡಿ. ಹಾಗೆ ನೋಡಿದರೆ ಕಬ್ಬಿಣದ ಅದಿರಿನ ದಂಧೆಯನ್ನು ಕಾಕಾಪೋಕರೆಲ್ಲಾ ಮಾಡುತ್ತಿದ್ದಾರೆ. ಆದರೆ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಕೇಳುವ ಉಕ್ಕು ಉದ್ಯಮ ಅಷ್ಟು ಸಲಿಸಾದುದಲ್ಲ. ಅಲ್ಲಿ ಜಿಂದಾಲ್, ವೇದಾಂತದಂತ ದೈತ್ಯರಿದ್ದಾರೆ. ಇಲ್ಲಿ ರೆಡ್ಡಿ ಡಜನ್ ಶಾಸಕರನ್ನು ಕೈಲಿಟ್ಟುಕೊಂಡು ಆಟವಾಡಿದರೆ ವೇದಾಂತದವರು ದೇಶವಿದೇಶಗಳ ಸರ್ಕಾರಗಳನ್ನೇ ಹೋಲ್‌ಸೇಲಾಗಿ ಖರೀದಿಸುತ್ತಾರೆ: ಅದರಲ್ಲೂ ಉದಾರೀಕರಣ ಮುಕ್ತ ವ್ಯಾಪಾರದ ಕಾಯ್ದೆಗಳಿರುವ ಈ ಕಾಲದಲ್ಲಿ ಕೇವಲ ರೆಡ್ಡಿಗಳ ಹಿತ ಕಾಪಾಡುವ ಅದಿರು ರಫ್ತಿನ ನಿಷೇಧವನ್ನು ದಕ್ಕಿಸಿಕೊಳ್ಳುವುದು ಅಷ್ಟು ಸುಲಭವೂ ಅಲ್ಲ.

ಆಂಧ್ರದ ಕಡಪಾ ಜಿಲ್ಲೆಯಲ್ಲಿ ರೆಡ್ಡಿಯ ಬ್ರಹ್ಮಿಣಿ ಸ್ಟೀಲ್ಸ್ ಕಾರ್ಖಾನೆಗೆ ಜ್ವರ ಬಂದಿದ್ದೇ ಹೀಗೆ. ವೈಎಸ್‌ಆರ್ ಮೂಲಕ ಒಟ್ಟು ಹದಿನಾಲ್ಕು ಸಾವಿರ ಎಕರೆ ಭೂಮಿ ಮಂಜೂರು ಮಾಡಿಸಿಕೊಂಡ ರೆಡ್ಡಿ ಅದಕ್ಕೆ ತೆತ್ತ ಬೆಲೆ 20 ಕೋಟಿ ರೂಪಾಯಿಗಿಂತ ಕಡಿಮೆ. ಅಂದರೆ ಎಕರೆಗೆ ಹದಿನೆಂಟು ಸಾವಿರ ರೂಪಾಯಿ ಮಾತ್ರ. ಆದರೆ ಅದೆಷ್ಟೇ ಭೂಮಿಯನ್ನು ಎಕರೆಗೆ ಎರಡೂವರೆ ಲಕ್ಷ ರೂಪಾಯಿ ಬೆಲೆಯಲ್ಲಿ ಒಟ್ಟು 350 ಕೋಟಿ ರೂಪಾಯಿಗೆ ಪರಭಾರೆ ಮಾಡಿದ್ದಾನೆ ರೆಡ್ಡಿ. ಅಂದರೆ ಬರೀ ಪೇಪರ್ ವರ್ಕ್ ಮೂಲಕವೇ ಮುನ್ನೂರು ಕೋಟಿ ರೂಪಾಯಿಗೂ ಜಾಸ್ತಿ ಲಾಭ ಗೆಬರಿಕೊಂಡಿದ್ದಾರೆ ರೆಡ್ಡಿಗಳು. ತಾನು ಕಡಪಾದಲ್ಲಿ ಬ್ರಹ್ಮಿಣಿ ಸ್ಟೀಲ್ ಕಾರ್ಖಾನೆ ಮಾಡಲಾರೆ ಎಂದು ಉತ್ತಮ್ ಗುಲ್ವ ಫೆರೋಸ್ ಲಿಮಿಟೆಡ್ ಎನ್ನುವವರಿಗೆ ಈ ಇಡೀ ಪ್ರಾಜೆಕ್ಟನ್ನೇ ಅಕ್ರಮವಾಗಿ ಪರಭಾರೆ ಮಾಡಿದ್ದಾನೆ ರೆಡ್ಡಿ. ಕಾನೂನಿನಲ್ಲಿ ಇದಕ್ಕೆ ಅವಕಾಶವಿರದ ಕಾರಣ ರೆಡ್ಡಿ ವಿರುದ್ಧ ಆಂಧ್ರ ಸರ್ಕಾರ ಈಗ ಐಪಿಸಿ ಸೆಕ್ಷನ್ 177 ರಂತೆ ಕೇಸ್ ದಾಖಲಿಸಿದೆ.

ಇತ್ತ ಕರ್ನಾಟಕದಲ್ಲೂ ರೆಡ್ಡಿ ಇದೇ ಆಟ ನಡೆಸಿದ್ದಾನೆ. ಬಳ್ಳಾರಿ ಬಳಿ ಬ್ರಹ್ಮಿಣಿ ಸ್ಟೀಲ್ ಕಾರ್ಖಾನೆ ಮಾಡುವುದಾಗಿ ವೀರಾವೇಶದಿಂದ ಹೇಳಿಕೊಂಡಿದ್ದ ರೆಡ್ಡಿ ಈ ಯೋಜನೆಗೆಂದು ಗುರುತಿಸಲಾಗಿದ್ದ ಭೂಮಿಯ ಸಮೇತ ಇಡೀ ಪ್ರಾಜೆಕ್ಟನ್ನೇ ಮಿಗಲಾನಿ ಫ್ಯಾಮಿಲಿಗೆ ಮಾರಿಕೊಂಡಿದ್ದಾನೆ. ಈ ಮಾರ್ವಾಡಿ ಫ್ಯಾಮಿಲಿಯ ಅಂಕಿತ್ ಮಿಗಲಾನಿ ಎಂಬುವನು ರಾತ್ರೋರಾತ್ರಿ ಬ್ರಹ್ಮಿಣಿಯ ಹೆಸರು ಬದಲಿಸಿ ಉತ್ತಮ್ ಗಾಲ್ವಾ ಸ್ಟೀಲ್ಸ್ ಎಂದು ಹೇಳಿ ಅದರ ಬಾಸ್ ಆಗಿ ಕಾಣಿಸಿಕೊಂಡಿದ್ದಾನೆ.

ನಾನಾ ರೀತಿಯ ತನಿಖೆಗಳು, ಅದಿರಿನ ಬೆಲೆ ಕುಸಿದಿರುವುದು, ಜಪಾನ್ ದುರಂತಗಳಿಂದಾಗಿ ರೆಡ್ಡಿಯ ಗಣಿ ದಂಧೆ ಈಗ ಮೊದಲಿನಂತಿಲ್ಲ, ಹಾಗಾಗಿ ಸ್ಟೀಲ್ ಪ್ಲಾಂಟ್ ಮಾಡುವ ಯೋಚನೆ ಕೈಬಿಟ್ಟು ಮೊದಲಿನಂತೆ ಅದಿರು ರಫ್ತು ಮಾಡಿಕೊಂಡು ತಲೆ ಉಳಿಸಿಕೊಂಡರೆ ಸಾಕಾಗಿದೆ ರೆಡ್ಡಿಗಳಿಗೆ. ಅವರಿಗೀಗ ಅದಿರು ರಫ್ತು ನಿಷೇಧ ಬೇಕಿಲ್ಲ, ಅದರ ಬದಲಾಗಿ ರಾಜ್ಯ ಸರ್ಕಾರ ನಿಷೇಧವನ್ನೇ ರದ್ದು ಮಾಡಲಿ ಎಂದಿದೆ. ಅದು ಸಾಧ್ಯವಿರುವುದು ಯಡ್ಡಿಯಿಂದ ಮಾತ್ರ. ಹಾಗಾಗಿ ಯಡ್ಡಿಯನ್ನು ಒಪ್ಪಿಸಲು ಅಥವಾ ಬಗ್ಗಿಸಲು ಕೆಲಬಾರಿ ಭಿನ್ನ ಮತೀಯರೊಂದಿಗೂ ಉಳಿದಂತೆ ಯಡ್ಡಿಯೊಂದಿಗೆ ಸ್ನೇಹದಿಂದಿರುವಂತೆ ನಟಿಸುತ್ತಿದ್ದಾರೆ. ಚಾಣಾಕ್ಷ ಯಡ್ಡಿಗೆ ಇದೆಲ್ಲ ಗೊತ್ತಿಲ್ಲವೆಂದೇನೂ ಅಲ್ಲ. ಸಿಇಸಿ ತನಿಖೆಯಲ್ಲಿ ಕುತ್ತಿಗೆತನಕ ಮುಳುಗಿರುವ ರೆಡ್ಡಿಗಳು ಇನ್ನು ಕೆಲವೇ ದಿನಗಳಲ್ಲಿ ಕೇವಲ ಆದಾಯ ತೆರಿಗೆ ಬಾಬ್ತಿನಲ್ಲೇ 184 ಕೋಟಿ ರೂಪಾಯಿ ಸರ್ಕಾರಕ್ಕೆ ಕೊಡಬೇಕಿದೆ. ಇತ್ತೀಚಿಗೆ ಆಂಧ್ರ ಸರ್ಕಾರ ವಿಶಾಪಟ್ಟಣಂ ಬಂದರಿನಲ್ಲಿ ರೆಡ್ಡಿಗಳಿಗೆ ಸೇರಿದ್ದ 2.5 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಸೀಜ್ ಮಾಡಿದೆ. ಈಗ ಬಳ್ಳಾರಿ ಸುತ್ತಮುತ್ತ ಇನ್ನಿತರ ಗಣಿ ಉದ್ಯಮಿಗಳಿಂದ ಮೊದಲಿದ್ದಂತೆ ಮಂತ್ಲಿ ಹಫ್ತಾ ವಸೂಲಿಯಾಗುತ್ತಿಲ್ಲ. ಅದಿರು ರಫ್ತಿನ ಮೇಲೆ ಕೇಂದ್ರ ಸರ್ಕಾರ ಶೇ. 20 ತೆರಿಗೆ ಹೆಚ್ಚಿಸಿದೆ. ಮತ್ತೊಂದೆಡೆ ವಿದೇಶಿ ಮಾರ್ಕೆಟ್‌ನಲ್ಲಿ ಒಂದು ಟನ್ ಅದಿರಿಗಿದ್ದ 170 ಡಾಲರಿನ ಬೆಲೆ ಈಗ 140 ಡಾಲರಿಗೆ ಕುಸಿದಿದೆ.


ಜಯದೇವ್

ಇದೆಲ್ಲದರಿಂದ ರೆಡ್ಡಿ ಸಾಮ್ರಾಜ್ಯಕ್ಕೆ ಹರಿದುಬರುತ್ತಿದ್ದ ಹಣ ಪ್ರವಾಹ ಈಗ ಒಣಗಿ ಹೋಗುತ್ತಿದೆ.

ರೆಡ್ಡಿಗೀಗ ಭಿನ್ನಮತ, ಜಗಳ, ರಗಳೆ ಯಾವುದೂ ಬೇಕಿಲ್ಲ. ಯಡ್ಡಿಯೊಂದಿಗೆ ಹೇಗೋ ಅಡ್ಜಸ್ಟ್ ಮಾಡಿಕೊಂಡು ಕಾಲ ಹಾಕಿದರೆ ಸಾಕೆನಿಸಿಬಿಟ್ಟಿದೆ. ಹೇಗಾದರೂ ಮಾಡಿ ಯಡ್ಡಿಯನ್ನು ಒಪ್ಪಿಸಿ ಅದಿರು ರಫ್ತು ನಿಷೇಧದ ಪರವಾಗಿ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಬಿಜೆಪಿ ಸರ್ಕಾರ ಕಾನೂನು ಸಮರ ಮುಂದುವರೆಸದಂತೆ ತಡೆಯಬೇಕಿದೆ.

ಪಳಗಿದ ರಾಜಕಾರಣಿ ಯಡ್ಡಿ ಈ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಹಾಗಾಗಿ ಈಗ ಭಿನ್ನಮತೀಯರ ಬಣ ಬಣಗುಟ್ಟುತ್ತಿದೆ.

ಪಾಪಿ ಚಿರಾಯು.

• ಪಾರ್ವತೀಶ

ಆರೆಸ್ಸೆಸ್‌ನಲ್ಲೂ ಜಾತಿಯ ಒಡಕು!

ಬಿಜೆಪಿಯಲ್ಲಿ ಯಡ್ಡಿ ಪರ-ವಿರೋಧದ ಬಣಗಳಿರುವಂತೆಯೇ ಈಗ ಆರೆಸ್ಸೆಸ್‌ನಲ್ಲೂ ಬಿರುಕು ಕಾಣಿಸಿಕೊಂಡಿದೆ. ಮೊದಲಾದರೆ ಭಿನ್ನಮತೀಯರ ಜಗಳ ಶುರುವಾದ ತಕ್ಷಣ ಬೆಂಗಳೂರಿನ ಚಾಮರಾಜಪೇಟೆಯ ಕೇಶವ ಕೃಪಾಗೆ ಎಲ್ಲ ಓಡಾಡುತ್ತಿದ್ದರು. ಅಲ್ಲಿರುವ ಲಿಂಗಾಯತ ಆರೆಸ್ಸೆಸ್ ಮೈ.ಚ. ಜಯದೇವ್ ಯಡ್ಡಿ ಪರವಾಗಿಯೂ, ಇನ್ನೊಬ್ಬ ಆರೆಸ್ಸೆಸ್ ಮುಖಂಡ ಕೃಷ್ಣಪ್ಪ ಭಿನ್ನರ ಪರವಾಗಿಯೂ ನಿಲ್ಲುತ್ತಿದ್ದರು.


ಇದು ರಾಜ್ಯ ಆರೆಸ್ಸೆಸ್‌ನ ಪ್ರಮುಖರಾಗಿದ್ದ ಜಯದೇವ-ಕೃಷ್ಣಪ್ಪ ನಡುವಿನ ವೈಮನಸ್ಯಾಗಿಯೂ ಬೆಳೆಯಿತು. ಆದರೆ ಜಾತಿ ಕಾರಣದಿಂದಾಗಿ, ಯಡ್ಡಿ ಮತ್ತವರ ಸರ್ಕಾರದ ಪ್ರಭಾವದಿಂದಾಗಿ ಲಿಂಗಾಯತ ಜಯದೇವ ಕೈ ಮೇಲಾಗಿ ಕೃಷ್ಣಪ್ಪ ಮೂಲೆಗುಂಪಾದರು. ಇದು ನಾಗಪುರದ ಆರೆಸ್ಸೆಸ್ ಬ್ರಾಹ್ಮಣ ನಾಯಕರಿಗೆ ಇಷ್ಟವಾಗಲಿಲ್ಲ. ಹಾಗಾಗಿ ರಾಜ್ಯ ಬಿಜೆಪಿ ಜಗಳಗಳನ್ನು ಪರಿಹರಿಸುವ ಕೆಲಸವನ್ನು ದಕ್ಷಿಣ ಭಾರತ ಪ್ರಚಾರಕ ಆದ ಮಂಗೇಶ್ ಬೇಂಡೆಗೆ ವಹಿಸಿದ್ದಾರೆ. ಈತ ಹುಬ್ಬಳ್ಳಿಯಲ್ಲಿರುತ್ತಾನಾದ್ದರಿಂದ ಭಿನ್ನಮತೀಯರು ಈಗ ಹುಬ್ಬಳ್ಳಿಗೆ ಹೋಗಿ ಬರುತ್ತಿದ್ದಾರೆ.

ರಾಜ್ಯ ಆರೆಸ್ಸೆಸ್-ಬಿಜೆಪಿಗಳಿರಲಿ, ಕೇಂದ್ರ ಆರೆಸ್ಸೆಸ್-ಬಿಜೆಪಿ ಲೀಡರ್‌ಗಳಿಗೂ ಈಗ ಯಡ್ಡಿಯನ್ನು ಮುಟ್ಟುವ ಧೈರ್ಯವೇ ಹೊರಟುಹೋಗಿದೆ. ಭಿನ್ನರ ಮಾತು ಕೇಳಿ ಒಂದು ವೇಳೆ ಯಡ್ಡಿಯನ್ನು ಕೆಳಗಿಳಿಸಿದರೆ ಹೊಸ ಸರ್ಕಾರ ಆರು ತಿಂಗಳೂ ಬಾಳುವುದಿಲ್ಲವೆಂಬ ಭೀತಿ ಅವರಿಗೆ. ಜೊತೆಗೆ ಯಡ್ಡಿ ಹೋಗುವುದೇ ಆದರೆ ತನ್ನೊಂದಿಗೆ ಕನಿಷ್ಠ 25 ಲಿಂಗಾಯತ ಶಾಸಕರನ್ನು ಕರೆದೊಯ್ಯುತ್ತಾರೆಂಬುದು ಕೇಂದ್ರ ನಾಯಕರಿಗೆ ಗೊತ್ತಿದೆ. ಇದರ ನಡುವೆ ಮೈಸೂರಿನಲ್ಲಿ ನಡೆಯುತ್ತಿರುವ ಲಿಂಗಾಯತರ ಸಮಾವೇಶವನ್ನು ತನ್ನ ಸ್ಥಾನ ಭದ್ರತೆಯ ಅಸ್ತ್ರವನ್ನಾಗಿ ಬಳಸುತ್ತಿದ್ದಾರೆ. ತಾನು ರಾಜ್ಯ ಲಿಂಗಾಯತರ ಏಕೈಕ ನಾಯಕನೆಂದು ಬಿಂಬಿಸಿಕೊಂಡು ಆ ಬಲ ತೋರಿಸಿಯೇ ನಿತಿನ್ ಗಡ್ಕರಿ, ಮೋಹನ್ ಭಾಗವತರನ್ನು ಹೆದರಿಸಬಹುದೆಂಬುದು ಯಡ್ಡಿಗೆ ಅರ್ಥವಾಗಿ ಹೋಗಿದೆ.

ಕರ್ನಾಟಕದ ಆರೆಸ್ಸೆಸ್ ಅನ್ನೇ ಜಾತಿಯ ಹೆಸರಿನಲ್ಲಿ ವಿಭಜಿಸಿರುವ ಯಡ್ಡಿ ಇನ್ನು ಬಿಜೆಪಿಯನ್ನು ಬಿಟ್ಟಾರೆಯೇ?

ಬಿಜೆಪಿ ಹೈಕಮಾಂಡಿಗೆ ಅದೇ ಭಯ!

ಬಿಬಿಎಂಪಿ: ನಟರಾಜನ ನಂತರ 'ಮೇಯೋ'ರ್ ಯಾರು?


ನಟರಾಜ್


ಬಿಬಿಎಂಪಿಯನ್ನು ಲೂಟಿ ಹೊಡೆಯುವ ಸಲುವಾಗಿ ಮತ್ತೊಂದು ರೌಂಡಿನ ಪೈಪೋಟಿ ಶುರುವಾಗಿದೆ. ಹಾಲಿ ಮೇಯರ್ ಎಸ್.ಕೆ. ನಟರಾಜ್ ಕೋಟಿ ಕೋಟಿ ಲಪಟಾಯಿಸಿ ಸಭ್ಯಸ್ಥನ ಪೋಜಿನಲ್ಲೇ ತಣ್ಣಗೆ ಕಾಲ್ಕೀಳಲು ತಯಾರಾಗಿದ್ದಾರೆ. ಇದೇ ತಿಂಗಳ ಕೊನೆಗೆ ಹೊಸಾ ಮೇಯರ್ ಆಯ್ಕೆಗೆ ಗಡುವು ನಿಗದಿಯಾಗಿರುವುದರಿಂದ ರಾಜ್ಯ ಬಿಜೆಪಿ ನಾಯಕರುಗಳ ಬಣಗಳ ಮಧ್ಯೆ ಭಾರೀ ಕದನಕ್ಕೆ ಚಾಲನೆ ಸಿಕ್ಕಿದೆ.


ಈ ಬಾರಿ ಮೇಯರ್ ಸ್ಥಾನ ಪರಿಶಿಷ್ಟ ಜಾತಿಯ ಮಹಿಳೆಗೆ ಮೀಸಲಾಗಿರುವುದಷ್ಟೇ ವಿಶೇಷ. ಈ ರೇಸ್‌ನಲ್ಲಿ ಬೇರೆಬೇರೆ ವಾರ್ಡ್‌ಗಳ ಮಹಿಳಾ ಕಾರ್ಪೊರೇಟರ್‌ಗಳು ಅಖಾಡಕ್ಕಿಳಿದಿದ್ದಾರಾದರೂ ಅವರ ಆಯ್ಕೆ ಗಂಡಂದಿರ ಲಿಂಕುಗಳು, ಅವರಿರುವ ಬಣಗಳ ಮೇಲೆಯೇ ನಿರ್ಧಾರವಾಗುವುದು ವಾಸ್ತವ. ಹೆಸರಿಗೆ ಮಾತ್ರ ಮಹಿಳೆಯರ ನಡುವಿನ ಜಿದ್ದಾಜಿದ್ದಿ ಕಾಣಿಸುತ್ತಿದ್ದರೂ ವ್ಯವಹಾರ, ಲಾಬಿಗಳೆಲ್ಲ ಆಯಾ ಕಾರ್ಪೊರೇಟರ್‌ಗಳ ಪತಿರಾಯರದ್ದೇ. ಮುಂದೆ ಈ ಮಹಿಳಾಮಣಿಗಳಲ್ಲಿ ಯಾರೇ ಮೇಯರ್ ಆದರೂ ಅಧಿಕೃತ ಮೇಯರ್‌ಗಿರಿ ಪತಿಗಳ ಪಾಲಾಗುವುದು ಖಚಿತ.


ಸದ್ಯ ಪೀಣ್ಯ ದಾಸರಹಳ್ಳಿಯ ಕಾರ್ಪೊರೇಟರ್ ಶಾರದಮ್ಮನ ಹೆಸರು ಮೇಯರ್ ಆಕಾಂಕ್ಷಿಗಳ ರೇಸಿನಲ್ಲಿ ಮೊದಲ ಸ್ಥಾನದಲ್ಲಿದೆ. ಈಕೆ ಶಾಸಕ ಮುನಿರಾಜು ಕ್ಯಾಂಡಿಡೇಟ್. ಶಾರದಮ್ಮನ ಗಂಡ ರಾಮಾಂಜಿನಪ್ಪ ಲಾಗಾಯ್ತಿನಿಂದಲೂ ಮುನಿರಾಜುವಿನ ನಿಷ್ಠಾವಂತ ಬಂಟ. ಮೊದಲಿಗೆ ಮನೆ ಬ್ರೋಕರ್ ಆಗಿದ್ದವನು ತದನಂತರ ಮುನಿರಾಜುನೊಂದಿಗೆ ಸೇರಿ ಸೈಟ್ ಬ್ರೋಕರಿಕೆ ಶುರು ಹಚ್ಚಿಕೊಂಡ. ಮುನಿರಾಜು ಖಾಲಿ ಪೇಪರ್ ಎದುರು ಹಿಡಿದರೂ ಹೆಂಡತಿಯನ್ನೂ ಸೇರಿಸಿ ಹೆಬ್ಬೆಟ್ಟು ಒತ್ತಿಸುವಂಥ ಅಚಲ ನಿಷ್ಠೆಯ ಫಲವಾಗಿ ಈ ಬಾರಿ ಶಾರದಮ್ಮನಿಗೆ ಬಿಬಿಎಂಪಿ ಟಿಕೆಟು ಸಿಕ್ಕಿದ್ದು ಸುಳ್ಳಲ್ಲ.


ಈ ಮುನಿರಾಜು ಹೇಳಿಕೇಳಿ ಗೃಹ ಸಚಿವ ಆರ್. ಅಶೋಕ್ ಶಿಷ್ಯ. ಈ ಪ್ರಭಾವವೇ ಶಾರದಮ್ಮನನ್ನು ಮೇಯರ್ ಮಾಡುವಲ್ಲಿ ಪರಿಣಾಮಕಾರಿ ಕೆಲಸ ಮಾಡುತ್ತಿದೆ. ಹಾಲಿ ಮೇಯರ್ ನಟರಾಜ್ ಸಹ ಅಶೋಕ್ ಶಿಷ್ಯ. ಇಷ್ಟು ಕಾಲ ಶಿಷ್ಯನ ಮೂಲಕವೇ ಬೆಂಗಳೂರನ್ನು ಆಳಿದ ಅಶೋಕ್‌ಗೆ ಅದು ಪರರ ಪಾಲಾಗುವುದು ಸುತಾರಾಂ ಇಷ್ಟವಿಲ್ಲ. ಆದರೆ ಈ ತುದಿತಕ್ಕೆ ವಿ. ಸೋಮಣ್ಣ ಕೃಪಾಪೋಷಿತ ಬಣ ಭಾರೀ ಅಡ್ಡಗಾಲು ಹಾಕಹತ್ತಿದೆ.


ಮೇಯರ್ ರೇಸ್‌ನಲ್ಲಿ ಶಾರದಾಳಿಗೆ ಪೈಪೋಟಿಯಾಗಿ ಕೇಳಿಬರುತ್ತಿರುವ ಹೆಸರು ನಾಯಂಡಳ್ಳಿಯ ಎಚ್.ಎಸ್. ರಾಜೇಶ್ವರಿಯದ್ದು. ಈಕೆ ಡಿಎಸ್ಎಸ್ ಮುಖಂಡ ಹಾಗೂ ಸೋಮಣ್ಣನ ಶಿಷ್ಯ ಉಮೇಶನ ಹೆಂಡತಿ. ಮೊದಲ ಬಾರಿ ಕಾರ್ಪೊರೇಟರ್ ಆಗಿರುವ ಈಕೆಯನ್ನು ಹೇಗಾದರೂ ಮಾಡಿ ಮೇಯರ್ ಆಗಿಸಲು ಸೋಮಣ್ಣ ಬಣ ಪ್ರಯತ್ನಿಸುತ್ತಿದೆ. ಆದರಿದಕ್ಕೆ ಅಶೋಕ್ ಬಣಕ್ಕಿಂತಲೂ ಮೊದಲೇ ಸ್ವತಂತ್ರ ವಿರೋಧವೊಂದು ಹುಟ್ಟಿಕೊಂಡು ತಲೆನೋವಾಗಿ ಪರಿಣಮಿಸಿದೆ.


ಸತೀಶ್‌ರೆಡ್ಡಿ


ರಘು


ಮುನಿರಾಜು


ಸೋಮಣ್ಣ


ಅಶೋಕ್

ಸೋಮಣ್ಣನ ಟೀಮಿಗೆ ಈ ರೀತಿ ಅಡ್ಡಗಾಲು ಹಾಕಿರುವಾಕೆ ಮೂಡಲ್ಪಾಳ್ಯದ ಶಾಂತಕುಮಾರಿ. ಈ ಹಿಂದೆ ಉಪಮೇಯರ್ ಆಗಿ ಮೆರೆದಾಡಿದ್ದ ಈಕೆ ಮೂಡಲ್ಪಾಳ್ಯ ಸೀಮೆಯಾದ್ಯಂತ ಕುಖ್ಯಾತಳಾಗಿದ್ದಾಳೆ. ಈಕೆಯ ಗಂಡ ರವಿಕುಮಾರ್ ಒಂದು ಕಾಲದಲ್ಲಿ ದೊಡ್ಡ ರೌಡಿ. ಇದೀಗ ರೌಡಿಸಂನಿಂದ ನಿವೃತ್ತನಾಗಿ ಕುಡಿತವನ್ನೇ ಕಾಯಕ ಮಾಡಿಕೊಂಡಿದ್ದಾನೆ. ಆದರೆ ಹೆಂಡತಿ ಶಾಂತಕುಮಾರಿ ಇನ್ನೂ ಫೀಲ್ಡು ಬಿಟ್ಟಿಲ್ಲ. ಅಮರ್‌ಜ್ಯೋತಿನಗರ ಮಾರುತಿ ಲೇಔಟ್‌ಗಳಲ್ಲೂ ಪುಡಿ ರೌಡಿಗಳ ಹಿಂಡಿನೊಂದಿಗೆ ದಾಂಧಲೆಯೆಬ್ಬಿಸುವುದನ್ನು ನಿಲ್ಲಿಸಿಲ್ಲ. ಸದ್ಯ ನಾಯಂಡಳ್ಳಿಯ ರಾಜೇಶ್ವರಿಯೇನಾದರೂ ಮೇಯರ್ ಆದರೆ ಗೋವಿಂದರಾಜನಗರಕ್ಕೆ ಪ್ರಾತಿನಿಧ್ಯಸಿಕ್ಕಂತಾಗುತ್ತದೆ. ಹಾಗಾದರೆ ಇನ್ನೊಂದು ಸಾರಿ ತಾನು ಮೇಯರ್ ಆಗಲು ಸಾಧ್ಯವಿಲ್ಲ, ಇದು ಶಾಂತಾಳ ತಳಮಳ. ಏನೇ ಆದರೂ ರಾಜೇಶ್ವರಿ ಮೇಯರ್ ಆಗಕೂಡದೆಂಬ ತೀರ್ಮಾನಕ್ಕೆ ಬಂದಿರುವ ಶಾಂತಾ ಈಶ್ವರಪ್ಪ ಅಶೋಕ್ ಮುಂತಾದವರಿಗೆಲ್ಲಾ ಮನವಿ ಸಲ್ಲಿಸುತ್ತಾ ಓಡಾಡತೊಡಗಿದ್ದಾಳೆ. ಹಾಲಿ ಕ್ಯಾಟಗರಿಯನ್ನೇ ಬದಲಾಯಿಸುವಂತೆ ಮನವಿಯನ್ನೂ ಮಾಡಿದ್ದಾಳೆ.

ಕದನವಿರುವುದು ಶಾರದಮ್ಮ ಮತ್ತು ರಾಜೇಶ್ವರಿಯ ನಡುವೆಯೆ ಆದರೂ ಇನ್ನೊಂದಷ್ಟು ಮಂದಿಯ ಹೆಸರು ಹರಿದಾಡುತ್ತಿದೆ. ಎಮ್ಮೆಲ್ಲೆ ರಘುವಿನ ಸಂಬಂಧಿಯೂ ಆಗಿರುವ ಸರ್ವಜ್ಞನಗರದ ಜೆ. ಭುವನೇಶ್ವರಿ, ಹೊಯ್ಸಳ ನಗರದ ಸವಿತಾ ರಮೇಶ್, ಛಲವಾದಿಪಾಳ್ಯದ ರೌಡಿ ಕದಿರೇಶ್‌ನ ಹೆಂಡತಿ ರೇಖಾ ಕದಿರೇಶ್, ಬಳೇಕನಹಳ್ಳಿಯ ಎಂ. ರೂಪಾ ರಮೇಶ್ ಅದರಲ್ಲಿ ಪ್ರಮುಖರು. ಭುವನೇಶ್ವರಿ ನಗರ ವ್ಯಾಪ್ತಿಯ ದಯಾನಂದ ಉಪಮೇಯರ್ ಆಗಿರುವುದರಿಂದ ಅಲ್ಲಿಗೆ ಇನ್ನೊಂದು ಸಾರಿ ಪ್ರಾತಿನಿಧ್ಯ ಸಿಗಲಾರದು. ಇನ್ನು ರೇಖಾ ಕದಿರೇಶ್‌ಗೆ ರೌಡಿಯ ಹೆಂಡತಿ ಎಂಬ 'ಖ್ಯಾತಿ'ಯ ಹೊರತಾಗಿ ಬೇರ್ಯಾವ ಯೋಗ್ಯತೆಯೂ ಇಲ್ಲ. ರೂಪಾ ರಮೇಶ್ ಎಂಎಲ್ಎ ಸತೀಶ್ ರೆಡ್ಡಿ ಬಣದವಳಾಗಿರುವುದರಿಂದ ಒಂದಷ್ಟು ಹವಾ ಎದ್ದಿದೆ. ಸತೀಶ್ ಅಶೋಕ್ ಪಟಾಲಂನವನಾದರೂ ಸ್ವತಂತ್ರವಾಗಿ ಮೇಯುವ ಉತ್ಸಾಹದಲ್ಲಿರುವುದರಿಂದ ತನ್ನ ಶಿಷ್ಯೆಯನ್ನು ಮೇಯರ್ ಮಾಡಲು ಹರಸಾಹಸ ನಡೆಸುತ್ತಿದ್ದಾರೆ. ಆದರಿದು ವರ್ಕೌಟ್ ಆಗೋ ಲಕ್ಷಣಗಳಿಲ್ಲ.


ಒಟ್ಟಾರೆಯಾಗಿ ಶಾರದಮ್ಮ ಮತ್ತು ರಾಜೇಶ್ವರಿ ನಡುವೆ ಪೈಪೋಟಿಯಿದ್ದರೂ ನಿಜವಾಗಿ ಅಖಾಡದಲ್ಲಿರುವುದು ಅಶೋಕ್ ಮತ್ತು ಸೋಮಣ್ಣ. ಇಬ್ಬರೂ ಕೂಡಾ ತಮ್ಮ ನಡುವಿನ ಮುಸುಕಿನ ಗುದ್ದಾಟವನ್ನು ಈ ಮೂಲಕ ಪಣಕ್ಕೊಡ್ಡಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ಬಿಬಿಎಂಪಿಯ ಅಗಾಧ ಹಣ ಲಪಟಾಯಿಸುವ ಆತುರ ಇವರಿಬ್ಬರಲ್ಲೂ ಕಾಣಿಸುತ್ತಿದೆ. ಮೇಯರ್ ಸ್ಥಾನದ ಖದರ್ರೇ ಅಂತಹುದಿದೆ. ಇಲ್ಲಿ ಮೇಯರ್ ನಿಧಿ ಅಂತಲೇ ಅಖಂಡ 150 ಕೋಟಿ ಬಿಡುಗಡೆಯಾಗುತ್ತದೆ. ಇದರಲ್ಲಿ ಕಡಿಮೆಯೆಂದರೂ ಮೂವತ್ತು ಪರ್ಸೆಂಟ್ ಲಪಟಾಯಿಸುವ ಅವಕಾಶಗಳಿವೆ. ಅಶೋಕ್ ತನ್ನ ಶಿಷ್ಯ ನಟರಾಜ್‌ರನ್ನು ಮುಂದಿಟ್ಟುಕೊಂಡು ಇದುವರೆಗೆ ನಡೆಸಿದ್ದು ಅದೇ ಕೆಲಸವನ್ನು.

ಇದೀಗ ಸೋಮಣ್ಣ ನುಂಗುವ ಅವಕಾಶ ತನ್ನದಾಗಿಸಿಕೊಳ್ಳುವ ಜಿದ್ದಿಗೆ ಬಿದ್ದಿದ್ದಾರೆ. ಈ ವಿಚಾರ ಮುಖ್ಯಮಂತ್ರಿ ಯಡ್ಡಿಯವರೆಗೂ ಹೋಗಿದೆ. ಒಳಗೊಳಗೇ ಸೋಮನ ಪರವಿರುವ ಯಡ್ಡಿ ಒಂದು ಸಾರಿ ನಿಮ್ಮೋರನ್ನೇ ಮೇಯರ್ ಮಾಡಿದ್ದಾಗಿದೆ. ಈಗ ಬೇರೆಯೋರಿಗೆ ಅವಕಾಶ ಕೊಡಿ ಅಂತ ನ್ಯಾಯ ಹೇಳಿದ್ದೂ ಆಗಿದೆ. ಆದರೆ ಅಶೋಕ್ ಪಟ್ಟುಬಿಡುತ್ತಿಲ್ಲ.

ಯಡ್ಡಿಯ ಅಂತಿಮ ನಿರ್ಧಾರದಲ್ಲಿ ಬಹುತೇಕ ಫಲಿತಾಂಶ ಅಡಗಿದೆಯಾದರೂ ಶಾರದಮ್ಮ ಮೇಯರ್ ಆಗೋ ಲಕ್ಷಣಗಳು ಸಾಕಷ್ಟಿವೆ. ಅಶೋಕ್‌ಗೆ ಕೂಡಾ ಅದೇ ಬೇಕಾಗಿದೆ. ಎಂಎಲ್ಎ ಮುನಿರಾಜನ ಹಂಬಲವೂ ಅದೇ. ಯಾಕೆಂದರೆ ಶಾರದಮ್ಮನನ್ನು ರಬ್ಬರ್ ಸ್ಟಾಂಪ್‌ನಂತೆ ಬಳಸಿಕೊಂಡ ಹಣಗುಂಜುವ ಅವಕಾಶಗಳು ಹೇರಳವಾಗಿವೆ!

● ಸಂತೋಷ್

ಉಪಮೇಯರ್ ಯಾರು?


ರಾಮಮೂರ್ತಿ


ಈ ಬಾರಿಯ ಉಪಮೇಯರ್ ಹುದ್ದೆ ಹಿಂದುಳಿದ ವರ್ಗ-ಎಗೆ ಮೀಸಲಾಗಿದೆ. ಇದಕ್ಕೂ ಕೂಡಾ ಮೇಯರ್ ಸ್ಥಾನಕ್ಕೆ ಸೃಷ್ಟಿಯಾಗಿರುವಂಥಾದ್ದೇ ಲಾಬಿಗಳು ಎಗ್ಗಿಲ್ಲದೆ ನಡೆಯುತ್ತಿವೆ.

ಸದ್ಯ ಶಾಕಾಂಬರಿ ನಗರ ವಾರ್ಡಿನ ಕುರುಬ ಸಮುದಾಯದ ಜಿಮ್ ಸೋಮ ಅಲಿಯಾಸ್ ಬಿ. ಸೋಮಶೇಖರ್ ಈ ರೇಸ್‌ನಲ್ಲಿದ್ದರೆ, ಜಯನಗರ ಒಂಭತ್ತನೇ ಹಂತದ ರಾಮಮೂರ್ತಿ ಹೆಸರೂ ಕೇಳಿಬರುತ್ತಿದೆ. ಬಸವೇಶ್ವರ ನಗರದ ಕಾರ್ಪೊರೇಟರ್ ಕಮ್ ಆರ್.ವಿ. ಹರೀಶ್ ಶಿಷ್ಯ ಪದ್ಮರಾಜ್ ಸುರೇಶ್ ಕುಮಾರ್ ಮೂಲಕ ಲಾಬಿಗೆ ಪ್ರಯತ್ನಿಸುತ್ತಿದ್ದಾನೆ.

ಆದರೆ ಸೋಮಶೇಖರ್ ನಿರ್ಣಾಯಕವಾಗಿ ಅಖಾಡಕ್ಕಿಳಿದಂತಿದೆ. ಜಾತಿ ಹೆಸರಿನಲ್ಲಿ ಈಶ್ವರಪ್ಪನಿಗೆ ಹತ್ತಿರಾಗಿ ಆ ಮೂಲಕ ಒತ್ತಡ ಹೇರಿಸುವ ಪ್ರಯತ್ನವನ್ನೂ ನಡೆಸುತ್ತಿದ್ದಾನೆ. ಈತನೇ ಉಪಮೇಯರ್ ಆದರೂ ಆಶ್ಚರ್ಯವಿಲ್ಲ ಎಂಬ ಮಾತುಗಳೂ ಕೇಳಿಬರುತ್ತಿವೆ.


ಚಾಮರಾಜನಗರ: ಎಂಎಲ್‌ಎ-ಎಂಎಲ್‌ಸಿ ಬೀದಿ ರಂಪ


ಕೆಳೆದೊಂದು ವಾರದಿಂದ ಜಿಲ್ಲಾಧಿಕಾರಿ ಅಮರನಾರಾಯಣ ಹಾಗೂ ಚಾಮರಾಜನಗರ ಕ್ಷೇತ್ರದ ಶಾಸಕ ಪುಟ್ಟರಂಗಶೆಟ್ಟಿಯ ನಡುವಿನ ಗುದ್ದಾಟ ಈಗ ಹಾದಿರಂಪ ಬೀದಿರಂಪವಾಗಿದೆ. ಈ ರಂಪಾಟಕ್ಕೆ ಕಾರಣ ಎಸ್.ಎಫ್.ಸಿ ಅನುದಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ 12.10 ಕೋಟಿ ಹಣದಲ್ಲಿ ಸಂದಾಯವಾಗಬೇಕಾದ ಪರ್ಸೆಂಟೇಜು!


ಅಮರನಾರಾಯಣ

2010-11ನೇ ಸಾಲಿನ ಈ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿಸಿದ್ದು ವಿಧಾನ ಪರಿಷತ್‌ನ ಸದಸ್ಯ ಪ್ರೊ.ಮಲ್ಲಿಕಾರ್ಜುನಪ್ಪ. ಆದರೆ ಶಾಸಕ ಪುಟ್ಟರಂಗಶೆಟ್ಟಿ ತನ್ನ ಅಧ್ಯಕ್ಷತೆಯಲ್ಲಿ ಕ್ರಿಯಾಯೋಜನೆ ಸಿದ್ಧಪಡಿಸಿ ಅದರಲ್ಲಿ ತನಗೆ ಬರಬೇಕಾದ ಕಮೀಷನ್ ಕೊಡಬೇಕೆಂದು ಹೋರಾಟಕ್ಕಿಳಿದಿದ್ದಾನೆ. ಆದರೆ ಜಿಲ್ಲಾಧಿಕಾರಿ ಅಮರನಾರಾಯಣ ಎಸ್.ಎಫ್.ಸಿ ಯೋಜನೆಯ ಕ್ರಿಯಾಯೋಜನೆ ಸಭೆಯನ್ನು ತನ್ನ ಅಧ್ಯಕ್ಷತೆಯಲ್ಲೇ ಮುಗಿಸಿದ್ದಾರಲ್ಲದೆ ಇಡೀ ಅನುದಾನದ ಹಣವನ್ನು ಎಂ.ಎಲ್.ಸಿ ಮಲ್ಲಿಕಾರ್ಜುನಪ್ಪನ ಆಣತಿಯಂತೆ ಹಂಚಲು ಸಿದ್ಧರಾಗಿದ್ದಾರೆ.

ಏಪ್ರಿಲ್ 5ರಂದು ನಡೆದ ಕ್ರಿಯಾಯೋಜನೆ ಸಭೆಗೆ ಅಮರ್ ನಾರಾಯಣರು ಪುಟ್ಟರಂಗ ಶೆಟ್ಟಿಯನ್ನು ಆಹ್ವಾನಿಸಿದ್ದರೂ ಆತ ಹಾಜರಾಗದೆ ಬೇಜವಾಬ್ದಾರಿ ಪ್ರದರ್ಶಿಸಿದ್ದ. ಆ ಸಭೆಯನ್ನು ಎಂಎಲ್‌ಸಿ ಮಲ್ಲಿಕಾರ್ಜುನಪ್ಪನ ಅಧ್ಯಕ್ಷತೆಯಲ್ಲಿ ಮುಗಿಸಿದ ಅಮರ್‌ನಾರಾಯಣ ಕ್ರಿಯಾಯೋಜನೆ ಸಿದ್ಧಪಡಿಸಿ ಮಲ್ಲಿಕಾರ್ಜುನಪ್ಪ ಹೇಳಿದ ಕಡೆಗೆಲ್ಲಾ ಕೋಟಿ ಕೋಟಿ ಹಣ ಬಿಡುಗಡೆ ಮಾಡಿ ಬಿಜೆಪಿ ನಿಷ್ಠೆಯನ್ನ ಜಾಹೀರುಪಡಿಸಿದರು. ಸ್ವಹಿಂತಾಸಕ್ತಿಗೆ ಜನಪರ ಬಣ್ಣ ಬಳಿದ ಶಾಸಕ ಪುಟ್ಟರಂಗಶೆಟ್ಟಿ ಜಿಲ್ಲಾಧಿಕಾರಿಯ ಸರ್ವಾಧಿಕಾರಿ ಧೋರಣೆಯ ವಿರುದ್ಧ ಸೆಟೆದೆದ್ದ. ಈ ಬಗ್ಗೆ ಪತ್ರಿಕಾಗೋಷ್ಠಿ ಕರೆದು ಜಿಲ್ಲಾಧಿಕಾರಿ ವಿರುದ್ಧ ಅಸೆಂಬ್ಲಿಯೊಳಗೆ ಹಕ್ಕುಚ್ಯುತಿ ಮಂಡಿಸುವುದಾಗಿ ಹೂಂಕರಿಸಿದ. ಅಲ್ಲಿಂದ ಶುರುವಾದದ್ದು ಪಕ್ಕಾ ರಾಜಕೀಯದ ಚದುರಂಗದಾಟ ಹಾಗೂ ಚಾಮರಾಜನಗರ ಅಧಿಕಾರಿಗಳ ಮಧ್ಯ ಇರುವ ಮುಸುಕಿನ ಗುದ್ದಾಟದ ಬಯಲಾಟ!


ಪುಟ್ಟರಂಗ ಶೆಟ್ಟಿ


ಮಲ್ಲಿಕಾರ್ಜುನಪ್ಪ

ಹೀಗೆ ಡಿ.ಸಿ, ಎಂ.ಎಲ್.ಸಿ, ಎಂ.ಎಲ್.ಎ, ತಹಸೀಲ್ದಾರ್‌ಗಳ ನಡುವೆ ನಡೆಯುತ್ತಿರುವ ಬಹಿರಂಗ ಕದನವು ಸಾರ್ವಜನಿಕ ಜಗಳದ ಸ್ವರೂಪ ಪಡೆದುಕೊಂಡಿತು. ಈ ಗುದ್ದಾಟವನ್ನೇ ಚಾಮರಾಜನಗರದ ತಹಸೀಲ್ದಾರ್ ಪಿ.ನಂದಿನಿ ತನ್ನ ಅಧಿಕಾರವನ್ನು ಮೊಟಕುಗೊಳಿಸಿದ ಡಿ.ಸಿ.ಗೆ ಪಾಠ ಕಲಿಸಲು ಬಳಸಿಕೊಂಡಿದ್ದಾಳೆ. ಶಾಸಕ ಪುಟ್ಟರಂಗಶೆಟ್ಟಿಯ ಜೊತೆ ಒಳ ಒಪ್ಪಂದ ಮಾಡಿಕೊಂಡು ದೂರು, ಹಕ್ಕುಚ್ಯುತಿ ಮಂಡನೆ ಎಂಬ ಅಸ್ತ್ರ ಬಳಸಿಕೊಂಡು ಡಿ.ಸಿಯ ಎತ್ತಂಗಡಿಗೆ ಸಂಚು ರೂಪಿಸಿದ್ದಾಳೆ.


ಪುಟ್ಟರಂಗಶೆಟ್ಟಿ ಹಿಂದೆ ಚಾಮರಾಜನಗರ ನಗರಸಭೆಯ ಪೌರಾಯುಕ್ತ ಪ್ರಕಾಶ್‌ನೊಂದಿಗೆ ಒಳಒಪ್ಪಂದ ಮಾಡಿಕೊಂಡು ಕಾಮಗಾರಿಗಳಿಂದ ಪರ್ಸೆಂಟೇಜ್ ಪಡೆಯುತ್ತಿದ್ದ. ಕೊನೆಗೆ ಇದೇ ವಿಚಾರಕ್ಕಾಗಿ ಪೌರಾಯುಕ್ತ ಪ್ರಕಾಶ್ ಜೊತೆ ಬಹಿರಂಗ ಗುದ್ದಾಟಕ್ಕಿಳಿದು ಅವರನ್ನು ಎತ್ತಂಗಡಿ ಮಾಡಿಸಿದ್ದ. ಅಂಥಾದ್ದರಲ್ಲಿ 12 ಕೋಟಿಯಷ್ಟು ಅನುದಾನದ ಪರ್ಸೆಂಟೇಜ್ ಕಳೆದುಕೊಂಡಾನೆಯೇ?


ನಂದಿನಿ

ಸಿಕ್ಕಿದ್ದನ್ನೆಲ್ಲಾ ನುಂಗುವ ಜಾಯಮಾನದ ಪುಟ್ಟರಂಗಶೆಟ್ಟಿ ಚಾಮರಾಜನಗರ ಟೌನ್‌ನಲ್ಲಿರುವ ನಾಯಕ ಹಾಗೂ ಉಪ್ಪಾರ ಜನಾಂಗದ ಸ್ಮಶಾನದ 2.20 ಎಕರೆ ಜಾಗವನ್ನು ಕಬಳಿಸಿದ್ದ. ಅಲ್ಲೊಂದು ಉಪ್ಪಾರ ಸಮುದಾಯ ಭವನ ಕಟ್ಟುತ್ತೇನೆ ಅಂತ ಡ್ರಾಮಾ ಮಾಡಲು ಹೋಗಿ ಅಮರ್ ನಾರಾಯಣರ ಮೇಲೆ ಒತ್ತಡ ಹೇರಿ ಮಾತಿನಲ್ಲೇ ತಿವಿಸಿಕೊಂಡಿದ್ದ. ಅಲ್ಲಿಂದ ಶುರುವಾದ ಡಿ.ಸಿ ಮತ್ತು ಶಾಸಕನ ನಡುವಿನ ತೆರೆಮರೆಯ ಗುದ್ದಾಟ ಈಗ ಎಸ್.ಎಫ್.ಸಿ ಅನುದಾನದ ಪರ್ಸೆಂಟೇಜ್ ಹಂಚಿಕೆಯವರೆಗೂ ಬಂದಿದೆ. ಇದಕ್ಕೆಲ್ಲ ತಲೆಕೆಡಿಸಿಕೊಳ್ಳದ ಅಮರ್‌ನಾರಾಯಣ ಮಾತ್ರ ಮಲ್ಲಿಕಾರ್ಜುನಪ್ಪನೇ ತನ್ನ ಪರವಿರುವಾಗ ತನಗೇನು ಭಯ ಎಂಬ ಅಹಂನಲ್ಲಿದ್ದಾರೆ.

ಒಟ್ಟಿನಲ್ಲಿ ಚಾಮರಾಜನಗದಲ್ಲಿ ಬಿಜೆಪಿಯ ಪ್ರೊ. ಮಲ್ಲಿಕಾರ್ಜುನಪ್ಪ ವಿರುದ್ಧ ಕಾಂಗ್ರೆಸ್‌ನ ಶಾಸಕ ಪುಟ್ಟರಂಗಶೆಟ್ಟಿ, ಡಿ.ಸಿ ವಿರುದ್ಧ ತಹಸೀಲ್ದಾರ್‌ಗಳ ನಡುವೆ ನಡೆಯುತ್ತಿರುವ ಗುದ್ದಾಟ ನಿರ್ಲಜ್ಜತನದ ಪರಮಾವಧಿ ತಲುಪಿದೆ. ಆ ಮೂಲಕ ಅಭಿವೃದ್ಧಿಯೆಂಬುದು ಅಧಿಕಾರಿಗಳ, ಪುಢಾರಿಗಳ ಸುಗ್ಗಿಯಾಗಿದೆ. ಹೀಗಾದರೆ ಹೇಗೆ?

● ಚಿಕ್ಕಮಾಳಿಗೆ



ಕೈಗಾ ಸುತ್ತ ಅನುಮಾನ-ಆತಂಕದ ಹುತ್ತ!!
ಬೆಂಕಿ ಇಲ್ಲದೆ ಹೊಗೆ ಬರುತ್ತದಾ?

ಹೌದೆನ್ನುತ್ತಾರೆ ಕೈಗಾ ಅಣುಸ್ಥಾವರ ಪಾರುಪತ್ಯೆಗಾರ ...ಜ್ಞಾನಿ ಮಹಾಶಯರು! ಈ ಕೈಗಾ ಅಣುಸ್ಥಾವರದ ...ಭತ್ಸ ಆಡುಗೋಲಜ್ಜಿ ಕತೆಗಳೇ ಹಾಗೆ; ಕಾಡುವ ಶನಿ ...ರಾಣದ ಹಾಗೆ! ಹಸಿ-ಹಸಿ ಸುಳ್ಳು, ನಿಗೂಢ ಪಾತಕಗಳು, ...ನುಮಾನಗಳು ಕೈಗಾ ಸ್ಥಾವರ ಮತ್ತದರ ಹಿಂದೆ-ಮುಂದೆ ...ರುವ ಸರ್ಕಾರಿ ಪಂಡಿತರ ಜನ್ಮಕ್ಕಂಟಿಕೊಂಡೇ ಬಂದಿದೆ. ...ರವಾರದ ದಟ್ಟ ವನರಾಶಿಯ ನಡುವೆ ನೇಣಿನ ಕುಣಿಕೆ ...ಂತೆ ಕಾಣಿಸುತ್ತಿರುವ ಈ ಅನಾಹುತಕಾರಿ ಅಣುವಿದ್ಯುತ್ ...ವರ ಸ್ಥಾಪನೆಯ ಕ್ಷಣದಿಂದಲೂ ಉತ್ತರ ಕನ್ನಡಿಗರನ್ನು ...ಾಲಾಗಿಸುತ್ತಲೇ ಇದೆ.

ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ (ಎನ್‌ಪಿಸಿ) ...ಗಾದಲ್ಲಿರುವ ಅಣುಸ್ಥಾವರ ಮತ್ತದರ ಆಚೀಚೆಯ ...ವಾಸ್ಥಾನಗಳಿವೆಯಲ್ಲ, ಅದೊಂದು ನಿಗೂಢ-ಭಯಾನಕ ...ಾ!! ಅಲ್ಲಿ ಆಗಬಾರದ್ದೆಲ್ಲ ಆಗುತ್ತಿದೆ. ಸುರಕ್ಷತೆ ಎಂಬುದು ...ೀ ಬೊಗಳೆ. ಪ್ರಕೃತಿಗೆ ನೇಣು ಹಾಕುವುದರಿಂದ ಹಿಡಿದು ...ವರಾಶಿಯ ಸರ್ವನಾಶ ಮಾಡುವವರೆಗಿನ ಎಲ್ಲ ಪಾತಕ ...ಲ್ಲಿ ರಹಸ್ಯವಾಗಿ ನಡೆಯುತ್ತಿದೆ! ಸ್ಥಾವರದ ಪ್ರಭೃತಿಗಳಲ್ಲಿ ...ವಘಡಕ್ಕೆ ಬೇಕಾದ ನಿರ್ಲಕ್ಷ್ಯ-ದೌರ್ಬಲ್ಯ-ಭ್ರಷ್ಟಾಚಾರ-...ಷಮ್ಯಗಳು ತುಂಬಿ ತುಳುಕುತ್ತಿದೆ. ಆದರೆ ಇದ್ಯಾವುದೂ ...ರಜಗತ್ತಿಗೆ ಗೊತ್ತಾಗದಂತೆ ವ್ಯವಸ್ಥಿತವಾಗಿ ಮುಚ್ಚಿಡ...ಗುತ್ತಿದೆ.

... ಊರಿಗೇ ಬೆಂಕಿ ಇಕ್ಕುವಂಥ-ವಿಕಿರಣ ಸೋರಿ ಜನ ...ತ್ತೇ ಬೂದಿಯಾಗುವಂಥ ಕರ್ಮಕಾಂಡ ನಡೆದರೂ ...ಲ್ಲ ಅಣುಶಕ್ತಿ ಗೌಪ್ಯತಾ ಕಾಯ್ದೆ(1962)ಯಲ್ಲಿ ...ತ್ತಿಟ್ಟು ಜನರನ್ನು ಯಾಮಾರಿಸಲಾಗುತ್ತಿದೆ. ಎನ್‌ಸಿಪಿ ...ಾ ಸ್ಥಾವರದ ಸುರಕ್ಷತೆ ಬಗ್ಗೆ ಲಾಗಾಯ್ತಿನಿಂದಲೂ ...ರ ಮಾತಾಡುತ್ತದೆ. ಆದರೆ ಕೈಗಾದಲ್ಲಿ ಒಂದರ ...ದೊಂದರಂತೆ ನಡೆಯುತ್ತಿರುವ ಅವಘಡಗಳು ...ಸಿಪಿ ಆಧಾರಿತ ವಿಜ್ಞಾನಿಗಳು ಸುಳ್ಳು ಬುರುಕ ...ಬುದು ಸಾಬೀತುಮಾಡುತ್ತಿದೆ. ಜನರು ಎನ್‌ಸಿಪಿ ...ೀಲೆ ವಿಶ್ವಾಸ ಕಳೆದುಕೊಂಡು, ಅಪನಂಬಿಕೆ-...ಾಯದ ಅಂಜಿಕೆಯಿಂದ ತತ್ತರಿಸುತ್ತಿದ್ದಾರೆ. ನಿಗೂಢ ...ಸ್ಸಡಿಗಳಿಂದ ಕೈಗಾ ಕುಖ್ಯಾತಿಯೆನಿಸಿದೆ.

ಬೆಂಕಿ! ಬೆಂಕಿ!!

... ಕಳೆದ ಶುಕ್ರವಾರ (8-4-2011) ಮಟಮಟ ...ಧ್ಯಾಹ್ನದ ಹೊತ್ತು ಕೈಗಾದ ಮೂರನೇ ವಿದ್ಯುತ್ ...ತ್ಪಾದನಾ ಘಟಕದಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡಿದೆ. ...ಗೆಯ ಉಂಡೆ-ಉಂಡೆಗಳೇ ಮೇಲೆದ್ದು ಪರಿಸರ ಕೆಡಿಸಿದೆ. ...ಬ್ಬಂದಿ ಅಸ್ವಸ್ಥಗೊಂಡಿದ್ದಾರೆ. ವಿಕಿರಣ ಸೋರಿಕೆಯ ಭಯ ...ದ ಸುಮಾರು 25 ಕಿ.ಮೀ. ಸುತ್ತಲಿನ 46 ಹಳ್ಳಿಗರು ...ಾಲಾಗಿ ಹೋಗಿದ್ದಾರೆ.

... ಕೈಗಾದಲ್ಲಿರುವ ಎನ್‌ಸಿಪಿ ಅಧಿಕಾರಿ-ವಿಜ್ಞಾನಿಗಳು ...ಂಥ ಜೀವವಿರೋಧಿ ಸೋಂಭೇರಿಗಳೋ ನೋಡಿ! ...ೋಬ್ಬರಿ 2-4 ತಾಸು ಈ ಬೆಂಕಿ ನಂದಿಸಲು ಅವರಿಗೆ ...ಕಾಯ್ತು!! ಈ ಹೊಣೆಗೇಡಿಗಳು ಬೆಂಕಿ ಪಟ್‌ಡೌನ್ ...ಡಿದ ಸುದ್ದಿ ಸಾರ್ವಜನಿಕರಿಗೆ ತಿಳಿಸಿದ್ದೂ ವಿಳಂಬವಾಗೇ! ...ದು ಜಿಲ್ಲಾಧಿಕಾರಿ ಕೃಷ್ಣಯ್ಯ ಕೈಗಾದ ಅಧಿಕಾರಿಗಳ ...ಯೇ ಇದ್ದರು. ಆತ ಜಪಾನಿನ ಫುಕುಶಿಮಾ ಅಣುಸ್ಥಾವರ ...ನಾಮಿಯಿಂದ ಹೊತ್ತಿ ಉರಿದನಂತರ ಬೆಚ್ಚಿಬಿದ್ದಿರುವ ...ರ್ಕಾರದ ಆದೇಶದಂತೆ ಅಕಸ್ಮಾತ್ ಕೈಗಾದಲ್ಲಿ ...ಾದರೆ ಅದನ್ನು ನಿಭಾಯಿಸುವುದು ಹೇಗೆಂಬ ಬಗ್ಗೆ ...ಸಿಪಿ ಪಂಡಿತರ ಸಂಗಡ ಚರ್ಚೆ ನಡೆಸುತ್ತಿದ್ದರು.

... ಅತ್ತ ಡಿಸಿ ಸಾಹೇಬರು ಸ್ಥಾವರದಲ್ಲಿ ಅವಘಡವಾದರೆ ...ನನ್ನು ಸಂರಕ್ಷಿಸುವ ಬಗ್ಗೆ, ಪರಿಸ್ಥಿತಿ ನಿರ್ವಹಣೆ ಬಗ್ಗೆ ಚರ್ಚೆ ನಡೆಸುತ್ತಿದ್ದರೆ ಇತ್ತ ಮೂರನೇ ರಿಯಾಕ್ಟರ್‌ನಲ್ಲಿ ಭರ್ಜರಿ ಬೆಂಕಿ ಹೊತ್ತಿಕೊಂಡಿತ್ತು, ಸುಮಾರು 4.15ರ ಹೊತ್ತಿಗೆ ಸುರಕ್ಷತಾ ಅಲಾರಾಂ ಕೂಡ ಮೊಳಗಿತ್ತು, ಆದರೆ ಮರುದಿನ ದವರೆಗೂ ಮಾನ್ಯ ಜಿಲ್ಲಾಧಿಕಾರಿಗಳಿಗೆ ಕೈಗಾದಲ್ಲಿ ಬೆಂಕಿ ಬಿದ್ದಿದ್ದು ಗೊತ್ತಾಗಲೇ ಇಲ್ಲ, ಪತ್ರಿಕೆ ಓದಿದನಂತರವೇ ಡಿಸಿ ಸಾಹೇಬರಿಗೆ ಕೈಗಾ ಕರ್ಮ ಗೊತ್ತಾಗಿದೆ. ಇದು ಎನ್‌ಪಿಸಿಯ ವಿಪತ್ತು ನಿರ್ವಹಣಾ ಪ್ರಹಸನ!

ಇದಕ್ಕಿಂತಲೂ ಅಪಾಯಕಾರಿಯಾದ ಭಂಡತನ ಕೈಗಾ ಅಣುಸ್ಥಾವರ ಯೋಜನಾ ಮುಖ್ಯಸ್ಥರು ಮೆರೆದಿದ್ದಾರೆ. ಆತನ ಮಾತು ತಮಾಷೆಯಾಗಿ ಕಂಡರೂ ತುಂಬಾ ಅನಾಹುತ ಕಾರಿಯಾಗಿದೆ. "ರಿಯಾಕ್ಟರಿನಲ್ಲಿ ಹೊಗೆ ಕಾಣಿಸಿಕೊಂಡ ಕೂಡಲೇ ಅಲರಾಂ ಬಡಿದುಕೊಂಡಿದೆ.... ತಕ್ಷಣ ಘಟಕ ಷಟ್‌ಡೌನ್ ಮಾಡಿದ್ದೇವೆ... ನಮ್ಮದು ತುಂಬ ಸುರಕ್ಷಿತ-ಸುಸಜ್ಜಿತ ಘಟಕ... ಹಾಗಾಗಿ ಅನಾಹುತವೇನಾಗಿಲ್ಲ... ಹೊಗೆ ಮಾತ್ರ ಹೇಗೆ ಬಂತು...? ಎಲ್ಲಿಂದ ಬಂತು? ಗೊತ್ತಾಗಿಲ್ಲ... ಬೆಂಕಿಯಂತೂ ಇಲ್ಲವೇ ಇಲ್ಲ..." ಎಂದು ಯೋಜನಾ ಮುಖ್ಯಸ್ಥ ಜೆ.ಪಿ.ಗುಪ್ತ ಬೊಗಳೆ ಬಿಟ್ಟಿದ್ದಾರೆ. ಇಲ್ಲಿರುವ ತಮಾಷೆಯೆಂದರೆ ಈ ಮಹಾನ್ ವಿಜ್ಞಾನಿಗಳಿಗೆ ಬೆಂಕಿ ಇಲ್ಲದೆ ಹೊಗೆ ಕಾಣಿಸಿದೆ!! ಇದು ಕಾರವಾರದ ಡಿಸಿ ಕೃಷ್ಣಯ್ಯ ನಂಬಿದರೂ ಎಪಿಸಿ ಮೇಲೆ ಒಂಚೂರೂ ನಂಬಿಕೆ ಇಲ್ಲದ ಉತ್ತರ ಕನ್ನಡಿಗರು ಮಾತ್ರ ನಂಬುತ್ತಿಲ್ಲ




ಗುಮ್ಮಟ ಡಮಾರ್ ಆಗಿತ್ತು!!

ಬೆಂಕಿ ಇಲ್ಲದೆ ಹೊಗೆ ಸೃಷ್ಟಿಸಿದ ಎನ್‌ಪಿಸಿ ಅಧಿಕಾರಿಗಳು ಇಂಥ ಸುಳ್ಳು ಪವಾಡ ಅಲ್ಲಿಂದಿಲ್ಲಿಗೂ ಮಾಡುತ್ತಲೇ ಬಂದಿದ್ದಾರೆ. ಜಪಾನಿನ ಫುಕುಶಿಮಾ ಅಣುವಿದ್ಯುತ್ ಸ್ಥಾವರ ಸ್ಫೋಟಗೊಂಡು ಹೊತ್ತಿ ಉರಿದಾಗಲೂ ಕೈಗಾ ಸ್ಥಾವರದ ಸರದಾರರು ಆತ್ಮಘಾತಕ ಭರವಸೆಯ ಮಾತೇ ಆಡಿದ್ದಾರೆ. ಕೈಗಾ ಸ್ಥಾವರ. ಯಾವಾಗಲೂ ಸುರಕ್ಷಿತ. ಇದು ವಿಭಿನ್ನ ತಂತ್ರಜ್ಞಾನದ್ದು. ಸಮುದ್ರ ತೀರದಿಂದ 60 ಕಿ.ಮೀ.ದೂರದಲ್ಲಿದೆ ಸ್ಥಾವರ. ಅಲ್ಲದೆ ಭೂಕಂಪದ ಮೂರನೇ ವಲಯದಲ್ಲಿದೆ...." ಎಂದು ಎನ್‌ಸಿಪಿಯವರು ಹೇಳಿದ್ದಾರೆ. ದುರಂತವೆಂದರೆ, ಇದಕ್ಕೆ ವ್ಯತಿರಿಕ್ತವಾಗಿ ಅಣುವಿಜ್ಞಾನಿ ಎಂ.ಆರ್.ಶ್ರೀನಿವಾಸನ್ ಇಂಡಿಯಾದ ಅಣುಸ್ಥಾವರಗಳ ಸುರಕ್ಷತೆ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಇದು ಫುಕುಶಿಮಾ ದುರಂತದ ಬಳಿಕದ ನಿಲುವು!

ಕೈಗಾದಲ್ಲಿ ಭೂಕಂಪ-ಸುನಾಮಿ ಯಾವುದೂ ಇಲ್ಲದೆ ಮೊದಲ ಘಟಕದ ಗುಮ್ಮಟ ನಿರ್ಮಾಣ ಹಂತದಲ್ಲೇ ಕುಸಿದು ಬಿದ್ದಿತ್ತು, ಅದು 1994 ಮೇ 13ರ ಮಧ್ಯಾಹ್ನದ 2 ಗಂಟೆಯ ಹೊತ್ತು, ಅಣುವಿದ್ಯುತ್ ತಯಾರಿಕೆಗೆಂದು ತುಂಬ 'ಮುತುವರ್ಜಿ' ವಹಿಸಿ ಕಟ್ಟುತ್ತಿದ್ದ ಮೊದಲ ಘಟಕದ ಗುಮ್ಮಟ ತುದಿಯ ಕಾಲುಭಾಗ ಕಾಂಕ್ರೀಟ್ ದೊಪದೊಪನೆ ಕುಸಿದು ಬಿದ್ದಿತ್ತು, ಅಂತಿಂಥ ಕಾಂಕ್ರಿಟ್ ಇದಾಗಿರಲಿಲ್ಲ, ವಿಶೇಷ ಸಿಮೆಂಟ್, ಭರ್ಜರಿ ಸೀಲ್ ಬಾರ್ ಬೆಂಡಿಂಗ್‌ನಿಂದ ಗೋಪುರ ಕಟ್ಟಲಾಗಿತ್ತು, ಪ್ರೀಸ್ಟ್ರೆಸ್ ಕಾಂಕ್ರಿಟ್ ಇದು. ಒಳಗಡೆ ಅಣು ವಿದಳನ ಯಂತ್ರ, ಟರ್ಬೈನ್‌ಗಳೆಲ್ಲ ಅಳವಡಿಸಲಾಗಿತ್ತು, ಲಾರ್ಸನ್ ಅಂಡ್ ಟರ್ಬೋ ಎಂಬ ಪ್ರತಿಷ್ಠಿತ ಗುತ್ತಿಗೆದಾರ ಕಂಪೆನಿ ಈ ಕಾಮಗಾರಿ ಮಾಡಿತ್ತು, 40 ಮೀಟರ್ ಎತ್ತರದ ಗೋಪುರ ಕುಸಿದು ಬಿದ್ದಿತ್ತು.

ಕಾಮಗಾರಿ ಪಕ್ಕಾ ಕಳಪೆಯಾಗಿತ್ತು, ಎನ್‌ಪಿಸಿ ಅಧಿಕಾರಿಗಳು-ವಿಜ್ಞಾನಿಗಳು ಎಲ್ ಅಂಡ್ ಟಿ ಜತೆ ಸೇರಿಕೊಂಡು ಭ್ರಷ್ಟಾಚಾರ ನಡೆಸಿದ್ದರು. ಎನ್‌ಪಿಸಿ ಅಧಿಕಾರಿಗಳಂತೂ ಅಕ್ಷಮ್ಯ ಬೇಜವಾಬ್ದಾರಿಯಿಂದ ಕಾಮಗಾರಿ ಉಸ್ತುವಾರಿ ನಡೆಸಿದ್ದರು. ಹಾಗಾಗಿ ನಿರ್ಮಾಣ ಹಂತದಲ್ಲೇ ಗುಮ್ಮಟ ನೆಲಕ್ಕುರುಳಿತ್ತು! ಎಲ್ ಅಂಡ್ ಟಿ ಕಂಪೆನಿಯ ಪ್ರತಿಷ್ಠೆ ಮಣ್ಣುಪಾಲಾಗಿದ್ದರೆ, ಎನ್‌ಪಿಸಿ ಪಂಡಿತ, ಪ್ರಭೃತಿಗಳ ತಂತ್ರಜ್ಞಾನ-ಯೋಗ್ಯತೆ ಜಗಜ್ಜಾಹೀರಾಗಿತ್ತು, ಸರಿಸುಮಾರು 40 ಮಂದಿ ಕಾರ್ಮಿಕರು-ಸಿಬ್ಬಂದಿ ಮೇಲೆ ಉರುಳಿದ ಗುಮ್ಮಟ ದೊಡ್ಡ ದುರಂತವನ್ನೇ ಮಾಡಿತ್ತು.

ಕೈಗಾ ಸ್ಥಾವರದ ಸರದಾರರು ಈ ಅವಘಡದ ಸುದ್ದಿ ಬಹಿರಂಗವಾಗದಂತೆ ನೋಡಿಕೊಳ್ಳಲು ತಿಪ್ಪರಲಾಗವೇ ಹಾಕಿದ್ದರು. ಗಾಯಾಳುಗಳನ್ನು ಸಿಬ್ಬಂದಿಗಳನ್ನು ಹೊರಬಿಡದೆ ಅಲ್ಲೇ ಚಿಕಿತ್ಸೆ ಕೊಡಿಸಲು ಹವಣಿಸಿದರು. ಆದರೆ ಅದು ಸಾಧ್ಯವಾಗದಿದ್ದಾಗ ಅನಿವಾರ್ಯವಾಗಿ ಗಾಯಾಳುಗಳನ್ನು ಜಿಲ್ಲಾ ಕೇಂದ್ರ ಕಾರವಾರಕ್ಕೆ ತರಲೇಬೇಕಾಯ್ತು, ಆಗ ಅದೆಷ್ಟೇ ಅದುಮಿಟ್ಟರೂ ಗುಟ್ಟು ರಟ್ಟಾಯ್ತು, ಆಗ ಮತ್ತೆ ಸುಳ್ಳು ಬೊಗಳಿದರು. ಎನ್‌ಪಿಸಿ ಪರಾಕ್ರಮಿಗಳು



"ಏನೇನೂ ಆಗಿಲ್ಲ... ಸಣ್ಣದೊಂದು ಸ್ಲಾಬ್ ಬಿತ್ತಷ್ಟೇ... ಕ್ವಾಲಿಟಿ ವರ್ಕ್ ನಡೆಯುತ್ತಿದೆ... " ಎಂದು ಜನರನ್ನು ದಿಕ್ಕು ತಪ್ಪಿಸಲು ಹಾರಾಡಿದರು. ಆಗ ಯೋಜನಾ ಮುಖ್ಯಸ್ಥನಾಗಿದ್ದ ತಿಕ್ಕಲು ತಿವಾರಿಯಂತೂ ಹೊಟ್ಟೆ ತುಂಬಾ ಮೇಯ್ದು ದಗಲ್ಬಾಜಿ ಮಾತಾಡುತ್ತಲೇ ಕಾರವಾರಿಗರಿಗೆ ಗಂಡಾಂತರ ತಂದಿಟ್ಟುಹೋದ!!

ಗುಮ್ಮಟ ಕುಸಿತದ ನಂತರ ಅಣುನಿಯಂತ್ರಣಾ ಮಂಡಳಿ ತನಿಖೆ ನಡೆಸಿತು. ಕೈಗಾದ ಕಾಮಗಾರಿಗಳೆಲ್ಲ ಕಳಪೆ ಎಂದು ಸರ್ಟಿಫಿಕೇಟು ಕೊಟ್ಟಿತು. ಇಡೀ ಗುಮ್ಮಟವನ್ನೇ ಕೆಡವಿ ಹೊಸದಾಗಿ ಕಟ್ಟಲು ಕಟ್ಟಪ್ಪಣೆ ಮಾಡಿತು. ಅಣುಸ್ಥಾವರ ಕಾರ್ಯಾರಂಭ ಮಾಡಿದ ನಂತರ ಗುಮ್ಮಟವೇನಾದರೂ ಕುಸಿದಿದ್ದರೆ ಏನಾಗುತ್ತಿತ್ತು? ವಿಶ್ವದಲ್ಲೇ ವಿಭಿನ್ನ ತಂತ್ರಜ್ಞಾನ-ಗುಣಮಟ್ಟದ ಕಾಮಗಾರಿ ಮಾಡಿ ಗುಮ್ಮಟ ಕಟ್ಟಲಾಗಿದೆ ಎಂಬ ಎನ್‌ಪಿಸಿ ಪಾಪಿಗಳ ಮಾತು ನಂಬಿ ಕುಂತಿದ್ದರೆ ಕಾರವಾರ ಸ್ಮಶಾನವಾಗುತ್ತಿತ್ತಲ್ಲವೇ? ಸುನಾಮಿ-ಭೂಕಂಪ ಏನೂ ಇಲ್ಲದೆ ಚೆರ್ನೋಬಿಲ್, ಫುಕುಶಿಮಾದಂತಹ ಭೀಕರ ಅನಾಹುತ ಉತ್ತರ ಕನ್ನಡ, ಬೆಳಗಾವಿ, ಗೋವಾದಲ್ಲಿ ಆಗುತ್ತಿತ್ತು!! ಇದು ಕೈಗಾ ಅಣುಸ್ಥಾವರದ ಸುರಕ್ಷತೆ; ಎನ್‌ಪಿಸಿಯ ಅಣುತಂತ್ರಜ್ಞರ ದುಷ್ಕೃತಿ-ಭ್ರಷ್ಟತೆ ಒಟ್ಟೊಟ್ಟಿಗೇ ಸಾಬೀತುಪಡಿಸುವಂತಿದೆಯಲ್ಲವೇ?

ಇವತ್ತಿಗೂ ಈ ಪಾತಕ ಕಾಮಗಾರಿ ಬಗ್ಗೆಯಾಗಲಿ, ಅದರ ಹಿಂದಿನ ವಿಜ್ಞಾನಿಗಳ ಹೊಣೆಗೇಡಿತನದ ಕುರಿತಾಗಲಿ ಅಥವಾ ಗೋಲ್‌ಮಾಲ್-ಭ್ರಷ್ಟಾಚಾರದ ಬಗ್ಗೆಯಾಗಲಿ ಸಮಗ್ರ ತನಿಖೆ ಎಂಬುದೇ ನಡೆದಿಲ್ಲ; ಅಣುಶಕ್ತಿ ಇಲಾಖೆ ಯಾರಿಗೂ ಶಿಕ್ಷೆ ವಿಧಿಸಿಲ್ಲ, ದೇಶದ ಅಣುಶಕ್ತಿ ಕಾಯ್ದೆಯಂತೆ ಈ ಕರ್ತವ್ಯಚ್ಯುತಿ, ಕರ್ಮಕಾಂಡ, ಸ್ಕಾಂಡಾಗಳ ಬಗ್ಗೆ ಬಹಿರಂಗ ವಿಚಾರಣೆ-ಚರ್ಚೆ ನಡೆಸುವಂತಿಲ್ಲ, ಸಂಸತ್ತು, ಜನಪ್ರತಿನಿಧಿ ಅಥವಾ ಸಾರ್ವಜನಿಕ ಲೆಕ್ಕಪತ್ರ ಸಮಿತಿಯೂ ಇದನ್ನು ಪ್ರಶ್ನಿಸುವಂತಿಲ್ಲ, ಸರಿ ಒಪ್ಪೋಣ. ದೇಶದ ಭದ್ರತೆ ಪ್ರಶ್ನೆಯಲ್ಲವಾ? ಹಾಗಾದರೆ ರಹಸ್ಯ ತನಿಖೆ ನಡೆಸಬಾರದೆಂದೇನೂ ಇಲ್ಲವಲ್ಲ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಬಹುದಲ್ಲ, ತೀರಾ ಆಳುವವರಿಗೆ ಕೈಗಾ ಸುತ್ತಲಿನ ಜನರ ಜೀವಕ್ಕಿಂತ ಭ್ರಷ್ಟ-ಬೇಜವಾಬ್ದಾರಿ ಪಂಡಿತರ ಪ್ರತಿಷ್ಠೆಯೇ ಪ್ರಧಾನವಾಗಿದೆಯಾ? ಇಂಥದೊಂದು ಅನುಮಾನ-ಆಕ್ರೋಶ ಇವತ್ತಿಗೂ ಕಾರವಾರ ಜಿಲ್ಲೆಯಲ್ಲಿದೆ.....

ನಿಗೂಢ ಕಾರಸ್ಥಾನ

ಕೈಗಾ ಅಣುವಿದ್ಯುತ್ ಉತ್ಪಾದನಾ ಕೇಂದ್ರವೆಂದರೆ ಅದೊಂದು ಅವ್ಯವಹಾರ-ಅವಾಂತರ-ಅಧಿಕಾರದಾಹ-ವೈಷಮ್ಯಗಳ ಸಾಮ್ರಾಜ್ಯ!! ಇಲ್ಲಿ ಸಣ್ಣಮಟ್ಟದ ಸಿಬ್ಬಂದಿ ಮಧ್ಯವಷ್ಟೇ ಅಲ್ಲ, ದೊಡ್ಡ ಯೋಜನಾ ಮುಖ್ಯಸ್ಥರು, ವೈಜ್ಞಾನಿಕ ಅಧಿಕಾರಿಗಳ ನಡುವೆಯೂ ಶೀತಲಸಮರ ಸದಾ ಜಾರಿಯಲ್ಲಿರುತ್ತದೆ. ಈ ನಿಗೂಢ ಹುತ್ತದೊಳಗೆ ರಾಜ್ಯ ಪೊಲೀಸರಿಗೂ ಕಿಮ್ಮತ್ತಿಲ್ಲ, ಜಿಲ್ಲಾಧಿಕಾರಿಗೆ ಏನೂ ಗೊತ್ತಿರುವುದಿಲ್ಲ, ರಾಷ್ಟ್ರೀಯ ಭದ್ರತೆ-ನ್ಯೂಕ್ಲಿಯರ್ ಸಿಕ್ರೆಸಿ ಆ್ಯಕ್ಟ್ ಎಂಬ ಗುಮ್ಮ ತೋರಿಸಿ ಒಳಗೊಳಗೆ ಬಡ್ತಿ ಮಾಫಿಯಾ, ಸುಫಾರಿ ಕಿಲ್ಲರ್‌ಗಳು, ರೇಪಿಸ್ಟ್‌ಗಳು ಮೆರೆದಾಡಿದ್ದಾರೆ. ಸಿಬ್ಬಂದಿ ಕುಡಿವ ನೀರಿಗೇ ವಿಕಿರಣ ವಿಷ ಬೆರೆಸುವ ವಿಧ್ವಂಸಕತೆ ಕೈಗಾದಲ್ಲಿ ನಡೆದಿದ್ದೂ ಇದೆ!

ಸಿಬ್ಬಂದಿಗಳ ನಡುವೆ ವೈಷಮ್ಯ ಎಷ್ಟು ಅನಾಹುತಕಾರಿ ಹಂತ ತಲುಪಿತ್ತೆಂದರೆ ಬರೋಬ್ಬರಿ 55 ಮಂದಿಯ ದೇಹದೊಳಗೆ ವಿಕಿರಣದ ಮೂಲಕ ಕ್ಯಾನ್ಸರ್ ಬಿತ್ತುವ ಪಾತಕ ಪ್ರಯತ್ನವೂ ನಡೆದಿತ್ತು, 24-11-2009ರಂದು ಕೈಗಾ ಘಟಕದ ಆವರಣದಲ್ಲಿ ಸಿಬ್ಬಂದಿ ಬಳಸುವ ನೀರಿನ ತೊಟ್ಟಿಗೆ ಭಾರಜಲ ಮಿಶ್ರಿತ 'ಟ್ರೇಶಿಯಂ' ಸೇರಿಸಲಾಗಿತ್ತು, ಇದು ಅದ್ಹೇಗೋ ಬಹಿರಂಗವಾಗಿತ್ತು, ಆದರೆ ಕೈಗಾದ ಅಧಿಕಾರಿಗಳು ಎಲ್ಲವನ್ನೂ ರಹಸ್ಯವಾಗೇ ಇಟ್ಟು ಪ್ರಕರಣ ಮುಚ್ಚಿಹಾಕಿಬಿಟ್ಟರು. ಈ ದುಷ್ಟ ಕೆಲಸ ಮಾಡಿದವರು ಯಾರು? ಯಾಕಾಗಿ ಮಾಡಿದರು? ಸಿಬ್ಬಂದಿಗಳೇ ಮಾಡಿದ್ದ? ಭಯೋತ್ಪಾದಕರಾ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರಗಳೇ ಸಿಕ್ಕಿಲ್ಲ, ಎಲ್ಲ ಗೊತ್ತಿರುವ ಅಧಿಕಾರಿಗಳು ತಮ್ಮ ತಲೆ ಉಳಿಸಿಕೊಳ್ಳಲು ಸ್ಥಾವರವನ್ನೇ ಗಂಡಾಂತರಕ್ಕೆ ಸಿಲುಕಿಸಿದ್ದಾರೆ. ಜನರ ಜೀವದೊಂದಿಗೆ ಚೆಲ್ಲಾಟ ಆಡುತ್ತಿದ್ದಾರೆ!!

ಸ್ಥಳೀಯ ಪೊಲೀಸರಿಂದ ಈ ಟ್ರಿಸಿಯಂ ಪ್ರಕರಣದ ತನಿಖೆ ಸರಿಯಾಗಿ ಮಾಡಲಾಗುತ್ತಿಲ್ಲ, ಕೈಗಾದವರಿಂದ ಸರಿಯಾದ ಸಹಕಾರ ಪೊಲೀಸರಿಗೆ ಸಿಗುತ್ತಿಲ್ಲ, ಸಿಬಿಐನಂಥ ಉನ್ನತ ತನಿಖಾ ಸಂಸ್ಥೆಗೆ ಈ ಕೇಸ್ ಬೇಕಂತಲೇ ಕೊಡುತ್ತಿಲ್ಲ, ಪಾತಕಿಗಳ ಲಾಬಿ ಅಷ್ಟು ಪ್ರಬಲವಾಗಿದೆ!! ಸುಮಾರು ಎರಡು ವರ್ಷದ ಹಿಂದೆ ರವಿ ಮೂಳೆ ಎಂಬ ಉದ್ಯೋಗಿ ಕೈಗಾದಲ್ಲಿ ಹೆಣವಾಗಿ ಬಿದ್ದಿದ್ದ, ಸಿಬ್ಬಂದಿ ನಡುವಿನ ಬಡ್ತಿ ಅವ್ಯವಹಾರವೇ ಈ ಕೊಲೆಗೆ ಕಾರಣ. ಹಾಗಂತ ಕೈಗಾ ಉದ್ಯೋಗಿಗಳು ಮಾತಾಡಿಕೊಳ್ಳುವುದು ಬಹಿರಂಗ ರಹಸ್ಯ! ಆದರೆ ಈ ಕೊಲೆ ತನಿಖೆ ಹಳ್ಳ ಹಿಡಿದುಹೋಯ್ತು, ಆರೋಪಿಗಳು ಎರಡು ವರ್ಷ ಕಳೆದರೂ ಪತ್ತೆಯಾಗುತ್ತಲೇ ಇಲ್ಲ.


ಇದರ ಬೆನ್ನಿಗೆ ಕೈಗಾ ವಿದ್ಯುತ್ ಸ್ಥಾವರಗಳ ವೈಜ್ಞಾನಿಕ ಅಧಿಕಾರಿ ಎಲ್.ಮಹಾಲಿಂಗಮ್ ಬೆಳಿಗ್ಗೆ ವಾಕ್‌ಗೆಂದು ಹೋದಾತ ನಿಗೂಢವಾಗಿ ನಾಪತ್ತೆಯಾಗಿದ್ದ, ಎರಡು ದಿನದ ಬಳಿಕ ಆತನ ಶವ ಕಾಳಿ ನದಿಯಲ್ಲಿ ಸಿಕ್ಕಿತ್ತು, ಅಧಿಕಾರಿಗಳ ನಡುವಿನ ಅನೈತಿಕ ವ್ಯವಹಾರವೇ ಈ ಸಾವಿಗೆ ಕಾರಣ ಎನ್ನುವವರೂ ಇದ್ದಾರೆ. ಇದು ಆತ್ಮಹತ್ಯೆಯೋ? ಕೊಲೆಯೋ? ಎಂಬುದು ಇವತ್ತಿಗೂ ಬಿಡಿಸಲಾಗದ ಒಗಟಾಗೇ ಇದೆ. ಕೈಗಾ ಅಣುಸ್ಥಾವರ ಹುತ್ತದಲ್ಲಿ ಇಂಥ ಕೊಲೆ-ಸುಲಿಗೆ-ಸೆಕ್ಸ್-ಕಾಂತ್ರಿಕ ತರಲೆ ಮಾಮೂಲು.

ಒಟ್ಟಿನಲ್ಲಿ ಕೈಗಾ ಅಣುಸ್ಥಾವರ ಕೇಂದ್ರವಲ್ಲಿ ಭೂಕಂಪ-ಸುನಾಮಿಯೇ ಅವಘಡ-ಅನಾಚಾರ-ಅನಾಹುತಕ್ಕೆ ಬೇಕೆಂದೇನೂ ಇಲ್ಲ, ಕೈಗಾ ಸುತ್ತಲಿನ ಹಳ್ಳಿಗಳಲ್ಲಿ ಈ 7 ವರ್ಷಗಳಲ್ಲಿ ಕ್ಯಾನ್ಸರ್ ಪೀಡಿತರು 4ರಿಂದ 24ಕ್ಕೆ ಹೆಚ್ಚಿದ್ದಾರೆ. ಜನ ಕೈಗಾ ಸ್ಥಾವರದ ಅಧಿಕಾರಿ-ವಿಜ್ಞಾನಿಗಳ ಕಿತ್ತಾಟದಿಂದ ರೋಸಿಹೋಗಿದ್ದಾರೆ. ಜನ ಬಂದೆದ್ದು ಬೀದಿಗಿಳಿವ ಮೊದಲೇ ಸಂಬಂಧಿಸಿದವರು ಎಚ್ಚೆತ್ತುಕೊಳ್ಳುವರಾ?

• ನಹುತ

ಮಲ್ಯನ ವಿರುದ್ಧ ಕನ್ನಡಿಗರ ಆಕ್ರೋಶ

ಕನ್ನಡಿಗರೇ ಇಲ್ಲದ ಆರ್‌ಸಿಬಿ




ಪ್ರಶ್ನೆಯೆಂದರೆ ಮಲ್ಯನ ಆರ್‌ಸಿಬಿ ತಂಡವನ್ನು ಜನ ಯಾವ ನಿರೀಕ್ಷೆಯಿಟ್ಟು ನೋಡಬೇಕು ಮತ್ತು ಏಕೆ ಮೆಚ್ಚಬೇಕು? ಒಬ್ಬ ಅಭಿಮನ್ಯು ಮಿಥುನ್ ಇದ್ದಾನೆಂದು ದ್ರಾವಿಡ್, ಉತ್ತಪ್ಪ, ಪಾಂಡೆ, ವಿನಯ್‌ಕುಮಾರ್‌ರನ್ನು ಮಿಸ್ ಮಾಡ್ಕೋಬೇಕಾ? ನಮ್ಮವರಿಲ್ಲದ ಆರ್‌ಸಿಬಿಗೂ ಕೋಲ್ಕತ್ತಾ, ಚೆನ್ನೈನಂಥ ಬೇರಾವುದೇ ಪರಕೀಯ ತಂಡಕ್ಕೂ ಏನು ವ್ಯತ್ಯಾಸ? ಕೊಚ್ಚಿ ವಿರುದ್ಧ ಆರ್‌ಸಿಬಿ ಆಡಿದರೆ ನಾವು ಕೊಚ್ಚಿಯನ್ನೇ ಬೆಂಬಲಿಸ್ತೀವಿ. ಬೆಂಗಳೂರು ವಿರುದ್ಧ ಮುಂಬೈ ಆಡಿದರೆ ನಮ್ಮ ಬೆಂಬಲ ಮುಂಬೈ ತಂಡಕ್ಕೆ ಹೊರತು ಮಲ್ಯನಿಗಲ್ಲ. ಪುಣೆ ತಂಡದಲ್ಲಿ ಕನಿಷ್ಠ ಉತ್ತಪ್ಪ, ಪಾಂಡೆ ಇದ್ದಾರಲ್ಲ; ಆರ್‌ಸಿಬಿಯಲ್ಲಿ ಯಾರಿದ್ದಾರೆ? ರಾಜಸ್ತಾನ್ ರಾಯಲ್ಸ್ ವಿರುದ್ಧ ಬೆಂಗಳೂರು ಆಡಿದರೂ ನಾವು ಬೆಂಬಲಿಸುವುದು ರಾಜಸ್ತಾನವನ್ನೇ ಹೊರತು ಮಲ್ಯನ ಪರದೇಶಿ ಟೀಮನ್ನಲ್ಲ!

ಕೊಚ್ಚಿ ತಂಡದ ಪರವಾಗಿ ದಾವಣಗೆರೆ ಎಕ್ಸ್‌ಪ್ರೆಸ್ ವಿನಯ್‌ಕುಮಾರ್ ಆರ್‌ಸಿಬಿಯ ವಿರಾಟ್‌ಕೊಹ್ಲಿಯ ವಿಕೆಟ್ ಉರುಳಿಸಿದ್ದೇ ತಡ, ಟಿವಿಯೆದುರು ಕುಳಿತಿದ್ದ ಅದೆಷ್ಟು ಕನ್ನಡಿಗರು ಚಪ್ಪಾಳೆ ತಟ್ಟಿ ಕೇಕೆ ಹಾಕಿಲ್ಲ.



ಏಪ್ರಿಲ್ 12ರ ಮುಂಬೈ ವಿರುದ್ಧದ ಪಂದ್ಯ ಬೆಂಗಳೂರಿನಲ್ಲೇ ನಡೆದರೂ ಮಲ್ಯನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪರವಾಗಿ ಯಾರೂ ಬಾವುಟ ಹಿಡಿಯಲಿಲ್ಲ!

ಚಿನ್ನಸ್ವಾಮಿ ಸ್ಟೇಡಿಯಂ ಕಿಕ್ಕಿರಿದು ತುಂಬಿತ್ತಾದರೂ ಆವತ್ತು ಬೆಂಗಳೂರಿನ ಜನ ಮಲ್ಯನ ಆರ್‌ಸಿಬಿ ವಿರುದ್ಧ ಬೆಂಬಲಿಸಿದ್ದು ಸಚಿನ್‌ನನ್ನು. ಈ ಸಲದ ಐಪಿಎಲ್ ಟೂರ್ನಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ಪಷ್ಟವಾಗುವ ಒಂದು ಸಂಗತಿಯೇನು ಗೊತ್ತೇ?




ವಿಜಯ್ ಮಲ್ಯನ ರಾಯಲ್ ಚಾಲೆಂಜರ್ಸ್ ವಿರುದ್ಧ ತವರಿನ ಕ್ರಿಕೆಟ್ ಪ್ರೇಮಿಗಳೇ ತಿರುಗಿ ಬಿದ್ದಿದ್ದಾರೆ. ಮುಂಬೈ ಪರ ಸಚಿನ್, ಕೊಚ್ಚಿನ್ ಪರ ಶ್ರೀಕಾಂತ್, ಚೆನ್ನೈ ಪರ ಅಶ್ವಿನ್, ದೆಹಲಿ ಪರ ಸೆಹವಾಗ್... ಹೀಗೆ ಆಯಾ ಮಣ್ಣಿನ ಸ್ಟಾರ್ ಕ್ರಿಕೆಟರುಗಳೆಲ್ಲ ಆಯಾ ತಂಡದಲ್ಲೇ ಮಿಂಚುತ್ತಿದ್ದರೆ ಕರ್ನಾಟಕವನ್ನು ಪ್ರತಿನಿಧಿಸುವ ಮಲ್ಯನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಕನ್ನಡಿಗರೇ ಇಲ್ಲ!


ರಾಹುಲ್ ದ್ರಾವಿಡ್ ತಾಯಿಲ್ಲದ ತಬ್ಬಲಿಯಂತೆ ರಾಜಸ್ತಾನ್ ರಾಯಲ್ಸ್ ಪರ ಆಡುತ್ತಿರುವುದು, ರಾಬಿನ್ ಉತ್ತಪ್ಪ ಪುಣೆ ವಾರಿಯರ್ಸ್ ತಂಡದಲ್ಲಿ ಮಿಂಚುತ್ತಿರುವುದು, ದಾವಣಗೆರೆ ಎಕ್ಸ್‌ಪ್ರೆಸ್ ವಿನಯ್‌ಕುಮಾರ್ ವಿಧಿಯಿಲ್ಲದೇ ಕೇರಳದ ಪಾಲಾದದ್ದು ಮತ್ತು ಮನೀಷ್ ಪಾಂಡೆ ಅವಮಾನದ ಮುಖ ಹೊತ್ತು ಪುಣೆ ತಂಡದ ಆಶ್ರಯಕ್ಕೆ ಹೋಗಿದ್ದು; ಎಲ್ಲವೂ ಮಲ್ಯನ ವಿರುದ್ಧ ದ್ವೇಷವಾಗಿ ಪರಿಣಮಿಸಿದೆ. ತವರು ನೆಲದಲ್ಲೇ ಮಲ್ಯನ ತಂಡ ಮುಂಬೈ ವಿರುದ್ಧ ಆಡಿದರೂ ಜನ ಬೆಂಬಲಿಸಿದ್ದು ಸಚಿನ್ ಪಡೆಯನ್ನೇ ಹೊರತು ಆರ್‌ಸಿಬಿ ಪರ ಚಪ್ಪಾಳೆ ತಟ್ಟುವವರೇ ಕಮ್ಮಿ. ಹೇಗೆ ಗಂಗೂಲಿಗಾದ ಅವಮಾನಕ್ಕೆ ಬಂಗಾಳಿಗಳು ಶಾರೂಕ್ ಖಾನ್ ವಿರುದ್ಧ ಕಿಡಿಕಾರುತ್ತಿದ್ದಾರೋ ಹಾಗೆ ದ್ರಾವಿಡ್, ಉತ್ತಪ್ಪ, ಪಾಂಡೆ ಮತ್ತು ವಿನಯ್‌ಕುಮಾರ್ ಕೈಬಿಟ್ಟ ಕಾರಣಕ್ಕೆ ಕರ್ನಾಟಕದ ಕ್ರಿಕೆಟ್ ಪ್ರೇಮಿಗಳು ಮಲ್ಯನ ವಿರುದ್ಧ ತಿರುಗಿ ಬದ್ದಿದ್ದಾರೆ.



ಐಪಿಎಲ್ ಪಂದ್ಯಾವಳಿಗಳ ಕುರಿತ ಕನ್ನಡದ ಯಾವುದೇ ಟಿವಿ ಚಾನೆಲ್‌ನಲ್ಲಿ ಸಂವಾದವನ್ನು ಗಮನಿಸಿದರೂ ಜನ ಮಲ್ಯನ ತಂಡದ ವಿರುದ್ಧ ಕಿಡಿಕಾರುತ್ತಿರುವುದು ಸ್ಪಷ್ಟವಾಗುತ್ತದೆ. 'ಅಲ್ರೀ ಮಲ್ಯ ದುಡ್ಡು ಮಾಡೋದಕ್ಕೆ, ಬೆಂಗಳೂರು ಅಂತ ಹೆಸರಿಟ್ಟಾಕ್ಷಣ ನಾವೆಲ್ಲ ಆರ್‌ಸಿಬಿ ತಂಡವನ್ನು ಬೆಂಬಲಿಸಬೇಕಾ?', 'ವೆಟೂರಿ ಯಾರ್ರೀ? ಕ್ಯಾಪ್ಟನ್ ಆಗೋದಕ್ಕೆ, ನಮ್ಮಲ್ಲಿ ಯಾರೂ ಇರಲಿಲ್ಲವಾ? ಕುಂಬ್ಳೆ ಇದ್ದೂ ದ್ರಾವಿಡ್‌ಗೆ ಯಾಕೆ ಬಿಡ್ ಮಾಡಲಿಲ್ಲ? ಜಾರ್ಖಂಡ್‌ನ ಸೌರಬ್ ತಿವಾರಿಗೆ ಆರೂವರೆ ಕೋಟಿ ಕೊಡೋದಕ್ಕೆ ದುಡ್ಡಿದೆ. ಅದೇ ವಿನಯ್‌ಕುಮಾರ್‌ಗೆ ಎರಡೂಕಾಲು ಕೋಟಿ ಕೊಡೋಕೆ ಮಲ್ಯನ ಬಳಿ ದುಡ್ಡಿಲ್ಲ? ರಾಹುಲ್ ದ್ರಾವಿಡ್ ಬರೀ 1.85 ಕೋಟಿಗೆ ರಾಜಸ್ತಾನ್ ಪರ ಆಡಬೇಕಾ?'



ಇದು ವಿವಿಧ ಟಿವಿ ಚಾನೆಲ್‌ಗಳ ಸಂವಾದದಲ್ಲಿ ಜನ ಮಲ್ಯನ ವಿರುದ್ಧ ಕಿಡಿಕಾರಿದ ರೀತಿ. ಕೊಚ್ಚಿ ವಿರುದ್ಧದ ಆರ್‌ಸಿಬಿಯ ಮೊದಲ ಪಂದ್ಯದಲ್ಲಿ ಟಿವಿ ಮುಂದೆ ಕೂತಿದ್ದ ಬಹುತೇಕ ಪ್ರೇಕ್ಷಕರು ಬಯಸಿದ್ದು ರಾಯಲ್ ಚಾಲೆಂಜರ್ಸ್ ಸೋಲಲಿ ಎಂದೇ. ಮಲ್ಯನಿಗೆ ಬುದ್ಧಿ ಬರಬೇಕು. ಅದಕ್ಕೆ ಆರ್‌ಸಿಬಿ ಸೋಲಬೇಕು. ಈ ಸಲದ ಟೂರ್ನಿಯಲ್ಲಿ ಆರ್‌ಸಿಬಿ ಒಂದೇ ಒಂದು ಪಂದ್ಯವನ್ನೂ ಗೆಲ್ಲಕೂಡದು. ನಮ್ಮ ಆಟಗಾರರಿಗಾದ ಅವಮಾನಕ್ಕೆ, ಮಲ್ಯನಿಗೆ ತಕ್ಕಶಾಸ್ತಿ ಆಗಲೇಬೇಕು....!



ಇಂಥದೊಂದು ಅಸಹನೆಯೇ ರಾಯಲ್ ಚಾಲೆಂಜರ್ಸ್ ವಿರುದ್ಧ ಮಾತ್ರವಲ್ಲ, ಅದರ ಸೋಕಾಲ್ಡ್ ಮೆಂಟರ್ ಅನಿಲ್ ಕುಂಬ್ಳೆ ವಿರುದ್ಧವೂ ಆಕ್ರೋಶಕ್ಕೆ ಕಾರಣವಾಗಿದೆ. ದ್ರಾವಿಡ್ ಕಾರಣಕ್ಕಾಗೇ ರಾಜಸ್ತಾನ್ ರಾಯಲ್ಸ್ ತಂಡದ ಪ್ರತಿ ಪಂದ್ಯವನ್ನೂ ಆಸೆ ಪಟ್ಟು ನೋಡುವ ಕನ್ನಡಿಗರ ಮನಸ್ಥಿತಿ ಏನಾಗಬೇಡ? ರಾಬಿನ್ ಉತ್ತಪ್ಪ ಪುಣೆ ವಾರಿಯರ್ಸ್ ಪರ ಯುವರಾಜ್ ಸಿಂಗ್‌ನನ್ನೂ ಹಿಂದಿಕ್ಕಿ ಸಿಕ್ಸರ್ ಎತ್ತುತ್ತಿದ್ದರೆ ಇಲ್ಲಿನ ಕ್ರಿಕೆಟ್ ಪ್ರೇಮಿಗಳಿಗೆ ಹೊಟ್ಟೆಕಿಚ್ಚು ಬರದೇ ಇರುತ್ತಾ? ಮನೀಷ್ ಪಾಂಡೆಯಂಥ ಸ್ಟಾರ್ ಕ್ರಿಕೆಟರ್ ಅವಮಾನಿತನಾಗಿ ಐಪಿಎಲ್‌ನ ನಾಲ್ಕು

ತಂಡದ ಬ್ಯಾಲೆನ್ಸ್ ಹಾಳಾಗಿದೆ

ಮಲ್ಯ ಹೇಗೆ ಕೊಹ್ಲಿಯನ್ನು ತನ್ನಲ್ಲೇ ಇಟ್ಟುಕೊಂಡರೋ ಅದೇ ರೀತಿ ಉತ್ತಪ್ಪ, ದ್ರಾವಿಡ್, ಪಾಂಡೆ, ವಿನಯ್‌ಕುಮಾರ್‌ರಂಥವರನ್ನೂ ಇಟ್ಟುಕೊಳ್ಳಬಹುದಿತ್ತು. ಸ್ಥಳೀಯ ಸ್ಟಾರ್ ಆಟಗಾರರು ಇಲ್ಲದಿರುವುದು ಆರ್‌ಸಿಬಿಯ ಬ್ಯಾಲೆನ್ಸ್ ಅನ್ನೇ ಹಾಳುಗೆಡವಿದೆ. ಏಕೆ ಹೀಗಾಯಿತೋ ಗೊತ್ತಿಲ್ಲ, ಸ್ಥಳೀಯ ಕ್ರಿಕೆಟ್ ಅಭಿಮಾನಿಗಳು ಈ ಕಾರಣಕ್ಕೇ ಆರ್‌ಸಿಬಿಯಿಂದ ದೂರವಾಗಿರುವುದಂತೂ ಸತ್ಯ.

-ಸುನೀಲ್ ಸಿರಸಂಗಿ,
ಕ್ರೀಡಾ ಸಂಪಾದಕರು, ಸಮಯ ಟೀವಿ

ಮಿಥುನ್ ಬಿಟ್ಟರೆ ಯಾರಿದ್ದಾರೆ?

ಈತನಕ ನಾನು ರಾಯಲ್ ಚಾಲೆಂಜರ್ಸ್ ತಂಡವನ್ನು ನಮ್ಮ ಕರ್ನಾಟಕದ ತಂಡವೆಂದೇ ಭಾವಿಸಿದ್ದು ಹುಸಿಯಾಗಿದೆ. ಒಬ್ಬ ಅಭಿಮನ್ಯು ಮಿಥುನ್ ಬಿಟ್ಟರೆ ನಮ್ಮವರು ಅಂತ ಯಾರಿದ್ದಾರೆ? ಆದರೆ ಪುಣೆ, ರಾಜಸ್ತಾನ್ ಮತ್ತು ಕೇರಳ ತಂಡಗಳಲ್ಲಿ ನಮ್ಮವರು ಅಂತ ಇಬ್ಬರೋ ಮುವರೋ ಇದ್ದಾರಲ್ಲ, ಆರ್‌ಸಿಬಿಗಿಂತಲೂ ಕನ್ನಡಿಗರ ಪಾಲಿಗೆ ಪುಣೆ, ಕೇರಳ, ರಾಜಸ್ತಾನ್ ತಂಡಗಳೇ ಲಾಯಕ್ಕಲ್ಲವೆ?


-ವೆಂಕಟೇಶ್ ರಾವ್, ಉಪನ್ಯಾಸಕರು-ಮಾಗಡಿ

ಪುನೀತ್ ಹೊರಬರಲಿ

ಬೆಂಗಳೂರಿನವರೇ ಇಲ್ಲದ ಬೆಂಗಳೂರು ಟೀಮು, ಕನ್ನಡಿಗರೇ ಇಲ್ಲದ ಕರ್ನಾಟಕ ಟೀಮು ಇದ್ದರೆಷ್ಟು ಬಿಟ್ಟರೆಷ್ಟು? ವಿಶ್ವಕಪ್ ಗೆದ್ದ ತಂಡದಲ್ಲಿ ...ಬ್ಬನೇ ಒಬ್ಬ ಕನ್ನಡಿಗನಿಲ್ಲ ಎಂದು ನೊಂದವನು ನಾನು. ಅಂಥಾದ್ದರಲ್ಲಿ ನಮ್ಮವರೇ ಇಲ್ಲದ ಬೆಂಗಳೂರು ತಂಡವನ್ನು ಹೇಗೆ ಸಹಿಸಲು ಸಾಧ್ಯ. ಆರು ...ರಿ ವಿದೇಶಿಯರು ಉಳಿದ ನಾಲ್ವರು ಪರರಾಜ್ಯದ ಆಟಗಾರರು. ಹೋಗಲಿ ಇದ್ದ ಒಬ್ಬ ಕನ್ನಡಿಗನಾದ ಅಭಿಮನ್ಯು ಮಿಥುನ್‌ನನ್ನು ಕ್ಯಾಪ್ಟನ್ ಮಾಡಬಹುದಿತ್ತಲ್ಲವೆ? ಕನ್ನಡಿಗರನ್ನು ಬೆಂಗಳೂರಿಗರನ್ನು ವಂಚಿಸುವ ಮಲ್ಯನ ಇಂಥ ಕುತಂತ್ರಕ್ಕೆ ಪುನೀತ್ ರಾಜ್‌ಕುಮಾರ್ ಥರದವರು ಮೋಸ ಹೋಗಬಾರದು ನಮ್ಮವರಿಗಾದ ಅನ್ಯಾಯದ ವಿರುದ್ಧ ರಾಯಲ್ ಚಾಲೆಂಜರ್ಸ್‌ನ ಬ್ರಾಂಡ್ ಅಂಬಾಸಿಡರ್ ಸ್ಥಾನದಿಂದ ಪುನೀತ್ ರಾಜ್‌ಕುಮಾರ್‌ರವರು ಹೊರಬರಬೇಕು. ಮಲ್ಯನ ಕಪಟ ನಾಟಕವನ್ನು ಧಿಕ್ಕರಿಸಬೇಕು.

-ಎನ್.ಆರ್. ರಮೇಶ್, ಬಿಬಿಎಂಪಿ ಕೌನ್ಸಿಲರ್-ಯಡಿಯೂರು ವಾರ್ಡ್

ಅಧಿಕಾರ ಕೊಟ್ಟವರು ಯಾರು?



ನೀವು ನಂಬ್ತೀರೋ ಬಿಡ್ತೀರೋ; ರಾಯಲ್ ಚಾಲೆಂಜರ್ಸ್ ತಂಡವನ್ನು ನಾನು ಧಿಕ್ಕರಿಸಿದ್ದೇನೆ. ಹಾಗೊಮ್ಮೆ ಆಟ ನೋಡಲೇಬೇಕು ಅಂದ್ರೆ ದ್ರಾವಿಡ್ ಕಾರಣಕ್ಕೆ ರಾಜಸ್ತಾನದ ಪಂದ್ಯವನ್ನೋ, ಉತ್ತಪ್ಪನ ಆಟಕ್ಕೆ ಪುಣೆಯ ಮ್ಯಾಚನ್ನೋ ನೋಡುತ್ತೇನೆ. ಬೆಂಗಳೂರಿನವರೇ ಇಲ್ಲದ ಬೆಂಗಳೂರು ಟೀಮು, ಕನ್ನಡಿಗರೇ ಇಲ್ಲದ ಕರ್ನಾಟಕ ಟೀಮು ನಮಗೆ ಇದ್ದರೆಷ್ಟು ಇಲ್ಲದಿದ್ದರೆಷ್ಟು? ಯಾರೋ ಕಾಸು ಮಾಡಲು ಬೆಂಗಳೂರಿನ ಹೆಸರನ್ನು ಬಳಸಲು ಅಧಿಕಾರ ಕೊಟ್ಟವರ್‍ಯಾರು?

-ಎನ್. ಓಂಪ್ರಕಾಶ್ ರಾವ್, ಚಲನಚಿತ್ರ ನಿರ್ದೇಶಕ

ಕನ್ನಡಿಗರೇ ಪಾಠ ಕಲಿಸಲಿ

ಮಲ್ಯ ದುಡ್ಡು ಮಾಡೋದಕ್ಕೆ ಬೆಂಗಳೂರಿನ ಹೆಸರನ್ನು ದುರುಪಯೋಗ ಮಾಡ್ತಾ ಇದ್ದಾನೆಂದು ಮೊದಲು ಪ್ರತಿಭಟಿಸಿದ್ದೇ ರಕ್ಷಣಾ ವೇದಿಕೆ. ಆತನ ಉದ್ಧಟತನ ಮತ್ತು ದುಡ್ಡಿನ ಮದ ಹೇಗಿತ್ತೆಂದರೆ; ದುಡ್ಡು ನಂದು, ನನಗೆ ಯಾರು ಬೇಕೋ ಅವರನ್ನು ಹಾಕ್ಕೊತೀನಿ. ಬೇರೆ ಯಾರಿಗಾದರೂ ಅಂಥ ತಾಕತ್ತಿದ್ರೆ ಅವರೇ ದುಡ್ಡು ಹಾಕಿ ಅವರಿಗ್ಯಾರು ಬೇಕೋ ಅಂಥ ಆಟಗಾರರನ್ನೇ ಹಾಕಿಕೊಳ್ಳಲಿ. ಬೇಕಿದ್ರೆ ಮತ್ತೊಂದು ಬೆಂಗಳೂರು ತಂಡವನ್ನೇ ಕಟ್ಟಲಿ ಎಂದು ದುರಹಂಕಾರದಿಂದ ಝಾಡಿಸಿದ್ದಾನೆ. ಆತನ ದುರಹಂಕಾರಕ್ಕೆ ಕನ್ನಡಿಗರೇ ಪಾಠ ಕಲಿಸಬೇಕು.

-ಎಚ್.ಶಿವರಾಮೇಗೌಡ, ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ

ಏನು ಪ್ರಯೋಜನ?



ನಮ್ಮ ಆಟಗಾರರು ಬೇರೆ ಬೇರೆ ತಂಡಗಳಲ್ಲಿ ಆಡುವುದು ಮತ್ತು ಬೇರೆ ಬೇರೆ ಆಟಗಾರರು ನಮ್ಮ ತಂಡಕ್ಕೆ ಆಡುವುದು ಒಳ್ಳೆಯ ಬೆಳವಣಿಗೆಯೇ ನಿಜ. ಹಾಗಂತ ನಮ್ಮನ್ನೇ ವಂಚಿಸಿಕೊಂಡು ಏನು ಪ್ರಯೋಜನ? ಆಯಾ ತಂಡಗಳು ಸ್ಥಳೀಯ ಆಟಗಾರರನ್ನು ಸೌಜನ್ಯಕ್ಕಾದರೂ ಪ್ರೋತ್ಸಾಹಿಸಲೇಬೇಕು. ಇಲ್ಲದಿದ್ದರೆ ಯಾವ ಪುರುಷಾರ್ಥಕ್ಕೆ ನಾವು ನಮ್ಮ ತಂಡವನ್ನು ಬೆಂಬಲಿಸಬೇಕು?

-ಯಶ್, ಚಲನಚಿತ್ರ ನಾಯಕ ನಟ

ಭಾವನಾತ್ಮಕ ಮೋಸ




ಆಟ ಅನ್ನೋದು ಕೇವಲ ಆಟವಾಗಿರಬೇಕೇ ಹೊರತು ಹಣ ಮಾಡೋ ದಂಧೆಯಾಗಬಾರದು. ಅದು ಕ್ರೀಡೆಯಾಗಿ ಉಳಿದರಷ್ಟೇ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ -ಅವಕಾಶ ಸಿಗುತ್ತದೆ. ಆದರೆ ಐಪಿಎಲ್ ಅನ್ನೋದು ಕುಬೇರರು ಶ್ರೀಮಂತರ ದುಡ್ಡಿನ ದಾಹಕ್ಕಾಗಿ ರೂಪುಗೊಂಡ ಷಡ್ಯಂತ್ರವಷ್ಟೇ. ಇದರಲ್ಲಿ ಮಲ್ಯ ಬೆಂಗಳೂರಿನ ಹೆಸರಲ್ಲಿ ದುಡ್ಡು ಮಾಡಲು ಹೊರಟಿದ್ದಾನೆ. ಬೆಂಗಳೂರು ಅಂತ ಹೆಸರಿಟ್ಟುಕೊಂಡ ಮೇಲೆ ಕನಿಷ್ಠ ಅರ್ಧ ತಂಡವಾದರೂ ಸ್ಥಳೀಯರಿರಬೇಕಿತ್ತು. ಭಾವನಾತ್ಮಕವಾಗಿ ಕನ್ನಡಿಗರಿಗಾದ ವಂಚನೆಯಲ್ಲದೇ ಮತ್ತೇನಲ್ಲ...

-ವಿ.ಎಸ್.ಉಗ್ರಪ್ಪ, ಕಾಂಗ್ರೆಸ್ ನಾಯಕ


ಮ್ಯಾಚ್‌ಗಳನ್ನೇ ಆಡದಂತಾದರೆ ಜನಕ್ಕೆ ಮಲ್ಯನ ವಿರುದ್ಧ ಸಿಟ್ಟು ಬರದಿರುತ್ತಾ? ದಾವಣಗೆರೆ ಎಕ್ಸ್‌ಪ್ರೆಸ್ ವಿನಯ್‌ಕುಮಾರ್ ಕೇರಳದ ತಂಡದಲ್ಲಿ ಮಿಂಚುತ್ತಿದ್ದರೆ ಸಹಜವಾಗೇ ಆರ್‌ಸಿಬಿ ವಿರುದ್ಧ ಅಸಹನೆ ಭುಗಿಲೇಳುತ್ತದೆ.

ಅದು ಪ್ರಾದೇಶಿಕ ಕ್ರಿಕೆಟ್ ಪ್ರೀತಿ. ಆಯಾ ರಾಜ್ಯದ ಯಾರೇ ಆಟಗಾರನೊಬ್ಬ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದನೆಂದರೆ ಹೇಗೆ ಅಲ್ಲಿನ ಜನ ತಮ್ಮ ರಾಜ್ಯದ ಬಾವುಟ ಹಾರಿಸುತ್ತಾರೋ ಹಾಗೇ. ಕುಂಬ್ಳೆ, ಶ್ರೀನಾಥ್, ಉತ್ತಪ್ಪರನ್ನು ಕನ್ನಡಿಗರೆಂಬ ಕಾರಣಕ್ಕೆ ಕರ್ನಾಟಕದವರೆಂದೇ ಜನ ಆರಾಧಿಸುತ್ತಾರೆ. ಐಪಿಎಲ್ ಟೂರ್ನಿ ಹುಟ್ಟಿಕೊಂಡಾಗಲೇ ಮಲ್ಯ ತನ್ನ ವಿಸ್ಕಿಯ ಹೆಸರಿನ ತಂಡ ಹುಟ್ಟುಹಾಕಿ ಅದರ ಕೊನೆಯಲ್ಲಿ ಬೆಂಗಳೂರು ಎಂಬ ಶಬ್ದ ಸೇರಿಸಿದಾಗ ಸಹಜವಾಗೇ ಅದು ಕರ್ನಾಟಕವನ್ನು ಪ್ರತಿನಿಧಿಸುತ್ತದೆಯೆಂಬ ಜನ ಭಾವಿಸಿಕೊಂಡರು. ಶುರುವಿನಲ್ಲಿ ಕುಂಬ್ಳೆ, ದ್ರಾವಿಡ್, ಪಾಂಡೆ, ವಿನಯ್‌ಕುಮಾರ್, ಮಿಥುನ್, ಅರವಿಂದ್, ಮುಂತಾದವರಿದ್ದದ್ದು ಜನಕ್ಕಿದು ನಮ್ಮದೇ ತಂಡವೆಂಬ ಭ್ರಮೆ ಹುಟ್ಟಿಸಿತು. ಇದೆಲ್ಲಕ್ಕೂ ಪೂರಕವಾಗಿ ಆರ್‌ಸಿಬಿಯ ಆಟಗಾರರ ಯೂನಿಫಾರ್ಮಿನಲ್ಲಿ ಕನ್ನಡ ಬಾವುಟದ ಬಣ್ಣವಿತ್ತು.



ಕ್ಯಾಲಿಸ್, ರಾಸ್ ಟೇಲರ್‌ರಂಥ ವಿದೇಶಿ ಸ್ಟಾರ್‌ಗಳನ್ನು ಹೊರತುಪಡಿಸಿದರೆ ಆರ್‌ಸಿಬಿ ಕರ್ನಾಟಕದ ರಣಜಿ ತಂಡವನ್ನೇ ಹೋಲುತ್ತಿತ್ತಾದ್ದರಿಂದ ಬೆಂಗಳೂರಿನಲ್ಲಿ ನಡೆಯುವ ಪ್ರತಿ ಮ್ಯಾಚಿನಲ್ಲಿ ಜನ ಕನ್ನಡ ಬಾವುಟ ಹಾರಿಸುತ್ತಿದ್ದರು. ಕರ್ನಾಟಕದಾದ್ಯಂತ ಆರ್‌ಸಿಬಿ ತಂಡಕ್ಕೆ ಅಭಿಮಾನಿಗಳು ಹುಟ್ಟಿಕೊಂಡಿದ್ದು, ಇದು ನಮ್ಮ ಟೀಮು ಎಂಬಂತೆ ಜನ ಪ್ರತಿ ಮ್ಯಾಚನ್ನು ನೋಡಲಾರಂಭಿಸಿದ್ದು, ಆರ್‌ಸಿಬಿಯ ಪ್ರತಿ ಮ್ಯಾಚಿನ ಕುರಿತು ಕನ್ನಡದ ಎಲ್ಲಾ ಸುದ್ದಿ ಚಾನೆಲ್‌ಗಳು ವಿಶೇಷ ಕಾರ್ಯಕ್ರಮ ಆರಂಭಿಸಿದ್ದು ಕನ್ನಡಿಗರ ನಿರೀಕ್ಷೆ, ಅಭಿಮಾನವನ್ನು ಉತ್ತುಂಗಕ್ಕೇರಿಸಿಬಿಟ್ಟವು.

ಇಂಥದ್ದೊಂದು ನಿರೀಕ್ಷೆ, ಅಭಿಮಾನ ಮತ್ತು ಬೆಂಬಲ ಮೊದಲ ಬಾರಿಗೆ ಮಣ್ಣುಗೂಡಿದ್ದು ಮೊನ್ನೆ ನಡೆದ ಐಪಿಎಲ್ ಹರಾಜಿನಲ್ಲಿ. ರಾಬಿನ್ ಉತ್ತಪ್ಪನನ್ನು ಪುಣೆ ವಾರಿಯರ್ಸ್ ಎಂಟೂವರೆ ಕೋಟಿಗೆ ಖರೀದಿಸುತ್ತಿದ್ದರೆ ಪಕ್ಕದಲ್ಲೇ ಕೂತಿದ್ದ ಅನಿಲ್ ಕುಂಬ್ಳೆ ಮತ್ತು ಸಿದ್ಧಾರ್ಥ ಮಲ್ಯ ಮಿಕಿಮಿಕಿ ನೋಡುತ್ತಿದ್ದರು. ರಾಹುಲ್ ದ್ರಾವಿಡ್ ಹೆಸರನ್ನು ಹರಾಜಿಗಿಟ್ಟಾಕ್ಷಣವೇ ರಾಯಲ್ ಚಾಲೆಂಜರ್ಸ್ ಧಣಿಗಳು ನೆಲನೋಡುತ್ತ ಗೋಣು ಬಗ್ಗಿಸಿಬಿಟ್ಟರು. ವಿಧಿಯಿಲ್ಲದೇ ದ್ರಾವಿಡ್ 1.85 ಕೋಟಿಗೆ ರಾಜಸ್ತಾನ್ ಪಾಲಾಗಬೇಕಾಯ್ತು.



ಮಲ್ಯನ ಮನೆಮುರುಕು ಬುದ್ಧಿ ಇಷ್ಟಕ್ಕೆ ತಣಿಯಲಿಲ್ಲ. ಯಶಸ್ವಿ ಬೌಲರ್ ವಿನಯ್‌ಕುಮಾರ್‌ನನ್ನು ಕೇರಳ ಎರಡೂಕಾಲು ಕೋಟಿಗೆ ಖರೀದಿಸಿದಾಗಲೂ ಕುಂಬ್ಳೆ ಐದು ಸಾವಿರ ಸೇರಿಸಿ ಕೂಗಲು ಒಪ್ಪಲಿಲ್ಲ. ಇವರೆಲ್ಲರಿಗಿಂತಲೂ ದೊಡ್ಡ ಅವಮಾನವಾಗಿದ್ದು ಮನೀಷ್ ಪಾಂಡೆಗೆ. ಆತನಕ ಐಪಿಎಲ್‌ನಲ್ಲಿ ಸೆಂಚುರಿ ಬಾರಿಸಿದ ಏಕೈಕ ಆಟಗಾರನೆಂಬ ಕೀರ್ತಿಗೆ ಪಾತ್ರನಾದ ಪಾಂಡೆಯನ್ನು ಪುಡಿಕಾಸಿಗೆ ದಕ್ಕಿಸಿಕೊಳ್ಳುವ ದುರಾಶೆಗೆ ಮಲ್ಯನ ಮಗನ ಜೊತೆ ಕುಂಬ್ಳೆ ಕೂಡಾ ಕೈಜೋಡಿಸಿದ್ದ ಅವಮಾನ ಸಹಿಸದೇ ಪಾಂಡೆ ನಾಲ್ಕು ಪಂದ್ಯಗಳಿಗೆ ನಿಷೇಧ ಎದುರಿಸಿಯಾದರೂ ಸರಿ ಮಲ್ಯನಿಗೊಂದು ಪಾಠ ಕಲಿಸಬೇಕೆಂದೇ ಪುಣೆ ತಂಡದ ಜೊತೆ ಕೈಜೋಡಿಸಿದ.

ವಿನಯ್‌ಕುಮಾರ್ ಜೊತೆಗೆ ಕರ್ನಾಟಕದ ರಣಜಿ ಆಟಗಾರರಾದ ದೀಪಕ್ ಚೌಗುಲೆ ಮತ್ತು ಬಿ.ಅಖಿಲ್ ಕೇರಳ ತಂಡದ ಪಾಲಾದರೆ ಭರತ್ ಚಿಪ್ಲಿ ಡೆಕ್ಕನ್ ಚಾರ್ಜರ್ಸ್ ಜೊತೆ ಕೈಜೋಡಿಸಿದ್ದ, ಸ್ಟುವರ್ಟ್ ಬಿನ್ನಿ ದ್ರಾವಿಡ್ ಜೊತೆ ರಾಜಸ್ತಾನ್ ತಂಡವನ್ನು ಆಶ್ರಯಿಸಬೇಕಾಯಿತು. ಅಭಿಮನ್ಯು ಮಿಥುನ್ ಮತ್ತು ಮಾಯಂಕ್ ಅಗರ್‌ವಾಲ್ ಬಿಟ್ಟರೆ ಆರ್‌ಸಿಬಿಯಲ್ಲಿ ಮತ್ತೊಬ್ಬ ಕನ್ನಡಿಗನಿಲ್ಲ, ಭರತ್‌ಗೌತಮ್, ಅರವಿಂದ್-ರಂಥವರು ಆಟಕ್ಕಿಲ್ಲ, ರಾಜು ಭಟ್ಕಳ್, ಅಲ್ಲಾಹ್ ಖಾಜಿ, ಜ್ಞಾನದೀಪ್ ಸಿಂಗ್ ಮುಂತಾದ ಲೋಕಲ್ ಪ್ರತಿಭೆಗಳನ್ನು ಪುಡಿಕಾಸು ಕೊಟ್ಟು ಹೆಸರಿಗಷ್ಟೇ ತಂಡಕ್ಕೆ ಸೇರಿಸಿಕೊಂಡಿದ್ದು ಬಿಟ್ಟರೆ ಪಂದ್ಯದ ಲೆಕ್ಕಕ್ಕೆ ಇಲ್ಲವೇ ಇಲ್ಲ.

ಹಿಂದಾದರೆ ದ್ರಾವಿಡ್ ಅಥವಾ ಕುಂಬ್ಳೆ ಆರ್‌ಸಿಬಿಗೆ ಕ್ಯಾಪ್ಟನ್ ಆಗಿರುತ್ತಿದ್ದಲ್ಲಿ, ಈಗ ಡೇನಿಯಲ್ ವೆಟ್ಟೋರಿಯನ್ನು ಪ್ರತಿಷ್ಠಾಪಿಸಲಾಗಿದೆ. ವೆಟ್ಟೋರಿ ಎಷ್ಟೇ ಪ್ರತಿಭಾವಂತನಾದರೂ ನಮ್ಮವನಲ್ಲವಲ್ಲ? ತಿಲಕರತ್ನೆ ದಿಲ್ಶಾನ್ ಏನೇ ಆಡಿದರೂ ಅದು ಉತ್ತಪ್ಪನ ಆಟಕ್ಕೆ ಸಮನಲ್ಲ. ಡಿವಿಲಿಯರ್ಸ್, ಸೌರಭ್ ತಿವಾರಿ, ಮೊಹಮ್ಮದ್ ಕೈಫ್, ಜಹೀರ್‌ಖಾನ್, ವಾನ್‌ಡೆರ್ ವರ್ಥ್, ಲಾಂಗ್‌ವೆಲ್ಟ್, ಪಾಂಡೀರ್ ಮುಂತಾದವರ ಪೈಕಿ ಬಹುತೇಕರು ವಿದೇಶಿ ಆಟಗಾರರು ಮತ್ತು ಹೊರರಾಜ್ಯದ ಆಟಗಾರರು. ಕ್ರಿಕೆಟ್ ಅನ್ನು ಕೇವಲ ಆಟವಾಗಿ ನೋಡುವವರು ಒಂದು ಗುಂಪಾದರೆ ತಮ್ಮ ದೇಶದ ಆಟಗಾರರು ಎಂಬ ಕಾರಣಕ್ಕೊ, ತಮ್ಮ ರಾಜ್ಯದವರೆಂಬ ಅಭಿಮಾನಕ್ಕೋ ನೋಡುವವರದು ಮತ್ತೊಂದು ವರ್ಗ.

ಶ್ರೀಲಂಕಾದ ಜನ ತಮ್ಮ ದೇಶದ ಆಟಗಾರರ ಕಾರಣಕ್ಕೆ, ಐಪಿಎಲ್ ನೋಡಬಹುದು. ದಕ್ಷಿಣ ಆಫ್ರಿಕಾದ ಟಿವಿಗಳು ಐಪಿಎಲ್‌ನ ಹಕ್ಕು ಸಾಧಿಸುವುದು ಕೂಡ ಇದೇ ಕಾರಣಕ್ಕೆ ವಿವಿಧ ದೇಶಗಳ ಸ್ಟಾರ್ ಆಟಗಾರರೆಲ್ಲ ಐಪಿಎಲ್‌ನಲ್ಲಿರುವುದರಿಂದಲೇ ಆಯಾ ದೇಶದ ಟಿವಿಗಳು ಐಪಿಎಲ್‌ನ ರೈಟ್ಸ್ ಖರೀದಿಸಿವೆಯೇ ಹೊರತು ಇದಕ್ಕೆ ಬೇರೆ ಕಾರಣಗಳಿಲ್ಲ. ಇದೇ ರೀತಿ ಕರ್ನಾಟಕದ ಕ್ರಿಕೆಟ್‌ಪ್ರಿಯರು ಆರ್‌ಸಿಬಿ ತಂಡದ ಪ್ರತಿ ಆಟವನ್ನೂ ಇಂಥದ್ದೇ ಅಭಿಮಾನ ಮತ್ತು ಅಕ್ಕರೆಯಿಂದ ನೋಡುತ್ತಾರೆಂಬುದು ಬಹುಶಃ ಮಲ್ಯನಿಗೆ ಮರೆತೇ ಹೋಗಿರಬೇಕು. ಸೌರಭ್ ತಿವಾರಿಗೆ ಆರೂವರೆ ಕೋಟಿ ಕೊಡುವ ಬದಲು, ವೆಟ್ಟೋರಿಗೆ ಏಳು ಕೋಟಿ ನೀಡುವ ಬದಲು, ಡಿವಿಲಿಯರ್ಸ್‌ಗೆ ಆರು ಕೋಟಿ ಸುರಿಯುವ ಬದಲು ಉತ್ತಪ್ಪನಿಗೆ ಎಂಟೂವರೆ ಕೋಟಿ ನೀಡಬಹುದಿತ್ತು, ಇನ್ನೆರಡು ಕೋಟಿಯಲ್ಲಿ ರಾಹುಲ್ ದ್ರಾವಿಡ್‌ನನ್ನು ಉಳಿಸಿಕೊಳ್ಳಬಹುದಿತ್ತು, ಒಬ್ಬ ಸೌರಭ್ ತಿವಾರಿ ಬದಲಿಗೆ ಮನೀಷ್ ಪಾಂಡೆ, ವಿನಯ್‌ಕುಮಾರ್, ದ್ರಾವಿಡ್, ಭರತ್ ಚಿಪ್ಲಿ, ಸ್ಟುವರ್ಟ್ ಬನ್ನಿ, ಅಖಿಲ್, ಚೌಗುಲೆ ಎಲ್ಲರನ್ನೂ ಉಳಿಸಿಕೊಳ್ಳಬಹುದಿತ್ತು. ಪ್ರತಿ ತಂಡ ಕನಿಷ್ಠ ನಾಲ್ಕು ಆಟಗಾರರನ್ನು ತನ್ನಲ್ಲೇ ಉಳಿಸಿಕೊಳ್ಳಬಹುದೆಂಬ ಅವಕಾಶವಿದ್ದಾಗ್ಯೂ ಮಲ್ಯ ಉಳಿಸಿಕೊಂಡಿದ್ದು ಕೇವಲ ವಿರಾಟ್ ಕೊಹ್ಲಿಯನ್ನು ಮಾತ್ರ!

ವಿರಾಟ್ ಕೊಹ್ಲಿ ಏನೇ ವಿಜೃಂಭಿಸಿದರೂ ಜನ ದ್ರಾವಿಡ್, ಉತ್ತಪ್ಪರನ್ನು ನೋಡುವುದಕ್ಕೂ ಕೊಹ್ಲಿಯನ್ನು ಮೆಚ್ಚುವುದಕ್ಕೂ ವ್ಯತ್ಯಾಸವಿದೆ. ರಾಜಸ್ತಾನ್ ರಾಯಲ್ಸ್‌ನಲ್ಲಿ ದ್ರಾವಿಡ್ ಇದ್ದಾನೆಂಬ ಒಂದೇ ಕಾರಣಕ್ಕೆ ಬೆಂಗಳೂರಿನ ಜನ ಆ ತಂಡವನ್ನು ಬೆಂಬಲಿಸುತ್ತಾರೆ. ಉತ್ತಪ್ಪನ ಆಟ ನೋಡುವುದಕ್ಕೆಂದೇ ಪುಣೆ ವಾರಿಯರ್ಸ್‌ನ ಪ್ರತಿ ಮ್ಯಾಚನ್ನೂ ಜನ ಕಾತುರದಿಂದ ನೋಡುತ್ತಾರೆ. ಹಾಗೇ ವಿನಯ್‌ಕುಮಾರ್‌ನ ಬೌಲಿಂಗ್ ನೋಡಲೆಂದೇ ಕೇರಳದ ಪ್ರತೀ ಪಂದ್ಯಕ್ಕಾಗಿ ಜನ ಹಾತೊರೆಯುತ್ತಿದ್ದಾರೆ. ಸಹಜವಾಗೇ ನಮ್ಮವರಿರುವ ಆಯಾ ತಂಡಗಳನ್ನು ಜನ ಪ್ರೀತಿಸುತ್ತಾರೆ.

ಪ್ರಶ್ನೆಯೆಂದರೆ ಮಲ್ಯನ ಆರ್‌ಸಿಬಿ ತಂಡವನ್ನು ಜನ ಯಾವ ನಿರೀಕ್ಷೆಯಿಟ್ಟು ನೋಡಬೇಕು ಮತ್ತು ಏಕೆ ಮೆಚ್ಚಬೇಕು? ಒಬ್ಬ ಅಭಿಮನ್ಯು ಮಿಥುನ್ ಇದ್ದಾನೆಂದು ದ್ರಾವಿಡ್, ಉತ್ತಪ್ಪ ಪಾಂಡೆ, ವಿನಯ್‌ಕುಮಾರ್‌ರನ್ನು ಮಿಸ್ ಮಾಡ್ಕೋಬೇಕಾ? ನಮ್ಮವರಿಲ್ಲದ ಆರ್‌ಸಿಬಿಗೂ ಕೋಲ್ಕತ್ತಾ ಚೆನ್ನೈನಂಥ ಬೇರಾವುದೇ ಪರಕೀಯ ತಂಡಕ್ಕೂ ಏನು ವ್ಯತ್ಯಾಸ? ಕೊಚ್ಚಿ ವಿರುದ್ಧ ಆರ್‌ಸಿಬಿ ಆಡಿದರೆ ನಾವು ಕೊಚ್ಚಿಯನ್ನೇ ಬೆಂಬಲಿಸ್ತೀವಿ. ಬೆಂಗಳೂರು ವಿರುದ್ಧ ಮುಂಬೈ ಆಡಿದರೆ ನಮ್ಮ ಬೆಂಬಲ ಮುಂಬೈ ತಂಡಕ್ಕೆ ಹೊರತು ಮಲ್ಯನಿಗಲ್ಲ. ಪುಣೆ ತಂಡದಲ್ಲಿ ಕನಿಷ್ಠ ಉತ್ತಪ್ಪ ಪಾಂಡೆ ಇದ್ದಾರಲ್ಲ; ಆರ್‌ಸಿಬಿಯಲ್ಲಿ ಯಾರಿದ್ದಾರೆ? ರಾಜಸ್ತಾನ್ ರಾಯಲ್ಸ್ ವಿರುದ್ಧ ಬೆಂಗಳೂರು ಆಡಿದರೂ ನಾವು ಬೆಂಬಲಿಸುವುದು ರಾಜಸ್ತಾನವನ್ನೇ ಹೊರತು ಮಲ್ಯನ ಪರದೇಶಿ ಟೀಮನ್ನಲ್ಲ!


ಇಂಥ ಆಕ್ರೋಶದ ಕಾರಣಕ್ಕೇ ಮಲ್ಯನ ರಾಯಲ್ ಚಾಲೆಂಜರ್ಸ್ ಅನ್ನು ಲೋಕಲ್ ಕ್ರಿಕೆಟ್ ಪ್ರೇಮಿಗಳು ದ್ವೇಷಿಸಲಾರಂಭಿಸಿದ್ದಾರೆ. ವಿನಯ್ ಕೊಹ್ಲಿಯ ವಿಕೆಟ್ ಉರುಳಿಸಿದ್ದೇ ತಡ ಕುಣಿದು ಕುಪ್ಪಳಿಸುತ್ತಾರೆ. ಚಿನ್ನಸ್ವಾಮಿ ಸ್ಟೇಡಿಯಂ ತುಂಬಿದರೂ ಆರ್‌ಸಿಬಿಗಿಂತಲೂ ಸಚಿನ್ ಆಟಕ್ಕೆ ಹೆಚ್ಚು ಪ್ರೋತ್ಸಾಹ ವ್ಯಕ್ತವಾಗುತ್ತದೆ. ಹೇಗೆ ಶಾರೂಕ್ ಖಾನ್ ಬಂಗಾಳಿಗಳ ಆಕ್ರೋಶಕ್ಕೆ ತಲೆಕೊಡಬೇಕಾಗಿದೆಯೋ ಹಾಗೇ ಮಲ್ಯ ಈಗ ಕನ್ನಡಿಗರ ಸಿಟ್ಟಿಗೆ ಗುರಿಯಾಗಿದ್ದಾನೆ.

ಮನೆಗೆ ಮಾರಿಯಾದರೆ ಬಂಗಾಳಿಗಳೂ ಅಷ್ಟೇ, ಕನ್ನಡಿಗರೂ ಅಷ್ಟೇ....!

• ರಾ.ಸೋಮನಾಥ್

ಡಿ.ಕೆ. ಶಿವಕುಮಾರ ರಾಜಕಾರಣಿಗಳನ್ನು ತಯಾರು ಮಾಡುತ್ತಾನಂತಲ್ಲಾ

ಭ್ರಷ್ಟ ರಾಜಕಾರಣಿಗಳನ್ನು ಬಲಿ ಹಾಕುವ ಶಪಥ ಮಾಡಿದ ಅಣ್ಣ ಹಜಾರೆಯೆದುರು ಆಮರಣಾಂತ ಉಪವಾಸ ಕುಳಿತ ಜಾಗಕ್ಕೆ ಉಮಾಭಾರತಿ ಓಡಿಬಂದಳಂತಲ್ಲಾ. ಸದ್ಯಕ್ಕೆ ಬಿಜೆಪಿಯಿಂದ ಬಹಿಷ್ಕೃತಳಾಗಿ ಪೇಜಾವರರ ಆಶೀರ್ವಾದದಿಂದಲೂ ಪುನೀತಳಾಗದೆ ಒಂದು ರೀತಿ ಬಿಜೆಪಿ ಪಾಲಿಗೆ ಕೆಲಸಕ್ಕೆ ಬಾರದ ಕಲ್ಲಾಗಿ ಅಲೆಯುತ್ತಿರುವ ಉಮಾಭಾರತಿ ಸರಿಯಾದ ಮೈಕಿಗಾಗಿ ಹುಡುಕುತ್ತಿದ್ದಳಂತಲ್ಲಾ. ಅದೇ ಸಮಯಕ್ಕೆ ಸರಿಯಾಗಿ ಸೂಕ್ತ ಜಾಗದಲ್ಲೊಂದು ಪೆಂಡಾಲು, ಜನಸಮೂಹ ಕಾಣಿಸಿ, ಆ ಜನರ ನಡುವೆ ಅಣ್ಣ ಹಜಾರೆ ಅಂಗಾತ ಮಲಗಿರುವುದು ಕಂಡಕೂಡಲೇ ಉಮಾ ನಾಲಿಗೆ ಮಸೆದುಕೊಂಡು ಓಡಿಬಂದಳಂತಲ್ಲ. ಆ ಕೂಡಲೇ ಎಚ್ಚೆತ್ತುಕೊಂಡ ಹಜಾರೆ ಅಭಿಮಾನಿಗಳು, ಸದರಿ ಗೊಂತು ಹರುಕ ದನವನ್ನು ಅಲ್ಲೇ ತಡೆದು ನಿಲ್ಲಿಸಿ "ಸಾಧ್ವಿನಿ, ನೀನಿಲ್ಲಿ ಮಾತನಾಡಿದ್ದೇ ಆದರೆ ಪೊಲೀಸರು ಬರುತ್ತಾರೆ. ಅವರನ್ನು ಕಂಡಕೂಡಲೇ ನೀನು ಹಜಾರೆಯವರನ್ನು ರಾಮನಿಗೆ ಹೋಲಿಸಿ, ಭ್ರಷ್ಟಾಚಾರವನ್ನು ರಾವಣನಿಗೆ ಹೋಲಿಸಿ, ನಿನ್ನನ್ನು ಸೀತೆಗೆ ಸಮೀಕರಿಸಿಕೊಂಡು, ಸೋನಿಯಾರನ್ನು ಸೂರ್ಪನಖಿಯಾಗಿಸಿ ಭಾಷಣ ಬಿಗಿಯುವ ಸಂಭವವಿದೆ. ಹೇಳಿಕೇಳಿ ನೀನು ಹಗ್ಗ ಮೂಗುದಾರವಿಲ್ಲದ ಹಸು. ನೀನೇನಿದ್ದರೂ ಆ ಬಿಜೆಪಿ ದೊಡ್ಡಿಯಲ್ಲೇ ಇರಲು ಲಾಯಕ್ಕು" ಎಂದು ಹೊಗಳಿ ಓಡಿಸಿದರಂತಲ್ಲ. ಇದರಿಂದ ಅವಮಾನಿತಳಾದ ಉಮಾಭಾರತಿ ಮತ್ತೆಲ್ಲಾದರೂ ಪೆಂಡಾಲು, ಮೈಕು ಸಿಗಬಹುದೆ ಎಂದು ಹುಡುಕುತ್ತ ಹೋಗೇಬಿಟ್ಟಳಂತಲ್ಲಾ, ಥೂತ್ತೇರಿ!



* * * * * * *

ಹಜಾರೆ ವಿಷಯದಲ್ಲಿ ಕರ್ನಾಟಕದ ಸುದ್ದಿ ಶಾನೆ ಸ್ವಾರಸ್ಯಕರವಾಗಿವೆಯಂತಲ್ಲ, "ಹಜಾರೆ ಹೋರಾಟಕ್ಕೆ ನನ್ನ ಪೂರ್ಣ ಬೆಂಬಲವಿದೆ" ಎಂದು ಯಡ್ಡಿ ಹೇಳಿಕೆ ಕೊಟ್ಟ ಕೂಡಲೇ ಎಚ್ಚೆತ್ತುಕೊಂಡ ಎಚ್‌ಡಿಕೆ ಮೇಧಾವಿಯಂತೆ ಕಣ್ಣು ಬಿಡುತ್ತ "ಇವತ್ತು ಭ್ರಷ್ಟಾಚಾರ ಅನ್ನತಕ್ಕಂತ ಒಂದು ವಿಷಯ ಏನಿದೆ, ಅದರ ವಿರುದ್ಧ ಹೋರಾಡತಕ್ಕಂತ ನಮ್ಮ ಕಾರ್ಯಕರ್ತರೇನಿದ್ದಾರೆ, ಅವ್ರಿಗೆ ಕಂಡುಬಂದಿರ ತಕ್ಕಂತ ಒಂದು ಪರಿಸ್ಥಿತಿ ಏನಿದೆ, ಅದನ್ನು ನಿಭಾಯಿಸಕ್ಕಾಗದೆ ಹುಚ್ಚಾಸ್ಪತ್ರೆ ಸೇರತಕ್ಕಂತ ಒಂದು ಪರಿಸ್ಥಿತಿ ನಿರ್ಮಾಣವಾಗಿರೊ ಈ ಒಂದು ಸಂದರ್ಭದಲ್ಲಿ ಅಣ್ಣಾ ಹಜಾರೆಯವರು ಸುಮ್ಮನೆ ಮೂರುದಿನ ಉಪವಾಸ ಇದ್ದು ತಮ್ಮ ದೇಹಸ್ಥಿತಿ ಹಾಳು ಮಾಡಿಕೊಂಡ್ರು ಅಂತ ಹೇಳಕ್ಕೆ ಇಚ್ಛೆಪಡ್ತಿನಿ" ಎಂದರಂತಲ್ಲಾ. ಇನ್ನೂ ಮುಂದುವರಿದ ಕುಮಾರಣ್ಣ "ಇವತ್ತಿನ ಸಂದರ್ಭ ಏನಿದೆ, ಅಂದ್ರೆ ಎಮ್ಮೆಲ್ಲೆಗಳಿಗೆಲ್ಲಾ ರೆಸಾರ್ಟಿಗೆ ಕರಕಂಡೋಗಿ ಅವರನ್ನ ಸಾಕತಕ್ಕಂತ ಪರಿಸ್ಥಿತಿ ಏನಿದೆ, ಅದನ್ನು ಗಾಂಧಿಮಾತ್ಮ ನೋಡಿದ್ರೆ ಅವ್ರು ಎಲ್ಲಾದ್ರು ಓಡಿಹೋಗಿ ಆಶ್ರಮ ಸೇರಿಕೊಳ್ತಿದ್ರು ಎಂಬತಕ್ಕಂತ ಸತ್ಯವಾದ ಮಾತನ್ನು ಈ ಸಂದರ್ಭದಲ್ಲಿ ಹೇಳಕ್ಕೆ ಇಚ್ಛೆಪಡ್ತಿನಿ" ಎಂದರಂತಲ್ಲಾ, ಥೂತ್ತೇರಿ!!


* * * * * * *

ಇಡೀ ದೇಶ ಅಣ್ಣಾ ಹಜಾರೆ ಗುಂಗಿನಲ್ಲಿರಬೇಕಾದರೆ ಕನಕಪುರದ ಸಾಮ್ರಾಟರಾದ ಡಿ.ಕೆ. ಶಿವಕುಮಾರ ಮುಂಬರುವ ದಿನಗಳಲ್ಲಿ ರಾಜಕಾರಣಿಗಳ ಕೊರತೆಯುದ್ಭವಿಸುವುದರಿಂದ ರಾಜಕಾರಣಿಗಳನ್ನು ತಯಾರು ಮಾಡುವ ಕೋರ್ಸನ್ನು ತೆರೆಯಲಿದ್ದಾರಂತಲ್ಲಾ. ಆ ಕೋರ್ಸಿನ ಮೊದಲ ಪಾಠವೆಂದರೆ: ಕ್ಷೇತ್ರದಲ್ಲಿ ಸತ್ತು ಕೆಟ್ಟವರ ಲಿಸ್ಟು ತಯಾರಿಸಿಕೊಂಡು, ಮತದಾನದ ದಿವಸ ಇದ್ದವರೇ ಸತ್ತವರ ಹೆಸರಲ್ಲಿ ಮತಹಾಕುವುದು. ತಮಗಾಗದವರ ಮತಗಳು ಮತದಾರರ ಪಟ್ಟಿಯಲ್ಲಿ ಇಲ್ಲದಂತೆ ನೋಡಿಕೊಂಡು, ಪರ ಊರಿನಿಂದ ಟೆಂಪೊ ಲಾರಿ ಮತ್ತು ಗೂಡ್ಸ್ ಕ್ಯಾರಿಯರ್‌ಗಳಲ್ಲಿ ಜನರನ್ನು ತುಂಬಿಕೊಂಡು ಬಂದು ಓಟು ಮಾಡಿಸುವುದು. ಗೆದ್ದ ನಂತರ ಕ್ಷೇತ್ರದಲ್ಲಿ ಖಾಲಿ ಜಾಗ ಇರುವಲ್ಲೆಲ್ಲಾ ಬೇಲಿ ಹಾಕಿಬಿಡುವುದು. ಅದಕ್ಕೆ ವಾರಸುದಾರರಿದ್ದರೆ ತೋಳ್ಬಲ ಬಳಸಿ ಅವರಿಗೆ ಕಾಲುಭಾಗ ಕೊಟ್ಟು ಮುಕ್ಕಾಲು ಭಾಗ ಲಪಟಾಯಿಸುವುದು. ಸರ್ಕಾರಿ ಖರ್ಚಿನಲ್ಲಿ ಸದರಿ ಜಾಗಕ್ಕೆ ಟಾರ್‌ರಸ್ತೆ ಮಾಡಿಸುವುದು. ಲಾರಿ ತೆಗೆದು ಮೈನ್ಸ್ ಸಾಗಿಸಲು ಬಾಡಿಗೆ ಕೊಡುವುದು. ಕ್ರಮೇಣ ಮೈನ್ಸ್ ಜಾಗವನ್ನು ಲಪಟಾಯಿಸಿಕೊಂಡು ದಕ್ಕಿಸಿಕೊಳ್ಳುವುದು.

ಇದಿಷ್ಟೇ ಸಾಲದು, ಅಲ್ಲಲ್ಲಿ ಅಭಿಮಾನಿ ಸಂಘ ಸ್ಥಾಪಿಸಿಕೊಂಡು ಹುಟ್ಟುಹಬ್ಬ ಆಚರಿಸಿಕೊಳ್ಳುವುದು. ಆಗದವರ ವಿರುದ್ಧ ಪ್ರತಿಭಟಿಸುವುದು. ಅಂತೂ ಸದಾ ಭೂಗತಲೋಕದ ಎಚ್ಚರದಲ್ಲಿ ರಾಜಕಾರಣ ಮಾಡುವುದು. ಇವೇ ಮುಂತಾದ ಕೋರ್ಸುಗಳು ಡಿ.ಕೆ. ಶಿವಕುಮಾರನ ಶಿಬಿರದ ವಿಷಯಗಳಾಗಲಿವೆ ಎಂದು ಕೂಗುಮಾರಿ ತೇಜಸ್ವಿನಿಯ ಹಿಂಬಾಲಕರು ಹೇಳಿಕೆ ಕೊಡಲು ತಯಾರಾಗುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * * * * *

ಅವರವರ ಕಷ್ಟ ಅವರಿಗೆ ಎಂಬಂತೆ ಎಲ್ಲರೂ ನರಳುತ್ತಿರುವಾಗ ದೇವಮಾನವ ಸಾಯಿಬಾಬಾ ಕೃತಕ ಉಸಿರಾಟದಿಂದ ಸರಾಗವಾಗಿ ಉಸಿರಾಟ ಕ್ರಿಯೆ ನಡೆಸುತ್ತಿದ್ದಾರೆ ಎಂದು ಪ್ರಖ್ಯಾತ ವೈದ್ಯರು ಖುಷಿಯಾಗಿದ್ದಾರಂತಲ್ಲಾ. ಅದೂ ಅಲ್ಲದೆ ಆಗಾಗ್ಗೆ ಚಿಕಿತ್ಸೆಗೆ ಪೂರಕವಾಗಿ ಸ್ಪಂದಿಸುತ್ತಿರುವ ದೇವರು, ಭಕ್ತಾದಿಗಳ ಭಜನೆಯ ಪ್ರಭಾವದಿಂದ ಮೈಮರೆತು ಮರಗಟ್ಟಿದಂತೆ ಮಲಗಿದ್ದಾರೆಂಬ ಸುದ್ದಿಯೂ ಹರಡಿದೆಯಂತಲ್ಲಾ. ದೇವರು ತೀರಿಕೊಳ್ಳುತ್ತಿರುವ ಈ ಸಮಯದಲ್ಲಿ "ಉತ್ತರಾಧಿಕಾರಿ ಯಾರು, ನಲವತ್ತು ಸಾವಿರ ಕೋಟಿ ರೂ.ಗಳ ಆಸ್ತಿಗೆ ಯಾರು ಒಡೆಯರಾಗಬೇಕು, ಹಾಲಿ ಇರುವ ಭೀಕರ ಭಕ್ತರ ಪೈಕಿ ಯಾರಿಗೂ ಜಾದೂ ಬರುವುದಿಲ್ಲ, ಬರದಿದ್ದರೆ ಹಾಳುಬಿದ್ದೋಗಲಿ, ಸತ್ತ ದೇವರ ಸಮಾಧಿ ಮಾಡಿಕೊಂಡೇ ಬದುಕುತ್ತೇವೆ. ಮುನ್ನೂರು ವರ್ಷಗಳ ಹಿಂದೆ ತೀರಿಕೊಂಡ ವೆಂಕಟಭಟ್ಟರೆಂಬ ರಾಘವೇಂದ್ರರ ಸಮಾಧಿಯಿಂದಲೇ ವಿಪ್ರೋತ್ತಮರೆಲ್ಲಾ ವೈಭವದಿಂದ ಬದುಕುತ್ತಿರಬೇಕಾದರೆ ನಮಗೆ ಸಾಧ್ಯವಿಲ್ಲವೆ? ಶಿರಡಿ ಸಾಯಿಬಾಬಾ ಸತ್ತು ಎಷ್ಟೋ ವರ್ಷಗಳ ನಂತರ ಇಪ್ಪತ್ತು ಲಕ್ಷ ರೂ.ಗಳ ಕಿರೀಟ ಬಂದು ಬೀಳುವುದಾದರೆ, ನಮ್ಮ ಸಾಯಿಬಾಬಾರ ಮಹಿಮೆ ಕಡಿಮೆಯೇ? ಆದ್ದರಿಂದ ಸಾಯಿರಾಂ ಇದ್ದರೂ ಬೆಲೆ, ಸತ್ತರೂ ಬೆಲೆ" ಎಂದು ಸಮಾಧಾನಗೊಂಡ ಭಜನಾ ಭಕ್ತರು ತಾರಕ ಸ್ವರದಲ್ಲಿ "ಸಾಯಿರಾಂ ಅಮರ್ ರಹೆ" ಎಂದು ಕೂಗಿಕೊಂಡರಂತಲ್ಲಾ, ಥೂತ್ತೇರಿ!!!





ದಿಕ್ಕೆಟ್ಟ ಅಣ್ಣಾ

• ಶಿವಸುಂದರ್ ಮತ್ತು ಗೌರಿ ಲಂಕೇಶ್

ಕೇವಲ ಒಂದು ವಾರದಿಂದ ಭಾರತದ ಮಧ್ಯಮ ವರ್ಗ - ಅದರಲ್ಲೂ ನಗರದ ಮಧ್ಯಮ ವರ್ಗ - ಒಂದು ಕ್ರಾಂತಿಯನ್ನೇ ಮಾಡಿದ ಧನ್ಯತೆಯಲ್ಲಿ ತೇಲಾಡುತ್ತಿದೆ. ಖ್ಯಾತ ಗಾಂಧೀವಾದಿ ಅಣ್ಣಾ ಹಜಾರೆ ನೇತೃತ್ವದಲ್ಲಿ ಜನ ಲೋಕ್‌ಪಾಲ್ ಮಸೂದೆಯನ್ನು ಜಾರಿಗೆ ತರಲು ಒತ್ತಾಯಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ 97 ಗಂಟೆಗಳ ಉಪವಾಸದ ಮೂಲಕ ಭಾರತದಲ್ಲಿ ಕ್ರಾಂತಿಯ ಹೊಸ ಪರ್ವವೇ ಪ್ರಾರಂಭವಾಗಿದೆಯೆಂಬ ಭ್ರಾಂತಿಯನ್ನು ಮಾಧ್ಯಮಗಳೂ ಯಶಸ್ವಿಯಾಗಿ ಬಿತ್ತುತ್ತಲೇ ಇವೆ. ಕೆಲವು ಮಹಾಶಯರಂತೂ 97 ಗಂಟೆಗಳ ಈ ಕ್ರಾಂತಿಯನ್ನು ಈಜಿಪ್ಟ್‌ನ ತೆಹ್ರೀರ್ ಚೌಕದ ಕ್ರಾಂತಿಗೆ ಹೋಲಿಸಿ ಸಂಭ್ರಮಿಸುತ್ತಿದ್ದಾರೆ.

ಇಂಥಾ ಹೋಲಿಕೆಗಳೇ ಈ ಹೋರಾಟದ ಸುತ್ತಾ ಇರುವ ಭ್ರಾಂತಿಯನ್ನು ಸೂಚಿಸುತ್ತವೆ. ಈಜಿಪ್ಟ್, ಟುನಿಸಿಯಾ ಮತ್ತು ಇತರ ಅರಬ್ ದೇಶಗಳಲ್ಲಿ ನಡೆಯುತ್ತಿರುವ ಜನಸಂಗ್ರಾಮಗಳಿಗೆ ಸ್ಪಷ್ಟ ಶತ್ರುಗಳಿದ್ದರು. ಅಲ್ಲಿ ಆ ದೇಶಗಳ ಅಧ್ಯಕ್ಷರ ಭ್ರಷ್ಟಾಚಾರ ಮತ್ತು ನಿರಂಕುಶತ್ವಗಳ ವಿರುದ್ಧ ಅಲ್ಲಿಯ ಜನಹೋರಾಟಗಳು ನಡೆದವು. ಅದರಲ್ಲೂ ಈಜಿಪ್ಟ್ ಮತ್ತು ಟುನಿಸಿಯಾಗಳಲ್ಲಿ ಒಂದು ಕಡೆ ಭ್ರಷ್ಟರು ಮತ್ತು ದುಷ್ಟರು ಇದ್ದರೆ, ಇನ್ನೊಂದು ಕಡೆ ಈ ಜನಪೀಡಕರಿಂದ ಬಾಧಿತರಾದ ಇಡೀ ಜನತೆ ಹೋರಾಟ ನಡೆಸಿತ್ತು. ಹೀಗಾಗಿ ಅಲ್ಲಿ ನಡೆದ ಸಂಗ್ರಾಮ ಮೌಲಿಕವಾಗಿಯೇ ಭಿನ್ನವಾಗಿತ್ತು.

ವಿರೋಧಿಗಳೇ ಇಲ್ಲದ ಸಂಗ್ರಾಮ!

ಆದರೆ ಇಲ್ಲಿ ಅಣ್ಣಾ ಹಜಾರೆ ನಡೆಸಿದ ಆಂದೋಲನವು ಯಾರು ಯಾರ ವಿರುದ್ಧ ನಡೆಸಿದ ಸಂಗ್ರಾಮ ಎಂಬುದೇ ಅರ್ಥವಾಗುವಂತಿರಲಿಲ್ಲ. ದೇಶದ ಅತ್ಯುನ್ನತ ಹುದ್ದೆಯಾದ ಪ್ರಧಾನ ಮಂತ್ರಿ ಮತ್ತು ಅತ್ಯುನ್ನತ ಪ್ರಜಾತಾಂತ್ರಿಕ ಸಂಸ್ಥೆಯಾದ ಸಂಸತ್ತಿನಲ್ಲಿ ನಡೆಯುವ ಭ್ರಷ್ಟಾಚಾರವನ್ನು ಹತ್ತಿಕ್ಕಲು ರೂಪಿಸಲಾದ ಲೋಕ್‌ಪಾಲ್ ಮಸೂದೆಗೆ ಜನಪರ ತಿದ್ದುಪಡಿ ತರಬೇಕೆಂದು ಪ್ರಾರಂಭವಾದ ಈ ಚಳವಳಿಯನ್ನು ವಾಸ್ತವವಾಗಿ ಯಾರೂ ವಿರೋಧಿಸಲೇ ಇಲ್ಲ! ಏಕೆಂದರೆ ಪರಮ ಭ್ರಷ್ಟಾಚಾರಿಗಳು ಮತ್ತು ಕೊನೆಗೆ ಸರ್ಕಾರ ಸಹ ಭ್ರಷ್ಟಾಚಾರ ನಿಗ್ರಹದ ಬಗ್ಗೆ ಬದ್ಧತೆಯ ಮಾತುಗಳನ್ನಾಡಲು ಪ್ರಾರಂಭಿಸಿದವು.

ತನ್ನ ರಾಜಿರಹಿತ ಹೋರಾಟದ ಮೂಲಕ ಈ ಆಂದೋಲನಕ್ಕೆ ನೈತಿಕಶಕ್ತಿ ಮತ್ತು ಸಾಕ್ಷಿಪ್ರಜ್ಞೆಯಾಗಿದ್ದ ಅಣ್ಣಾ ಹಜಾರೆಯವರ ಕುದುರೆಯನ್ನೇರಿ ದೆಹಲಿ ತಲುಪಲು ಬಿಜೆಪಿ ಪ್ರಯತ್ನಿಸಿದ್ದು ಒಂದೆಡೆಯಾದರೆ, ಮತ್ತೊಂದು ಕಡೆ ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಯಾವತ್ತೂ ನಂಬಿಕೆಯಿಲ್ಲದ, ಹಿಟ್ಲರ್ ಆದರೂ ಸರಿ, ಗಾಂಧಿಯಾದರೂ ಸರಿ ಯಾರಾದರೂ ಒಬ್ಬ ಅತಿಮಾನವ ಬಂದರೆ ಮಾತ್ರ ಈ ದೇಶ ಸರಿಹೋಗುತ್ತದೆ ಎಂಬ ಫ್ಯಾಸಿಸ್ಟ್ ಮನೋಭಾವವನ್ನು ಹೊಂದಿರುವ ಮೇಲ್‌ಮಧ್ಯಮ ವರ್ಗವಿತ್ತು.

ಈ ಆಂದೋಲನದಲ್ಲಿ ಕೇವಲ ಮೇಲ್ಮಧ್ಯಮ ವರ್ಗದ ಜನರು, ಉದ್ದಿಮೆಪತಿಗಳು, ಎನ್‌ಜಿಓಗಳು ಇರಲಿಲ್ಲ. ಅವರೊಂದಿಗೆ ಭ್ರಷ್ಟಾಚಾರ ತೊಲಗಬೇಕೆಂಬ ನೈಜ ಆಶಯವುಳ್ಳ ಲಕ್ಷಾಂತರ ಜನರೂ, ಪ್ರಗತಿಪರರೂ ದೇಶಾದ್ಯಂತ ಭಾಗವಹಿಸಿದ್ದರು. ಅವರೆಲ್ಲರ ಭಾಗವಹಿಸುವಿಕೆಯು ಅಪ್ರಾಮಾಣಿಕವೆಂದೋ, ಅಪ್ರಯೋಜಕವೆಂದೋ ಹೇಳುವುದು ಅವರ ಪ್ರಾಮಾಣಿಕ ಆಶಯಗಳಿಗೆ ಎಸಗುವ ಅಪಚಾರವಾಗುತ್ತದೆ. ಅದರ ಬಗ್ಗೆ ಗೌರವವಿಟ್ಟುಕೊಂಡೇ ಹೇಳಬೇಕಾದ ಎರಡು ಮಾತಿದೆ. ಒಂದು, ಈ ಚಳವಳಿಯೊಳಗೇ ಬೇರೆ ಬೇರೆ ಮಟ್ಟದ ಭ್ರಷ್ಟರು ಮೊದಲಿಂದಲೇ ಸೇರಿಕೊಂಡಿದ್ದು. ಎರಡು, ಇಂತಹದೊಂದು ಸಮೂಹ ಸನ್ನಿ ಏಕೆ, ಹೇಗೆ ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸದೇ 'ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೋ ಅಷ್ಟು ಪ್ರಯೋಜನ ಆಗಲಿ' ಎಂದು ಅದರೊಳಗೆ ಸೇರಿಕೊಂಡಿದ್ದು.

ಇವತ್ತಿನ ಸಂಸದೀಯ ಪ್ರಜಾತಂತ್ರದ ಮೂಲ ರಚನೆಯಲ್ಲೇ ದೊಡ್ಡ ಸಮಸ್ಯೆ ಇರುವುದು ನಿಜ. ಈ ಮಧ್ಯೆ ಕಳೆದೆರಡು ದಶಕಗಳಲ್ಲಿ ಜಾಗತೀಕರಣ ನೀತಿಗಳ ಫಲಾನುಭವಿಯಾದ ಮೇಲ್ಮಧ್ಯಮ ವರ್ಗವೊಂದು ಈ ದೇಶದಲ್ಲಿ ಸೃಷ್ಟಿಯಾಗಿದೆ. ಈ ಜನರಿಗೆ ಯಾವ ರೀತಿಯ ಪ್ರಜಾತಂತ್ರದ ಬಗ್ಗೆಯೂ ವಿಶ್ವಾಸವಿಲ್ಲ. ಬದಲಿಗೆ ಕೇವಲ ಮಾರುಕಟ್ಟೆಯ 'ಬಲವಿದ್ದವರು ಬದುಕಲಿ' ಎಂಬ ಅರಣ್ಯ ನ್ಯಾಯದ ಬಗ್ಗೆ ಈ ವರ್ಗಕ್ಕೆ ದೃಢ ನಂಬಿಕೆ ಇದೆ.

ಈ ವರ್ಗದ ಜನರಿಗೆ ಈ ದೇಶದ ಅತ್ಯಂತ ದೊಡ್ಡ ಸಮಸ್ಯೆಗಳೆಂದರೆ ಭ್ರಷ್ಟಾಚಾರ, ನಗರಗಳಲ್ಲಿನ ಟ್ರಾಫಿಕ್, ಮೀಸಲಾತಿಯಂತಹ ಸಂಗತಿಗಳು. ಭ್ರಷ್ಟಾಚಾರದ ಮೂಲ ಗಂಗೋತ್ರಿ ಯಾವುದು? ಅದರ ನಿವಾರಣೆ ಹೇಗೆ? ಎಂಬುದರ ಕುರಿತಾಗಲೀ, ಟ್ರಾಫಿಕ್ ಜಾಮ್ ಸಮಸ್ಯೆಗೆ ಹೇಗೆ ತಾವೂ ಭಾಗಿಗಳಾಗಿರುವ ಜಾಗತೀಕರಣ ಅಭಿವೃದ್ಧಿ ನೀತಿಯೇ ಕಾರಣ ಎಂಬುದರ ಬಗ್ಗೆಯಾಗಲೀ ಈ ವರ್ಗಕ್ಕೆ ಚಿಂತನೆ ಮತ್ತು ಕ್ರಿಯೆ ಸಾಧ್ಯವಿಲ್ಲ.

ಆದರೆ ಈ ವರ್ಗದವರಲ್ಲಿ ಹಜಾರೆಯವರ ಸುತ್ತ ನಿರ್ಮಾಣವಾದ ಸನ್ನಿಯು ಇದ್ದಕ್ಕಿದ್ದಂತೆ ದೇಶಪ್ರೇಮವನ್ನು ಉಕ್ಕಿಸಿಬಿಟ್ಟಿತು. ಅವರ ಈ ದೇಶಪ್ರೇಮವು ಎಷ್ಟರಮಟ್ಟಿಗೆ ಮುಂದಿನ ವಾರದವರೆಗೆ ಇರುತ್ತದೆ ಹಾಗೂ ಅದು ಈ ದೇಶದ ಬಡ ಜನರ ಮೇಲಿನ ಪ್ರೇಮವಾಗಿ ಯಾವಾಗ ಬದಲಾಗುತ್ತದೆ ಎಂಬುದನ್ನು ವಿಶ್ಲೇಷಿಸುವ ಅಗತ್ಯವೇ ಇಲ್ಲ. ಯಾಕೆಂದರೆ ಅವರ ಈ ದೇಶಪ್ರೇಮವು ಶಾಶ್ವತವಲ್ಲ.

ಭ್ರಷ್ಟರೇ ಬೆಂಬಲಿಸಿದಾಗ

ಈ ಹಿಂದೆ ಬಿಜೆಪಿಯು ಕೇಂದ್ರ ಸರ್ಕಾರದ ಚುಕ್ಕಾಣಿ ಹಿಡಿದಿದ್ದಾಗ ಲೋಕ್‌ಪಾಲ್ ಮಸೂದೆಯ ಬಗ್ಗೆ ಚಕಾರ ಎತ್ತದ ಎಲ್.ಕೆ.ಅಡ್ವಾನಿ ಮತ್ತವರ ಪಕ್ಷ ಅಣ್ಣಾ ಹಜಾರೆಯವರ ಬೆಂಬಲಕ್ಕೆ ನಿಂತಿತು. ಅದಕ್ಕಿಂತ ಹಾಸ್ಯಾಸ್ಪದವಾಗಿದ್ದು ಕರ್ನಾಟಕ ಹಿಂದೆಂದೂ ಕಾಣದಂಥ ಭ್ರಷ್ಟಾಚಾರಿಯಾದ ಮುಖ್ಯಮಂತ್ರಿ ಯಡಿಯೂರಪ್ಪನೂ ಸಹ ಹಜಾರೆಯವರ ಹೋರಾಟವನ್ನು ಬೆಂಬಲಿಸಿದ್ದು. ಇದರ ಬಗ್ಗೆ ಜನರೇ ಎಷ್ಟು ಆಡಿಕೊಂಡರೆಂದರೆ, ಯಡ್ಡಿ ಬೆಂಬಲ ಸೂಚಿಸಿದ ಕೆಲವೇ ಗಂಟೆಗಳಲ್ಲಿ "ಯಡಿಯೂರಪ್ಪನವರು ಹಜಾರೆಯವರಿಗೆ ಫ್ರೀಡಂ ಪಾರ್ಕಿನಲ್ಲೇ 60/40 ಸೈಟು ಕೊಡುತ್ತಾರಂತೆ" ಎಂಬ ಎಸ್‌ಎಂಎಸ್ ಜೋಕ್ ಎಲ್ಲೆಡೆ ಹರಿದಾಡಲಾರಂಭಿಸಿತು!

ದೆಹಲಿಯಲ್ಲೂ ಬಾಬಾ ರಾಮ್‌ದೇವ್‌ನಂಥಾ ಗೋಸುಂಬೆ ಚಡ್ಡಿ ಸ್ವಾಮಿ, ರವಿಶಂಕರ್ ತರಹದ ವ್ಯಾಪಾರಿ ಸ್ವಾಮಿ (ಇವರಿಬ್ಬರೂ ಅಯೋಧ್ಯೆಯಲ್ಲಿ ರಾಮ ದೇವಸ್ಥಾನ ಸ್ಥಾಪಿಸಬೇಕೆಂದು ಹೇಳಿರುವವರು), ರಾಜೀವ್ ಚಂದ್ರಶೇಖರ್‌ನಂಥ ಕಾರ್ಪೊರೇಟ್ ಉದ್ಯಮಪತಿ ಎಲ್ಲರೂ ಹಜಾರೆಯವರಿಗೆ ಬೆಂಬಲ ಸೂಚಿಸಿ ಭ್ರಷ್ಟಾಚಾರದ ವಿರುದ್ಧ ದೊಡ್ಡ ದನಿಯಲ್ಲಿ ಮಾತನಾಡಿದವರೇ. ಅಷ್ಟೇ ಅಲ್ಲದೆ, ಕೊನೆಕೊನೆಗೆ ಕಾಂಗ್ರೆಸ್, ಬಿಜೆಪಿ, ದಳ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳೂ ಸಹ ಭ್ರಷ್ಟಾಚಾರದ ವಿರುದ್ಧದ ಸಮೂಹಗಾನಕ್ಕೆ ಕೋರಸ್ ಸೇರಿಸಿದವು.

ಇದೆಲ್ಲ ಯಾವ ಹಂತ ತಲುಪಿತೆಂದರೆ, ಭ್ರಷ್ಟಾಚಾರದ ನೇತಾರನಾದ ಕೇಂದ್ರದ ಕಾಂಗ್ರೆಸ್ ಪಕ್ಷ ತಾನು ಅತ್ಯಂತ ಸಂವೇದನಾಶೀಲ ಸರ್ಕಾರವೆಂಬಂತೆ ಅಣ್ಣಾ ಹಜಾರೆ ಸೂಚಿಸಿದವರನ್ನೇ ಕೂಡಿಸಿ, ಜನಲೋಕ್‌ಪಾಲ್ ಮಸೂದೆಯನ್ನು ರೂಪಿಸಲು ಒಂದು ಕಮಿಟಿಯನ್ನು ಮಾಡಿ ತಾವೂ ಸಹ ಭ್ರಷ್ಟಾಚಾರ ವಿರೋಧಿ ಗುಂಪಿಗೆ ಸೇರಿಕೊಂಡುಬಿಟ್ಟರು.

ಹೀಗೆ ಎದುರಾಳಿಯಾಗಬೇಕಿದ್ದ ಶತ್ರುವನ್ನೇ ಜೊತೆಗೆ ಸೇರಿಸಿಕೊಂಡು ನಡೆದ ಈ ಯುದ್ಧದಲ್ಲಿ ಗೆದ್ದವರು ಹಜಾರೆಯಾದರೂ ಸೋತದ್ದು ಮಾತ್ರ ಭ್ರಷ್ಟಾಚಾರ ಅಲ್ಲವೇ ಅಲ್ಲ.

ಯಾವುದೇ ಹೋರಾಟದ ಜಯ ಯಾವುದರ ವಿರುದ್ಧ ಯಾರು ಹೋರಾಡುತ್ತಿದ್ದಾರೆ, ಅಂತಿಮವಾಗಿ ಹೋರಾಟಗಾರರು ಪಡೆದುಕೊಂಡದ್ದು ಶತ್ರುವಿಗೆ ಯಾವ ರೂಪದ ಪೆಟ್ಟನ್ನು ಕೊಡುತ್ತದೆ ಎಂಬುದನ್ನೇ ಆಧರಿಸಿರುತ್ತದೆ.

ಭ್ರಷ್ಟಾಚಾರ ಕಾನೂನುಬದ್ಧವಾಗಿದೆ!

ಅಣ್ಣಾ ಹಜಾರೆಯವರ ಹೋರಾಟ ಈ ದೇಶದಲ್ಲಿ ಆಳವಾಗಿ ಬೇರುಬಿಟ್ಟಿರುವ ಭ್ರಷ್ಟಾಚಾರದ ವಿರುದ್ಧ ಎಂದು ಬಣ್ಣಿಸಲಾಗುತ್ತಿದೆ. ಆದರೆ ಲೋಕ್‌ಪಾಲ್ ಮಸೂದೆಯಾಗಲಿ ಅಥವಾ ಅದರ ಜನಲೋಕ್‌ಪಾಲ್ ಸ್ವರೂಪವಾಗಲಿ ಕೇಂದ್ರದ ಅಧಿಕಾರಿ, ಸಂಸದರು ಮತ್ತು ಮಂತ್ರಿಮಂಡಲವನ್ನು ಮಾತ್ರ ತನ್ನ ವಿಚಾರಣಾ ಮತ್ತು ಶಿಕ್ಷೆಯ ವ್ಯಾಪ್ತಿಗೆ ತೆಗೆದುಕೊಳ್ಳುತ್ತದೆ. ಆದರೆ ಜಾಗತೀಕರಣದ ನಂತರದಲ್ಲಿ ಸರ್ಕಾರದ ಪಾತ್ರವೇ ಕಿರಿದಾಗುತ್ತಾ ಖಾಸಗೀ ಕ್ಷೇತ್ರದ ಪಾತ್ರ ಹಿರಿದಾಗುತ್ತಿದೆ. ಹಾಗೆಯೇ ಭ್ರಷ್ಟಾಚಾರವೂ ಸಹ ಅತ್ಯಂತ ಹೆಚ್ಚಾಗಿ ಲಕ್ಷ ಕೋಟಿ ರೂಪಾಯಿಗಳ ಸ್ವರೂಪ ಪಡೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಖಾಸಗಿ ಕ್ಷೇತ್ರವೂ ಸರ್ಕಾರಿ ವಲಯದಲ್ಲಿ ಪ್ರವೇಶ ಮಾಡಿದ್ದರಿಂದ (ಬಾಕ್ಸ್ ನೋಡಿ).

ಉದಾರೀಕರಣ ಎಂದು ಕರೆಯಲ್ಪಡುವ ಈ ಶಾಸನಬದ್ಧ ಭ್ರಷ್ಟಾಚಾರದ ನೇರ ಫಲಾನುಭವಿಗಳಾದ ರಾಜೀವ್ ಚಂದ್ರಶೇಖರ್, ರಾಹುಲ್ ಬಜಾಜ್, ಅಂಬಾನಿ, ಟಾಟಾರಂಥ ಉದ್ಯಮಿಗಳು ಇಂದು ಅಣ್ಣಾ ಹಜಾರೆಯವರನ್ನು ಬೆಂಬಲಿಸುತ್ತಿದ್ದಾರೆ ಎಂದರೆ ಏನರ್ಥ? ಜನಲೋಕ್‌ಪಾಲ್ ಮಸೂದೆಯಾಗಲಿ, ಈವರಗೆ ಅಸ್ತಿತ್ವದಲ್ಲಿರುವ ಯಾವುದೇ ತನಿಖಾ ಸಂಸ್ಥೆ ಅಥವಾ ಕಾನೂನುಗಳಾಗಲೀ ಈ ಫಲಾನುಭವಿಗಳ ಭ್ರಷ್ಟಾಚಾರವನ್ನು ಭ್ರಷ್ಟಾಚಾರ ಎಂದೇ ಪರಿಗಣಿಸುವುದಿಲ್ಲ.

ಅಪಾಯಕಾರಿ ಪರಿಹಾರ

ಇವತ್ತು ನಿಜಕ್ಕೂ ಈ ದೇಶದಿಂದ ಭ್ರಷ್ಟಾಚಾರವನ್ನು ಹೊಡೆದೋಡಿಸಬೇಕಿದ್ದರೆ, ಈಗ ಜಾರಿಗೆ ಬಂದಿರುವ ಬಂಡವಾಳಶಾಹಿ ವ್ಯವಸ್ಥೆ 'ಅಭಿವೃದ್ಧಿ ಯೋಜನೆಗಳು', ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಎಂಬ ನೀತಿ, ಈ ದೇಶದ ಸಂಪನ್ಮೂಲಗಳನ್ನು ಖಾಸಗಿಯವರಿಗೆ ಪರಭಾರೆ ಮಾಡುವ ಶಾಸನಗಳನ್ನೆಲ್ಲ ವಿರೋಧಿಸಬೇಕಿದೆ.

ಅದನ್ನು ಮಾಡುವ ಬದಲಾಗಿ ಅಥವಾ ಅವೆಲ್ಲವುಗಳ ಕುರಿತು ಎಚ್ಚರಿಕೆ ಮೂಡಿಸುವ ಬದಲಾಗಿ ಅಣ್ಣಾ ಹಜಾರೆಯವರ ಈ 'ಆಂದೋಲನ' ಭ್ರಷ್ಟಾಚಾರದ ವ್ಯಾಖ್ಯಾನವನ್ನು ಕೇವಲ ರಾಜಕಾರಣಿಗಳಿಗೆ ಮಾತ್ರ ಸೀಮಿತಗೊಳಿಸಿದೆ. ಅದಕ್ಕಿಂತ ಅಪಾಯಕಾರಿಯಾದದ್ದು ಕೆಲವು ಗಣ್ಯರಿಗೆ ವಿಶೇಷ ಅಧಿಕಾರಗಳನ್ನು ಕೊಡುವುದರ ಮೂಲಕ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಗ್ರಹಿಸಬಹುದೆಂಬ ಅತ್ಯಂತ ಪರಿಹಾರವನ್ನು ಮುಂದಿಟ್ಟಿರುವುದು.

ವಾಸ್ತವವಾಗಿ ಅಣ್ಣಾ ಹಜಾರೆಯವರ ಬೆನ್ನಹಿಂದೆ ಸೇರಿರುವ ರಾಜಕಾರಣಿಗಳಿಗೂ, ಉದ್ಯಮಪತಿಗಳಿಗೂ, ಉದಾರೀಕರಣ ನೀತಿಗಳ ಫಲಾನುಭವಿಗಳೇ ಆಗಿರುವ ಮೇಲ್‌ಮಧ್ಯಮವರ್ಗಕ್ಕೂ ಭ್ರಷ್ಟಾಚಾರದ ಈ ಬಗೆಯ ವ್ಯಾಖ್ಯಾನ ಹಾಗೂ ಪರಿಹಾರ ಅತ್ಯಂತ ಅನುಕೂಲಕರವಾದದ್ದೇ ಆಗಿದೆ. ಮಣಿಪುರದ ಇರೋಮ್ ಶರ್ಮಿಳಾರ 10 ವರ್ಷದ ಉಪವಾಸವನ್ನು ಕ್ಯಾರೇ ಅನ್ನದ ಸರ್ಕಾರ 97 ಗಂಟೆಗಳ ಹಜಾರೆಯವರ ಉಪವಾಸಕ್ಕೆ ಬಗ್ಗಿದ್ದಕ್ಕೆ ಕಾರಣ ಇದು (ಬಾಕ್ಸ್ ನೋಡಿ).

ಜನಲೋಕಪಾಲ್ ಮಸೂದೆಯಿಂದ ಏನು ಸಾಧ್ಯ?

ಈ ಜನಲೋಕಪಾಲ್ ಮಸೂದೆ ಅಣ್ಣಾ ಹಜಾರೆ ಮತ್ತವರ ಮಿತ್ರರು ರೂಪಿಸಿದ ರೀತಿಯಲ್ಲೇ ಜಾರಿಗೆ ಬಂದರೆ ಕೆಲವು ಭ್ರಷ್ಟ ಮಂತ್ರಿಗಳು, ಪ್ರಧಾನಿ, ಇನ್ನಿತರರು ಶಿಕ್ಷೆಗೆ ಗುರಿಯಾಗಬಹುದು. ಆದರೆ ಅದಕ್ಕಾಗಿ ಅವರು ಸೂಚಿಸುತ್ತಿರುವ ಮಾರ್ಗೋಪಾಯಗಳು ಮಾತ್ರ ಪ್ರಜಾತಂತ್ರಕ್ಕೆ ದೊಡ್ಡ ಮಾರಕವಾಗಲಿದೆ. ಹೀಗಾಗಿ ಭ್ರಷ್ಟಾಚಾರದ ವ್ಯಾಖ್ಯಾನವನ್ನೇ ಕುಬ್ಜಗೊಳಿಸಿ, ಅದನ್ನು ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸಿ, ಶಾಸನಬದ್ಧ ಭ್ರಷ್ಟಾಚಾರವನ್ನು ಪ್ರಶ್ನಿಸಲೂ ಹೋಗದ ಈ ಆಂದೋಲನದ ಭೂಮಿಕೆಯೇ ಅತ್ಯಂತ ಪ್ರಶ್ನಾರ್ಹವಾಗಿದೆ.

ಸಂಸತ್ ಹಾಗೂ ಪ್ರಧಾನಿ ಮಂತ್ರಿಮಂಡಳದಲ್ಲಿ ನಡೆಯುವ ಭ್ರಷ್ಟಾಚಾರವನ್ನು ನಿಗ್ರಹಿಸಲು ಜನಲೋಕ್‌ಪಾಲ್ ಸೂಚಿಸಿರುವ ಮಸೂದೆಯಲ್ಲಿ ಸರ್ಕಾರ ಪ್ರಸ್ತಾಪಿಸಿದ ಮಸೂದೆಗಳಿಗಿಂತ ಕಠಿಣವಾದ ಕೆಲವು ಅಂಶಗಳಿರುವುದು ನಿಜ. ಆದರೆ ಈ ಮಸೂದೆಯಿಂದ ರಚಿತವಾಗುವ ಜನಲೋಕ್‌ಪಾಲ್ ಸಮಿತಿಯೇ ಅತ್ಯಂತ ಅಪ್ರಜಾತಾಂತ್ರಿಕವಾಗಿ ಆಯ್ಕೆಯಾಗುವ ಪ್ರಕ್ರಿಯೆಯನ್ನು

ಭೀಭತ್ಸವಾಗಿ ಬೆಳೆಯುತ್ತಿರುವ ಹಗರಣಗಳ ಮೊತ್ತ

ನವ ಆರ್ಥಿಕ ವ್ಯವಸ್ಥೆ ಜಾರಿಗೆ ಬರುವ ಮುನ್ನ ಯಾವುದೇ ಖಾಸಗಿ ವ್ಯಕ್ತಿಗೆ ಸರ್ಕಾರಿ ಅಧಿಕಾರಿಯೋ, ರಾಜಕಾರಣಿಯೋ ಅನುಕೂಲ ಮಾಡಿಕೊಟ್ಟರೆ, ಆ ಮೂಲಕ ಜನರ ಹಣವನ್ನು ಗುಳುಂ ಮಾಡಲು ಸಹಾಯ ಮಾಡಿದ್ದರೆ ಅದನ್ನು ಸ್ಪಷ್ಟವಾಗಿ 'ಭ್ರಷ್ಟಾಚಾರ' ಎಂದು ಕರೆಯಲಾಗುತ್ತಿತ್ತು.

ಆದರೀಗ ಪರಿಸ್ಥಿತಿಯೇ ಬದಲಾಗಿದೆ. ಉದಾರೀಕರಣ ಮತ್ತು ಖಾಸಗೀಕರಣ ಎಂಬ ಆರ್ಥಿಕ ನೀತಿ ಜಾರಿಗೆ ಬಂದನಂತರ ಸರ್ಕಾರ ಮಾಡಬೇಕಾದ ಕೆಲಸಗಳನ್ನೆಲ್ಲಾ ಶಾಸನಬದ್ಧವಾಗಿ ಲಾಭಕೋರ ಖಾಸಗೀ ಕಂಪನಿಗಳಿಗೆ ವಹಿಸಲಾಗುತ್ತಿದೆ. ಅಂದರೆ Public-Private Participation (PPP- ಸಾರ್ವಜನಿಕ-ಖಾಸಗಿ ಸಹಭಾಗಿತ್ವ) ಎಂಬ ನೀತಿ ಜಾರಿಗೆ ಬಂದಿದ್ದು ಕೋಟ್ಯಾಂತರ ರೂಪಾಯಿಗಳ ಸಾರ್ವಜನಿಕ ಸಂಪನ್ಮೂಲಗಳನ್ನು ಕಾನೂನುಬದ್ಧವಾಗಿ ಖಾಸಗಿ ಕಂಪನಿಗಳ ಪಾಲು ಮಾಡಲಾಗುತ್ತಿದೆ. ಆ ಕಾರಣಕ್ಕಾಗಿ ಭ್ರಷ್ಟಾಚಾರದ ಗಾತ್ರವೂ 1991ರ ನಂತರ ದೊಡ್ಡದಾಗುತ್ತಾ ಹೋಗುತ್ತಿವೆ.

ಸುಮ್ಮನೆ, ಭಾರತ ಕಂಡಿರುವ ಹಲವಾರು ಭ್ರಷ್ಟಾಚಾರ ಪ್ರಕರಣಗಳನ್ನು ಗಮನಿಸಿ. 1991ರವರೆಗೆ ನಡೆದ ಭ್ರಷ್ಟಾಚಾರದ ಹಗರಣಗಳು ಹಲವು ಕೋಟಿ ರೂಪಾಯಿಗಳ ಗಡಿಯನ್ನೂ ದಾಟಿರಲಿಲ್ಲ. ಉದಾಹರಣೆಗೆ ಆಗ ಭಾರತ ಕಂಡಿದ್ದ ಅತಿ ದೊಡ್ಡ ಹಗರಣ ಎಂದೇ ಭಾವಿಸಲಾಗಿದ್ದ ಬೊಫೋರ್ಸ್ ಹಗರಣವೇ 40 ಕೋಟಿ ರೂಪಾಯಿಗಳನ್ನೂ ದಾಟಿರಲಿಲ್ಲ. ಆದರೆ 1991ರ ನಂತರ ನಡೆದಿರುವ ಹಗರಣಗಳು ದುಪ್ಪಟ್ಟುಗೊಳ್ಳುತ್ತಲೇ ಇವೆ.

* 1992ರ ಹರ್ಷದ್ ಮೆಹ್ತಾ ಹಗರಣ 5000 ಕೋಟಿ
* 2010ರ ಟೆಲಿಕಾಂ ಹಗರಣ 10-12,000 ಕೋಟಿ
* 2010ರ ಕಾಮನ್‌ವೆಲ್ತ್ ಹಗರಣ 60,000 ಕೋಟಿ
* 2010ರ 2 ಜಿ ಸ್ಪೆಕ್ಟ್ರಂ ಹಗರಣ 2.5 ಲಕ್ಷ ಕೋಟಿ

ಇದರರ್ಥ Public-Private Participation



ಹರ್ಷದ್ ಮೆಹತಾ, ಕಲ್ಮಾಡಿ, ರಾಜಾ

(PPP- ಸಾರ್ವಜನಿಕ-ಖಾಸಗಿ ಸಹಭಾಗಿತ್ವ) ಎಂಬ ನೀತಿಯೇ ಇವತ್ತು ಭ್ರಷ್ಟಾಚಾರದ ಗಂಗೋತ್ರಿಯಾಗಿದೇ ಎಂದು.

ಆದರೆ ಈ PPP ಎಂಬ ಆಡಳಿತ ತಂತ್ರವೇ ಅಭಿವೃದ್ಧಿಯ ಮೂಲಮಂತ್ರ ಎಂದು ಎಲ್ಲಾ ರಾಜಕೀಯ ಪಕ್ಷಗಳು, ಎಲ್ಲ ಸರ್ಕಾರಗಳು, ಇಂದು ಅಣ್ಣಾ ಹಜಾರೆಯವರ ಜೊತೆಯಲ್ಲಿರುವ ಕಾರ್ಪೊರೇಟ್ ಉದ್ಯಮಪತಿಗಳು, ಎನ್‌ಜಿಓಗಳು ಮತ್ತು ಮೇಲ್‌ಮಧ್ಯಮ ವರ್ಗದವರು ಪ್ರತಿಪಾದಿಸುತ್ತಾರೆ!

ವಿಚಿತ್ರವೆಂದರೆ ಇವರೆಲ್ಲರೂ ಈ ಅಭಿವೃದ್ಧಿ ಮಾದರಿಯ ಫಲಾನುಭವಿಗಳೇ!

ಇನ್ನು 12ನೇ ಪಂಚವಾರ್ಷಿಕ ಯೋಜನೆಯ ಶೇ.51ಕ್ಕಿಂತ ಹೆಚ್ಚಿನ 'ಅಭಿವೃದ್ಧಿ ಯೋಜನೆ'ಗಳನ್ನು ಖಾಸಗಿ ಕ್ಷೇತ್ರಕ್ಕೆ ವಹಿಸಲಾಗಿದೆ. ಅರ್ಥಾತ್ ಈ ದೇಶದ ಜನ ಅಭಿವೃದ್ಧಿಗೆ ದಕ್ಕಬೇಕಿದ್ದ ಸಂಪನ್ಮೂಲಗಳು ಪ್ರತ್ಯಕ್ಷವಾಗಿ ಮತ್ತು ಶಾಸನಬದ್ಧವಾಗಿ ಕಾರ್ಪೊರೇಟ್ ಉದ್ಯಮಪತಿಗಳ ತಿಜೋರಿಯನ್ನು ಸೇರುತ್ತಿದೆ. ಹೀಗಾಗಿ ಇಂದು ಈ ದೇಶದ ಬಡವರು ಬಡವರಾಗುತ್ತಾ, ದೊಡ್ಡ ಶ್ರೀಮಂತರು ಇನ್ನು ದೊಡ್ಡ ಬಿಲಿಯಾಧೀಶ್ವರರಾಗುತ್ತಿದ್ದಾರೆ. ಇದೆಲ್ಲ 'ದೇಶದ ಅಭಿವೃದ್ಧಿ' ಹೆಸರಲ್ಲಿ ನಡೆಯುತ್ತಿದೆ.

ಆದರೆ ಅಣ್ಣಾ ಹಜಾರೆಯವರ ಜನಲೋಕಪಾಲ್ ಮಸೂದೆಯಾಗಲೀ ಅಥವಾ ಇಂದು ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವಿರೋಧಿ ಅಭಿಯಾನಗಳಾಗಲಿ ಈ ಭ್ರಷ್ಟಾಚಾರದ ಬಗ್ಗೆ ಕಿಮ್ಮನ್ನುತ್ತಿಲ್ಲ.

...ಂದೋಲನವನ್ನು ಹೈಜಾಕ್ ಮಾಡಿದ ಚಿಡ್ಡಿಗಳು

ಅಣ್ಣಾ ಹಜಾರೆ ನೇತೃತ್ವದಲ್ಲಿ ನಡೆದ ಭ್ರಷ್ಟಾಚಾರ ...ರೋಧೀ ಆಂದೋಲನವನ್ನು ಸಂಘಪರಿವಾರ ಹೈಜಾಕ್ ...ಿದಿದ್ದು ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುತ್ತಿತ್ತು. ...ಸಂಘಪರಿವಾರ ತನಗೆ ಅಂಟಿರುವ ...ೀಮುವಾದಿ ಹಣೆಪಟ್ಟಿಯನ್ನು ಜನರ ...ನಸ್ಸಿನಿಂದ ಮರೆಮಾಚಲು ಇತ್ತೀಚೆಗೆ ...ಹಳಷ್ಟು ಪ್ರಯತ್ನಗಳನ್ನು ಮಾಡುತ್ತಿತ್ತು. ...ನಿಟ್ಟಿನಲ್ಲಿಯೇ ಬಿಜೆಪಿಯ ಇತ್ತೀಚಿನ ...ಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕಾಂಗ್ರೆಸ್ ...ರ್ಕಾರದ ಭ್ರಷ್ಟಾಚಾರದ ವಿರುದ್ಧ ದೊಡ್ಡ ...ಟ್ಟದಲ್ಲಿ ಪ್ರಚಾರಾಂದೋಲನವನ್ನು ...ರಂಭಿಸಬೇಕೆಂದು ನಿರ್ಣಯ ಮಾಡಲಾ...ತ್ತು. ಹಾಗೆಯೇ ಬೆಂಗಳೂರಿನಲ್ಲಿ ನಡೆದ ...ಖಿಲ ಭಾರತ ವಿದ್ಯಾರ್ಥಿ ಪರಿಷತ್ ಎಂಬ ...ವಿ ಚಿಡ್ಡಿಗಳ ರಾಷ್ಟ್ರೀಯ ಕಾರ್ಯಕಾರಿಣಿ...ಲ್ಲೂ ಮತ್ತು ಪುತ್ತೂರಿನಲ್ಲಿ ನಡೆದ ದೊಡ್ಡ ಚಿಡ್ಡಿಗಳ ...ರೆಸ್ಸೆಸ್ಸಿನ ಕಾರ್ಯಕಾರಿಣಿಯಲ್ಲೂ ಇಂತಹದ್ದೇ ನಿರ್ಣಯ...ನ್ನು ತೆಗೆದುಕೊಳ್ಳಲಾಗಿತ್ತು.



ಅದಕ್ಕೆ ಸರಿಯಾಗಿ ಹಜಾರೆಯವರು ಲೋಕ್‌ಪಾಲ್ ಮಸೂದೆಯ ಬಗ್ಗೆ ಪ್ರಾರಂಭಿಸಿದ ಹೋರಾಟವು ಚಿಡ್ಡಿಗಳಿಗೆ ಒಂದು ದೊಡ್ಡ ಅವಕಾಶವನ್ನು ಕಲ್ಪಿಸಿತು. ಚಿಡ್ಡಿಗಳು ಹಲವಾರು ವೇಶಗಳಲ್ಲಿ ಈ ಆಂದೋಲನದೊಳಗೆ ನುಸುಳಿದರು. ತಮಗೆ ಅಂಟಿರುವ ಕಳಂಕವನ್ನು ಮುಚ್ಚಿಹಾಕಲು ಚಿಡ್ಡಿಗಳು ಹೀಗೆ ದೊಡ್ಡ ಸಂಗ್ರಾಮಗಳನ್ನು ಬಳಸಿಕೊಂಡಿರುವುದು ಇದೇ ಮೊದಲನೆ ಬಾರಿ ಅಲ್ಲ.

1948ರಲ್ಲಿ ಆರೆಸ್ಸೆಸ್ ಸಹಚರ ನಾಥೂರಾವ್ ಗೋಡ್ಸೆ ಮಹಾತ್ಮ ಗಾಂಧಿಯವರನ್ನು ಕೊಲೆ ಮಾಡಿದ ನಂತರ ನಿಷೇಧಕ್ಕೊಳಪಟ್ಟಿದ್ದ ಆರೆಸ್ಸೆಸ್ ಪ್ರಧಾನ ಧಾರೆ ರಾಜಕಾರಣದ ಅಂಚಿಗೆ ಸರಿದಿತ್ತು. ಅದು ಮತ್ತೆ ದೊಡ್ಡ ಮಟ್ಟದಲ್ಲಿ ರಾಜಕಾರಣವನ್ನು ಪ್ರವೇಶ ಮಾಡಿದ್ದು ಜಯಪ್ರಕಾಶ್ ನಾರಾಯಣರ ಕಾಂಗ್ರೆಸ್ ವಿರೋಧೀ ಭ್ರಷ್ಟಾಚಾರ ವಿರೋಧೀ ಹೋರಾಟದ ಮೂಲಕ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಂದೂ ಭಾಗವಹಿಸದಿದ್ದ ಚಿಡ್ಡಿಗಳು ತಾವು ಮಹಾನ್ ದೇಶ ಭಕ್ತರು, ದೇಶ ರಕ್ಷಕರು ಎಂದು ತೋರಿಸಲು ಆಗ ದೊಡ್ಡ ಸಂಖ್ಯೆಯಲ್ಲಿ 1975ರಲ್ಲಿ ಜೆಪಿಯವರ ಆಂದೋಲನವನ್ನು ಸೇರಿಕೊಂಡಿದ್ದರು. ಇದರ ವಿರುದ್ಧ ಹಲವರು ಪ್ರತಿಭಟಿಸಿದಾಗ ಜೆಪಿಯಂತಹ ಜೆಪಿಯವರೇ "ನೀವು ಆರೆಸ್ಸೆಸ್ಸನ್ನು ಫ್ಯಾಸಿಸ್ಟ್ ಎನ್ನುವುದಾದರೆ ನಾನೂ ಸಹ ಫ್ಯಾಸಿಸ್ಟೇ" ಎಂದು ಘೋಷಿಸುವಷ್ಟು ಅಜ್ಞಾನವನ್ನು ಮೆರೆದಿದ್ದರು. ಆ ಮೂಲಕ ಕೋಮುವಾದಿ, ನರಹಂತಕ, ದೇಶ ವಿಭಜಕ ಸಂಘಪರಿವಾರಿಗಳ ಕುತಂತ್ರಕ್ಕೆ ಜೆಪಿಯವರು 'ಭ್ರಷ್ಟಾಚಾರ ವಿರೋಧೀ ಮಖಮಲ್ ಮುಸುಕ'ನ್ನು ಹೊದಿಸಿಬಿಟ್ಟರು.

ಹಾಗೆ ಮತ್ತೊಮ್ಮೆ ಪ್ರಧಾನ ಧಾರೆ ರಾಜಕಾರಣವನ್ನು ಪ್ರವೇಶಿಸಿದ ಚಿಡ್ಡಿಗಳು ಆಗಿನ ಜನಸಂಘ ಹಾಗೂ ಈಗಿನ ಭಾರತೀಯ ಜನತಾ ಪಕ್ಷದ ರೂಪದಲ್ಲಿ ಬೆಳೆದು ನಿಂತಿರುವ ಪರಿ ನಮ್ಮ ಮುಂದಿದೆ. ವಾಸ್ತವವಾಗಿ ಬಿಜೆಪಿ ಯಾವ ರೀತಿಯಲ್ಲೂ ಕಾಂಗ್ರೆಸ್‌ಗಿಂತ ಕಮ್ಮಿ ಭ್ರಷ್ಟವೇನಲ್ಲ ಎಂಬುದನ್ನೂ ಜನ ಕಂಡಿದ್ದಾರೆ.

ತಮ್ಮ ಆಂದೋಲನದಿಂದ ಚಿಡ್ಡಿಗಳು ಹೀಗೆ ಲಾಭ ಪಡೆದುಕೊಳ್ಳಬಾರದೆಂದು ಹಜಾರೆಯವರಿಗೆ ವಿಶೇಷ ವಿರೋಧವೇನೂ ಇರಲಿಲ್ಲ. ಇದಕ್ಕೆ ಕಾರಣ ಹಜಾರೆಯವರು ಬಿಜೆಪಿ ಪರ ಎಂಬುದಲ್ಲದೇ ಇರಬಹುದು. ಕಾಂಗ್ರೆಸ್ ಪಕ್ಷ ಅಸಹನೀಯವಾಗುವಷ್ಟು ಭ್ರಷ್ಟಾಚಾರ ನಡೆಸುತ್ತಿದೆ ಎಂಬುದೇ ಆಗಿರಬಹುದು. ಆದರೆ ಇದೆಲ್ಲದರ ಪ್ರತಿಫಲವಾಗಿ ಬಿಜೆಪಿ ತಾನೂ ಸಹ ಅಷ್ಟೇ ಭ್ರಷ್ಟ ಎಂಬುದನ್ನು ಯಶಸ್ವಿಯಾಗಿ ಮರೆಮಾಚಿದೆ!

ಚಿಡ್ಡಿಗಳ ಇಂತಹ ಕುತಂತ್ರವನ್ನು ಕಾಣಬಲ್ಲಷ್ಟು ರಾಜಕೀಯ ಗ್ರಹಿಕೆ ಈ ಚಳವಳಿಗೆ ಇರಲೇ ಇಲ್ಲ. ಅಲ್ಲದೆ, ಕಾಂಗ್ರೆಸ್‌ನ ಭ್ರಷ್ಟಾಚಾರದಿಂದ ಬೇಸತ್ತ ಜನತೆಗೆ ಒಂದು ವೇದಿಕೆಯೂ ಬೇಕಿತ್ತು. ಹೀಗೆ ಒಂದೇ ಕಲ್ಲಿನಲ್ಲಿ ಹಲವು ಹಕ್ಕಿಗಳನ್ನು ಹೊಡೆದ ಬಿಜೆಪಿ ಮತ್ತು ಸಂಘಪರಿವಾರ ಭ್ರಷ್ಟಾಚಾರದ ವ್ಯಾಖ್ಯಾನವು ಸಂಪೂರ್ಣವಾಗಿ ಕೇವಲ ಕಾಂಗ್ರೆಸ್ ವಿರೋಧಿಯಾಗುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಭ್ರಷ್ಟಾಚಾರ ವಿರೋಧಿ ಹೋರಾಟದ ಪ್ರಮುಖ ದಾಳಿ ಕಾಂಗ್ರೆಸ್ ಆಗಲೇಬೇಕು. ಆದರೆ ಬಿಜೆಪಿ ಅದಕ್ಕೆ ಕಮ್ಮಿಯೇನಲ್ಲ.

'ಇತಿಹಾಸ ಮತ್ತೊಮ್ಮೆ ಮರುಕಳಿಸಿದಾಗ ಅದು ಮೋಸದಿಂದ ಕೂಡಿರುತ್ತದೆ' ಎಂಬ ಹೇಳಿಕೆ ಇದೆ. ಅದನ್ನು ಬಿಜೆಪಿಯ ವಿಷಯದಲ್ಲಿ 'ಮೊದಲ ಬಾರಿ ಮೋಸ, ಎರಡನೇ ಬಾರಿ ಮರುಕಳಿಸಿದರೆ ದ್ರೋಹ' ಎಂದು ಬದಲಿಸಿಕೊಳ್ಳಬಹುದೇನೋ?

...ಂದಿದೆ. ಉದಾಹರಣೆಗೆ, ಈ ಹೋರಾಟದ ಫಲವಾಗಿ ...ಲೋಕ್‌ಪಾಲ್ ಮಸೂದೆಯ ಕರಡನ್ನು ರಚಿಸಲು ...ಿಪಿಸಲಾದ ಸಮಿತಿಯನ್ನೇ ತೆಗೆದುಕೊಳ್ಳಿ. ಅದರಲ್ಲಿ ಶಾಂತಿ ...ಷಣ್ ಮತ್ತು ಪ್ರಶಾಂತ್ ಭೂಷಣ್‌ರಂತಹ ಜನಪರ ...ೀಲರು ಇರುವುದು ನಿಜವಾದರೂ ಇದರ ಬಗ್ಗೆ ಸರ್ಕಾರ ...ರಡಿಸಿದ ಗೆಜೆಟ್ಟಿನಲ್ಲಿ "ಅಣ್ಣಾ ಹಜಾರೆಯವರು" ...ಚಿಸುವ ಐದು ಜನರನ್ನು ಒಳಗೊಂಡ ಸಮಿತಿ ಎಂದೇ ...ಲೇಖಿಸಲಾಗಿದೆ.

ಇದು ಮತ್ತೆ ವ್ಯಕ್ತಿಗಳನ್ನು – ಅದರಲ್ಲೂ ಜನತೆಗೆ ...ವಾಗಿ ಜವಾಬುದಾರರಾಗಿರುವಂತಹ ವ್ಯವಸ್ಥೆಯೊಳಗೆ ...ದ ವ್ಯಕ್ತಿಗಳನ್ನು – ಈ ದೇಶದ ಒಟ್ಟು ಜನಾಭಿಪ್ರಾಯದ ...ದ್ರರೂಪವಾಗಿರಬೇಕಾದ ಸರ್ಕಾರಕ್ಕಿಂತಲೂ ದೊಡ್ಡ ...ಥದಲ್ಲಿರಿಸುತ್ತದೆ. ಇದು ತತ್ಕಾಲದಲ್ಲಿ ಆಳುವ ಕಾಂಗ್ರೆಸ್, ...ರೋಧಿ ಬಿಜೆಪಿಗಳಿಗೆ ಒಂದಷ್ಟು ಲಾಭ ...ಮಾಡಿಕೊಡಬಹುದಾದರೂ ದೀರ್ಘಕಾಲದಲ್ಲಿ ಇದು ...ಪ್ರಜಾತಂತ್ರಕ್ಕೆ ಅತ್ಯಂತ ಅಪಾಯಕಾರಿಯಾಗುತ್ತದೆ. ಅಂಬೇಡ್ಕರ್ ...ರು ಎಚ್ಚರಿಸಿದ್ದೂ ಇಂತಹದ್ದರ ಬಗ್ಗೆಯೇ. "ಯಾರೊಬ್ಬ ...ಕ್ತಿಯನ್ನು ಮಹಾತ್ಮ ಮಾಡುವುದು ಜನತೆಯನ್ನು ...ದಾಸರನ್ನಾಗಿಸುವ ಮತ್ತೊಂದು ರೂಪ" ಎಂದಿದ್ದರು ...ಅಂಬೇಡ್ಕರ್.

ಬುದ್ಧಿಜೀವಿಗಳಿಗೇಕೆ ಕಿರೀಟ?

...ಲೋಕ್‌ಪಾಲ್ ಸದಸ್ಯರ ಆಯ್ಕೆಯ ಕುರಿತು ಹಜಾರೆ ...ರ ತಂಡ ಮಾಡಿರುವ ಪ್ರಸ್ತಾಪಗಳೂ ಅಪಾಯಕಾರಿ...ಯಾಗಿವೆ. ಅವರ ಪ್ರಕಾರ ಈ ದೇಶದ ಬುದ್ಧಿಜೀವಿಗಳು, ...ಜ್ಞಾನಪೀಠ ಪ್ರಶಸ್ತಿ ವಿಜೇತರು, ಭಾರತೀಯ ಸಂಜಾತ ...ನೊಬೆಲ್ ಪ್ರಶಸ್ತಿ ವಿಜೇತರೂ ಎಲ್ಲರೂ ಸೇರಿಕೊಂಡು ...ಲೋಕಪಾಲ್ ಸದಸ್ಯರನ್ನು ಆಯ್ಕೆ ಮಾಡಬಹುದು.

ಆದರೆ ನೊಬೆಲ್ ಪ್ರಶಸ್ತಿ ವಿಜೇತರು, ಜ್ಞಾನಪೀಠಿಗಳು ...ಗೂ ಯಾವುದೋ ನಿರ್ದಿಷ್ಟ ಕ್ಷೇತ್ರದಲ್ಲಿ ನಿಪುಣರಾದ ...ಬುದ್ಧಿಜೀವಿಗಳು ಜನರ ಬದುಕನ್ನು ಪ್ರಭಾವಿಸುವ ...ಭ್ರಷ್ಟಾಚಾರದ ನಿಗ್ರಹದ ಬಗ್ಗೆ ಪರಿಣಿತ ಸಲಹೆ ...ಡುತ್ತಾರೆಂಬ ತಿಳಿವಳಿಕೆಯೇ ಹಾಸ್ಯಾಸ್ಪದವಾದದ್ದು. ...ಗೆಯೇ ಅಪಾಯಕಾರಿಯಾದದ್ದು ಕೂಡ. ಈ ಪ್ರಸ್ತಾಪದ ...ದಿರುವ ಮನೋಭಾವ ಅತ್ಯಂತ ಆಕ್ಷೇಪಣೀಯವಾದದ್ದು. ...ಕೆಂದರೆ ಇದು ಒಂದು ರೀತಿಯಲ್ಲಿ ಸಾಮಾನ್ಯ ಜನರ ...ವೇಕವನ್ನೂ, ಜನತಂತ್ರವನ್ನು ಮತ್ತು ದೇಶದ ...ಆಗುಹೋಗುಗಳಲ್ಲಿ ಅವಿದ್ಯಾವಂತರ ಪಾತ್ರವನ್ನು ...ಅವಮಾನದಿಂದಲೇ ನೋಡುತ್ತದೆ. ಮಾತ್ರವಲ್ಲ ಇದು ...ದಲ್ಲಿ ಪ್ರಜಾತಂತ್ರ ವಿರೋಧಿ ಶೋಷಕ ವರ್ಗಗಳ ...ವಳಿಕೆಯೇ ಆಗಿದೆ.

...ೋದಿಯ ಮೋಸ ಕಾಣಿಸಲಿಲ್ಲವೇಕೆ?

...ಇನ್ನು ಈ ನೊಬೆಲ್ ಮತ್ತು ಜ್ಞಾನಪೀಠ ವಿಜೇತರ ...ಜಕೀಯ ತಿಳಿವಳಿಕೆ ಎಷ್ಟರಮಟ್ಟಿಗೆ ಜನಪರವಾಗಿರುತ್ತದೆ ...ಬುದು ಇನ್ನೊಂದು ವಿಷಯ. ಸಾಕ್ಷಾತ್ ಅಣ್ಣಾ ...ಜಾರೆಯವರೇ ಈ ಹೋರಾಟದಲ್ಲಿ ಜಯಗಳಿಸಿದ ನಂತರ ...ದೇಶದ ಮುಖ್ಯಮಂತ್ರಿಗಳು ನರಹಂತಕ ನರೇಂದ್ರ ...ಮೋದಿಯ ಗುಜರಾತಿನಿಂದ ಮತ್ತು ಬಿಹಾರದ ...ನಿತೀಶ್‌ಕುಮಾರಿಂದ ಪಾಠ ಕಲಿಯಬೇಕೆಂದು ಕರೆ ...ಕೊಟ್ಟಿದ್ದರು.

2002ರಲ್ಲಿ ಮೋದಿ ನಡೆಸಿದ ನರಮೇಧ ಬದಿಗಿರಲಿ, ...ೋದಿ ಅಧಿಕಾರಕ್ಕೆ ಬಂದ ಮೇಲೆ ಗುಜರಾತಿನಲ್ಲಿ ...ಲೋಕಾಯುಕ್ತರ ನೇಮಕವನ್ನೇ ಮಾಡಿಲ್ಲ ಎಂಬುದೂ ...ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿರುವ ಹಜಾರೆಯವರ ...ಕಣ್ಣಿಗೆ ಬಿದ್ದಿಲ್ಲ. ಹಾಗೆಯೇ ಮೋದಿ ನೇತೃತ್ವದಲ್ಲಿ ...ಮೀನುಗಾರಿಕೆಯಲ್ಲಿ ಸುಜಲಾಂ ಯೋಜನೆಯಲ್ಲಿ 1700 ಕೋಟಿ, ...ಸಾಗರ್‌ಖೇಡ್ ಯೋಜನೆಯಲ್ಲಿ 109 ಕೋಟಿ, ...ಮೀನುಗಾರಿಕಾ ಇಲಾಖೆಯಲ್ಲಿ 600 ಕೋಟಿ ಹಣ ...ಲೂಟಿಯಾಗಿರುವುದೂ ಹಜಾರೆ ಅವರ ಕಣ್ಣಿಗೆ ಬಿದ್ದಿಲ್ಲ.

ಜೊತೆಗೆ ಗುಜರಾತಿನ ಗ್ರಾಮಾಂತರ ಪ್ರದೇಶದ ದಲಿತ ಹಾಗೂ ಭೂಹೀನ ಕಾರ್ಮಿಕರಿಗೆ ಸೇರಬೇಕಿದ್ದ ಲಕ್ಷಾಂತರ ಎಕರೆ ಗೋಮಾಳ ಭೂಮಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಬಿಜೆಪಿ ಪರವಾದ ಉದ್ಯಮಿಗಳ ಸಣ್ಣ ಗುಂಪಿಗೆ ಮೋದಿ ಪರಭಾರೆ ಮಾಡಿರುವುದು, ಅದರ ವಿರುದ್ಧ ನಡೆಯುತ್ತಿರುವ ಹೋರಾಟಗಳನ್ನು ಮೋದಿ ಸರ್ಕಾರ ಕ್ರೂರವಾಗಿ ದಮನಿಸಿರುವುದೂ ಹಜಾರೆಯವರ ಕಣ್ಣಿಗೆ ಬಿದ್ದಿಲ್ಲ.

ಅಂದರೆ, ಹಜಾರೆಯವರ ಭ್ರಷ್ಟಾಚಾರದ ಪರಿಕಲ್ಪನೆಯಲ್ಲಿ ಸಾಂವಿಧಾನಿಕ ಮೌಲ್ಯಗಳ ಹತ್ಯೆಯ ಪ್ರಶ್ನೆಯೇನು? ಜನರ ಸಂಪನ್ಮೂಲಗಳು ಬಂಡವಾಳಶಾಹಿಗಳ ಅಭಿವೃದ್ಧಿಗೆ ಹರಿದುಹೋಗುವುದು ಭ್ರಷ್ಟಾಚಾರವಲ್ಲವೇ? ರಾಜ್ ಠಾಕ್ರೆಯ ನೇತೃತ್ವದಲ್ಲಿ ಮರಾಠಿಯರಲ್ಲದವರು ಮಹಾರಾಷ್ಟ್ರದಲ್ಲಿ ಎರಡನೇ ಆದ್ಯತೆಗೆ ತೃಪ್ತಿ ಪಟ್ಟುಕೊಳ್ಳಬೇಕೆಂಬ ಚಳವಳಿಯನ್ನು ಹಜಾರೆಯವರು ಬೆಂಬಲಿಸಿದ್ದೇಕೆ? ಇದೆಲ್ಲ ಭ್ರಷ್ಟಾಚಾರದ ಬಗ್ಗೆ ಮತ್ತು ಸಾಂವಿಧಾನಿಕ ಮೌಲ್ಯಗಳಿಗೇ ಕುತ್ತು ತರುತ್ತಿರುವ ಇತರ ರಾಜಕೀಯ ವಿಷಯಗಳ ಬಗ್ಗೆ ಅಣ್ಣಾ ಹಜಾರೆಯವರ ನೆಲೆ ಮತ್ತು ನಿಲುವುಗಳು. ಇನ್ನು ನೊಬೆಲ್ ವಿಜೇತ ಭಾರತೀಯ ಸಂಜಾತ ನೈಪಾಲ್ ಅಂತೂ ಅತ್ಯಂತ ಪ್ರತಿಗಾಮಿ ತಿಳಿವಳಿಕೆಯುಳ್ಳವರು. ವಿಖ್ಯಾತ ವಿಜ್ಞಾನಿಗಳು ಮತ್ತು ಸಾಹಿತಿಗಳು ರಾಜಕೀಯದ ಬಗ್ಗೆ, ಆರ್ಥಿಕತೆಯ ಬಗ್ಗೆ ಮೇಲ್‌ತೋರಿಕೆಯ ತಿಳಿವಳಿಕೆಯನ್ನೂ ಹೊಂದಿರುವುದಿಲ್ಲ. ಅದಕ್ಕೆ ಸಾಕಷ್ಟು ಉದಾಹರಣೆಗಳು ಕರ್ನಾಟಕದಲ್ಲೇ ಇವೆ!

ಪ್ರಾಮಾಣಿಕ ಕುದುರೆ ಮೇಲೆ ಭ್ರಷ್ಟರ ಸವಾರಿ

ಹಜಾರೆಯವರ ನೈತಿಕತೆಯನ್ನಾಗಲಿ, ಬದ್ಧತೆಯನ್ನಾಗಲಿ ಅನುಮಾನಿಸುವ ಪ್ರಯತ್ನವಲ್ಲ. ಬದಲಾಗಿ ನೈತಿಕತೆಯ ಜೊತೆಜೊತೆಗೆ ಜನಪರ ರಾಜಕೀಯ ಮತ್ತು ಆರ್ಥಿಕ ಚಿಂತನೆಗಳಿಲ್ಲದಿದ್ದರೆ ಹೇಗೆ ಅತ್ಯಂತ ಪ್ರಾಮಾಣಿಕರನ್ನೂ ಮೋದಿ, ರಾಜೀವ್ ಚಂದ್ರಶೇಖರ್, ಬಜಾಜ್ ತರಹದವರು ಸವಾರಿ ಮಾಡುವ ಕುದುರೆಗಳನ್ನಾಗಿಸಿಬಿಡುತ್ತಾರೆ ಎಂಬುದಕ್ಕೆ ಒಂದು ಉದಾಹರಣೆಯಷ್ಟೆ. ಇನ್ನು ಬಿಜೆಪಿಯಂತೂ ಅಣ್ಣಾ ಹಜಾರೆಯವರ ಆಂದೋಲನದಿಂದ ಅತಿ ಹೆಚ್ಚು ರಾಜಕೀಯ ಲಾಭ ಪಡೆದಿದೆ. (ಬಾಕ್ಸ್ ನೋಡಿ) 1999ರಲ್ಲಿ ಕೇಂದ್ರದಲ್ಲಿ ಅಧಿಕಾರ ಪಡೆದ ಬಿಜೆಪಿ ತಾನೂ ಸಹ ಕಾಂಗ್ರೆಸ್‌ನಷ್ಟೇ ಭ್ರಷ್ಟ ಮಾತ್ರವಲ್ಲ ಜನವಿರೋಧಿ ಸಹ ಎಂದು ಸಾಬೀತು ಮಾಡಿದ ನಂತರ ಕಳೆದ ಎರಡು ಚುನಾವಣೆಗಳಿಂದ ಅಧಿಕಾರದಿಂದ ದೂರ ಉಳಿದಿದೆ. ಹೀಗಾಗಿ ಮತ್ತೆ ತನ್ನ ರಾಜಕೀಯ ಮೆರುಗನ್ನು ಪಡೆದುಕೊಳ್ಳಲು ಈಗ ಕಾಂಗ್ರೆಸ್‌ನ ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಸೇರಿಕೊಂಡಿದೆ. ತಮಗೆ ಅರಿವಿಲ್ಲದಂತೆ ಬಿಜೆಪಿಗಳ ಕುತಂತ್ರಕ್ಕೆ ಹಜಾರೆಯವರು ಕುದುರೆಯಾಗಿ ಪರಿವರ್ತಿತರಾಗಿದ್ದಾರೆ.

ಔಷಧಿಯೇ ರೋಗಕ್ಕಿಂತ ಅಪಾಯಕಾರಿಯಾಗಿಬಿಡುವ ಸನ್ನಿವೇಶ ಇದೀಗ ಪ್ರಜಾತಂತ್ರದ್ದು. ಅಭಿವೃದ್ಧಿಯ ಹೆಸರಲ್ಲಿ ಈ ದೇಶದಲ್ಲಿ ಗಟ್ಟಿಗೊಳ್ಳುತ್ತಿರುವ ಪರಾವಲಂಬಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೇ ಭ್ರಷ್ಟಾಚಾರದ ಮೂಲ ಅಡಗಿದೆ. ಈ ಪಾಪದಲ್ಲಿ ಕಾಂಗ್ರೆಸ್, ಬಿಜೆಪಿ ಎಲ್ಲಾ ಪಕ್ಷಗಳಿಗೂ ಸರಿಸಮಾನ ಪಾಲಿದೆ. ಭ್ರಷ್ಟಾಚಾರ ವ್ಯವಸ್ಥಾಗತವಾಗಿರುವಾಗ ಅದನ್ನು ವೈಯಕ್ತಿಕ ನೆಲೆಯಲ್ಲಿ ಹುಡುಕುವುದು, ವ್ಯಕ್ತಿಗತ ನೆಲೆಯಲ್ಲಿ ಪರಿಹಾರ ಹುಡುಕುವುದು, ಭ್ರಷ್ಟಾಚಾರವನ್ನು ಹುಟ್ಟುಹಾಕುವ ಬುನಾದಿಯನ್ನು ಭದ್ರಪಡಿಸಿಕೊಂಡು ಅದರ ಅಭಿವ್ಯಕ್ತಿಯನ್ನು ಮಾತ್ರ ಕಠಿಣವಾಗಿ ದಂಡಿಸುವುದು, ಅದನ್ನೇ ಸಾಧನೆಯೆಂದು ಭ್ರಮಿಸುವುದು, ಎಲ್ಲವೂ ಪ್ರಜಾತಂತ್ರದ ಕ್ರೂರ ಪ್ರಹಸನದಂತೆ ಕಾಣುತ್ತದೆ.

ಭ್ರಷ್ಟಾಚಾರದ ಗಂಗೋತ್ರಿಯಾಗಿರುವ ನಮ್ಮ ವ್ಯವಸ್ಥೆಯನ್ನು ಜನರ ಪ್ರಜ್ಞಾಪೂರ್ವಕ ಭಾಗವಹಿಸುವಿಕೆ ಮತ್ತು ಸಮರಶೀಲ ಚಳವಳಿಯ ಮೂಲಕ ಬದಲಿಸಿದರೆ ಮಾತ್ರ ಭ್ರಷ್ಟಾಚಾರ ನಿಲ್ಲುತ್ತದೆ. ಈ ಅರಿವು ಜನರಲ್ಲಿ ಮೊದಲು ಮೂಡಬೇಕಿದೆ.

10 ವರ್ಷಗಳ ಸತ್ಯಾಗ್ರಹವೂ, ನಾಲ್ಕು ದಿನಗಳ ಪೊಳ್ಳು ಕ್ರಾಂತಿಯೂ

ಕಳೆದ ಒಂದು ವಾರದಿಂದ ಬಹಳಷ್ಟು ಭಾರತೀಯರು ತಾವೊಂದು ದೊಡ್ಡ ಕ್ರಾಂತಿಯ ಭಾಗವಾಗಿದ್ದೇವೆ ಎಂಬ ಭ್ರಮೆಯಲ್ಲಿದ್ದಾರೆ. ಆದರೆ ಪೊಳ್ಳು ಕ್ರಾಂತಿ ಹುಟ್ಟುಹಾಕಿರುವ ಈ ಪೊಳ್ಳು ಯಶಸ್ಸಿನ ಉನ್ಮಾದ ಒನ್‌ಡೇ ಕ್ರಿಕೆಟಿನ ಉನ್ಮಾದದಷ್ಟೇ ನಿರರ್ಥಕ ಮತ್ತು ಆತ್ಮಘಾತುಕ.

ಇದೇ ಭಾರತದಲ್ಲಿ ಇರೋಮ್ ಶರ್ಮಿಳಾ ಎಂಬ ಮಣಿಪುರದ ಧೀರೋದಾತ್ತ ಮಹಿಳೆ ತನ್ನ ಜನರ ಮೇಲೆ ಭಾರತದ ಸೈನಿಕರು ಯಾರೂ ಕಂಡು ಕೇಳಿರದಂತಹ ಹಿಂಸಾತ್ಮಕ ಅತ್ಯಾಚಾರ ನಡೆಸಲು ಅನುವು ಮಾಡಿಕೊಡುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆಯನ್ನು ರದ್ದುಗೊಳಿಸಬೇಕೆಂದು ಕಳೆದ 10 ವರ್ಷಗಳಿಂದ ಅತ್ಯಂತ ಅಹಿಂಸಾತ್ಮಕವಾದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಳೆ.



ಆದರೆ ಆಕೆಯ ಈ ಒಂದು ದಶಕದ ಉಪವಾಸ ಸತ್ಯಾಗ್ರಹಕ್ಕೆ ಸರ್ಕಾರವಾಗಲೀ, ನಾಗರಿಕ ಸಮಾಜವಾಗಲೀ ಸ್ಪಂದಿಸಿಲ್ಲ. ಈಗಲೂ ಆಕೆಯ ಹೋರಾಟ ಮುಂದುವರೆದೇ ಇದೆ. ಆದರೆ 10 ವರ್ಷವಿರಲಿ, 10 ದಿನಗಳ ಕಾಲವೂ ನಡೆಯದ ಭ್ರಷ್ಟಾಚಾರ ವಿರೋಧಿ ಉಪವಾಸ ಸತ್ಯಾಗ್ರಹಕ್ಕೆ ಈ ದೇಶದ ಮೇಲ್‌ಮಧ್ಯಮ ವರ್ಗ ಸ್ಪಂದಿಸಿತು, ತನ್ನ ಬೆಂಬಲವನ್ನು ನೀಡಿತು. ಅಷ್ಟು ಸಾಲದೆಂಬಂತೆ ಭ್ರಷ್ಟ ವ್ಯವಸ್ಥೆಯ ಭಾಗವಾಗಿರುವ ದೊಡ್ಡ ಉದ್ದಿಮೆಪತಿಗಳೂ ಸಹ ಈ ಸತ್ಯಾಗ್ರಹದೊಂದಿಗೆ ಕೈಜೋಡಿಸಿದರು. ಕೊನೆಗೆ ಕೇಂದ್ರ ಸರ್ಕಾರ ಕೂಡ 'ಹೋರಾಟಗಾರರ ಆಗ್ರಹಕ್ಕೆ ಮಣಿದುಬಿಟ್ಟಿತು.'

ಇತ್ತ ಹಜಾರೆ ಅವರು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದ ಕೂಡಲೇ ಜನ ವಿಜಯೋತ್ಸವವನ್ನು ಆಚರಿಸಲಾರಂಭಿಸಿದರು. ಅತ್ತ ದೂರದ ಮಣಿಪುರದಲ್ಲಿ ಇರೋಮ್ ಶರ್ಮಿಳಾ ಇವತ್ತಿಗೂ ತನ್ನ ಉಪವಾಸವನ್ನು ಮುಂದುವರೆಸಿದ್ದಾಳೆ. ಇದೆಂತಹ ವ್ಯಂಗ್ಯ? ಇದೆಂತಹ ದೇಶ?

ಶತ್ರುಗಳೇ ಹೀಗೆ ಈ ಹೋರಾಟದ ಭಾಗವಾದ್ದರಿಂದ ಇದೊಂದು ಈ ಹುಸಿ ಸಮರ ಎಂದೇ ಹೇಳಬೇಕು! ಹಾಗೆಯೇ ಜನರದ್ದೂ ಒಂದು ಹುಸಿ ವಿಜಯ!!

ಸದ್ದಾಂ ಮತ್ತು ಅಂಬಾನಿ ನಡುವೆ ಭ್ರಷ್ಟಾಚಾರದ ನಂಟು

ಈ ಹಿಂದೆ ದೊಡ್ಡ ಕಂಪನಿಗಳು ಯಾವುದೇ ವಹಿವಾಟು ನಡೆಸಿ ಲಾಭ ಪಡೆದಿದ್ದರೆ ಅದಕ್ಕೆ ಸೂಕ್ತವಾದ ತೆರಿಗೆಯನ್ನು ಸರ್ಕಾರಕ್ಕೆ ಕಟ್ಟಬೇಕಿತ್ತು. ಅಕಸ್ಮಾತ್ ತೆರಿಗೆ ಕಟ್ಟದಿದ್ದರೆ ಅದು ಅಪರಾಧವಾಗುತ್ತಿತ್ತು. ಅಷ್ಟೇ ಅಲ್ಲ ಕಂಪನಿಗಳು ತೆರಿಗೆ ಪಾವತಿ ಮಾಡದೆ ಅದರ ವಹಿವಾಟಿಗೆ ಅನುಕೂಲ ಮಾಡಿಕೊಟ್ಟ ಅಧಿಕಾರಿಯೂ ಭ್ರಷ್ಟಾಚಾರಿಯಾಗುತ್ತಿದ್ದ ಮತ್ತು ಆತನ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿತ್ತು.

ಆದರೆ ಬದಲಾಗಿರುವ ಆರ್ಥಿಕ ನೀತಿಗಳಡಿ ಇಂತಹ ಅಪರಾಧಗಳನ್ನು 'ಉತ್ತಮ ಅಭಿವೃದ್ಧಿ ಪರ ನೀತಿ'ಗಳೆಂದು ಶಾಸನಬದ್ಧಗೊಳಿಸಲಾಗಿದೆ.

ಉದಾಹರಣೆಗೆ ಕಳೆದ ಕೆಲವು ವರ್ಷಗಳ ಹಿಂದೆ ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನ್ ಬದುಕಿದ್ದಾಗ ಇರಾಕ್ ಮತ್ತು ಭಾರತದ ನಡುವೆ 'ಆಹಾರಕ್ಕಾಗಿ ತೈಲ ಯೋಜನೆ'ಯ ಹೆಸರಲ್ಲಿ ಇರಾಕ್‌ನಿಂದ ತೈಲ ಆಮದು ಮಾಡಿಕೊಂಡು ಅದಕ್ಕೆ ಬದಲಾಗಿ ಆಹಾರವನ್ನು ರಫ್ತು ಮಾಡುವ ಒಪ್ಪಂದವಾಗಿತ್ತು. ಈ ಯೋಜನೆ ಸರಿಯಾಗಿ ಜಾರಿ ಆಗಿದ್ದರೆ ಭಾರತ ಸರ್ಕಾರವೇ ತನ್ನ ಗೋದಾಮಿನಿಂದ ಇರಾಕಿಗೆ ಆಹಾರ ಸರಬರಾಜು ಮಾಡಿ ಅಲ್ಲಿಂದ ಅಗ್ಗದ ತೈಲವನ್ನು ಆಮದು ಮಾಡಿಕೊಂಡು ಇಲ್ಲಿನ ಜನಸಾಮಾನ್ಯರಿಗೆ ಆ ತೈಲವನ್ನು ಕಡಿಮೆ ಬೆಲೆಗೆ ಸರಬರಾಜು ಮಾಡಬಹುದಿತ್ತು.

ಆದರೆ ಆಹಾರವನ್ನು ಇರಾಕಿಗೆ ರಫ್ತು ಮಾಡುವ ಮತ್ತು ಅಲ್ಲಿಂದ ತೈಲವನ್ನು ಆಮದು ಮಾಡಿಕೊಳ್ಳುವ ಕಾಂಟ್ರಾಕ್ಟನ್ನು ಖಾಸಗಿಯವರಿಂದಲೇ ಮಾಡಿಸುವ ಯೋಜನೆಯನ್ನು ಸರ್ಕಾರ ರೂಪಿಸಿತು. ಆಗ ಇರಾಕಿ ಸರ್ಕಾರ ಮತ್ತು ಭಾರತೀಯ ಖಾಸಗಿ ಕಂಪನಿಗಳ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದು ಆಗಿನ ವಿದೇಶಾಂಗ ಮಂತ್ರಿ ನಟವರ್‌ಸಿಂಗ್ ಅವರ ಮಗ. ಹಾಗೆ ಕೆಲಸ ಮಾಡಿದ್ದಕ್ಕೆ ಆತನಿಗೆ ನೂರು ಕೋಟಿಗೂ ಹೆಚ್ಚು ದುಡ್ಡು ಬಂದಿತ್ತು.

ಈ ಯೋಜನೆಯಲ್ಲಿ ಆತನ ಪಾತ್ರ ಬಯಲುಗೊಂಡು ಅದೇ ದೊಡ್ಡ 'ಹಗರಣ'ವಾಗಿ ಅಂತಿಮವಾಗಿ ನಟವರ್‌ಸಿಂಗ್ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೂಡಾ ಕೊಡಬೇಕಾಯಿತು. ಆದರೆ ಸದ್ದಾಂ ಜೊತೆ ಒಪ್ಪಂದ ಮಾಡಿಕೊಂಡಿದ್ದರಿಂದ ಎರಡೂ ಕಡೆ 20,000 ಕೋಟಿ ರೂ.ಗಳಿಗೂ ಹೆಚ್ಚಿನ ಲಾಭ ಮಾಡಿಕೊಂಡಿದ್ದು ಅಂಬಾನಿಗಳು! ಅಂದರೆ ಭಾರತ ಸರ್ಕಾರಕ್ಕೆ ಮತ್ತು ಜನರಿಗೆ 20,000 ಕೋಟಿ ನಷ್ಟವಾಗಿತ್ತು.

ಆದರೆ ಇದನ್ನು ಭ್ರಷ್ಟಾಚಾರ ಎಂದು ಯಾರೂ ಬಣ್ಣಿಸಲಿಲ್ಲ. ಯಾಕೆಂದರೆ ಇದನ್ನು ನಮ್ಮ ಸರ್ಕಾರ ರೂಪಿಸಿದ ನೀತಿಯೇ ಕಾನೂನುಬದ್ಧವಾಗಿಸಿದೆ!

ಹೀಗಾಗಿ ಲೋಕಪಾಲ್ ಮಸೂದೆ ಹೆಚ್ಚೆಂದರೆ ಮಂತ್ರಿಗಳು ಮತ್ತು ಅಧಿಕಾರಿಗಳು ಮಾಡುವ ಭ್ರಷ್ಟಾಚಾರದ ಬಗ್ಗೆ ಕ್ರಮ ತೆಗೆದುಕೊಳ್ಳಬಹುದೇ ವಿನಃ ಖಾಸಗೀಕರಣದ ಮತ್ತು ಉದಾರೀಕರಣದ ಹೆಸರಿನಲ್ಲಿ ವ್ಯವಸ್ಥೆಯ ಭಾಗವೇ ಆಗಿಬಿಟ್ಟಿರುವ ಖಾಸಗೀ ಕಂಪನಿಗಳ ಮೋಸವನ್ನು ಭ್ರಷ್ಟಾಚಾರವೆಂದು ಪರಿಗಣಿಸುವುದಿಲ್ಲ. [illegible] ... ಅದರಿಂದ ಸಾಧ್ಯವೂ ಇಲ್ಲ.




ಕೆ.ಬಿ.ಜೆ.ಎನ್.ಎಲ್. ಕರ್ಮಕಾಂಡ ಕೇಳುವವರಿಲ್ಲವೆ

ಉತ್ತರ ಕರ್ನಾಟಕದ ಪ್ರಮುಖ ಅಣೆಕಟ್ಟುಗಳಾದ ಆಲಮಟ್ಟಿ, ನಾರಾಯಣಪುರಗಳ ನೀರನ್ನು ರೈತರ ಹೊಲಗಳಿಗೆ ಸರಬರಾಜು ಹಾಗೂ ನಿರ್ವಹಣೆ ಮಾಡುವ ಪ್ರಮುಖ ಕಚೇರಿ ಭೀಮರಾಯನಗುಡಿಯಲ್ಲಿ ಇದೆ. ಈ ಕಚೇರಿಯಲ್ಲಿ ನಡೆಯುವ ಬೋಗಸ್ ಬಿಲ್‌ಗಳ ವ್ಯವಹಾರ ಎದೆ ನಡುಗಿಸುವಂಥದ್ದು. ಈ ಭಾಗದ ರೈತರು ನೀರು ಮಾತ್ರ ನೋಡಿದ್ದಾರೆ; ಆದರೆ ಇವತ್ತಿಗೂ ಅವರ ಹೊಲಗಳಿಗೆ ಸಮರ್ಪಕವಾಗಿ ನೀರು ಹರಿದು ಹೋಗಿಲ್ಲ.

'ಈಗಾಗಲೇ ಉತ್ತರ ಕರ್ನಾಟಕದ ಹಳ್ಳಿಗಳ ಬಹುತೇಕ ರೈತರಿಗೆ ನೀರು ದೊರಕಿದೆ. ಅಲ್ಲದೆ ಅವರೆಲ್ಲ ಒಳ್ಳೊಳ್ಳೆಯ ಬೆಳೆ ಬೆಳೆದು ಸಮೃದ್ಧಿಯಿಂದ ಬದುಕುತ್ತಿದ್ದಾರೆ' ಎಂಬ ಭ್ರಮೆ ಬಿತ್ತಲು ಭೀಮರಾಯನ ಗುಡಿಯ ಆಡಳಿತಾಧಿಕಾರಿಗಳು ಶ್ರಮಿಸುತ್ತಿದ್ದಾರೆ. ವಾಸ್ತವವಾಗಿ ಉತ್ತರ ಕರ್ನಾಟಕದ ಉದ್ದಗಲಕ್ಕೂ ಲ್ಯಾಟ್ರಲ್, ಸಬ್ ಲ್ಯಾಟ್ರಲ್‌ಗಳು ಅಲ್ಲಲ್ಲಿ ಕಾಣಸಿಗುತ್ತವಾದರೂ ಅವ್ಯಾವು ಅಷ್ಟು ವ್ಯವಸ್ಥಿತವಾಗಿ ಇಲ್ಲ. ಇದರಿಂದಾಗಿ ಡ್ಯಾಮ್‌ನಿಂದ ನೀರು ಕಾಲುವೆಗೆ ಹರಿಯುತ್ತಲೇ ಮುಖ್ಯ ಕಾಲುವೆಗಳು ಕುಸಿದು ಬೀಳುತ್ತವೆ. ಇನ್ನು ಕೆಲವು ಕಡೆಯಂತೂ ಕಾಲುವೆಗಳಲ್ಲಿ ಹುಲ್ಲು, ಕಸ ತುಂಬಿಕೊಂಡು ನೀರು ತಡೆದು ಪಕ್ಕದ ಹೊಲಗಳಿಗೆ ನುಗ್ಗಿ, ನೀರು ಅನವಶ್ಯಕವಾಗಿ ಹಳ್ಳ ಸೇರಿ ಹರಿದುಹೋಗುತ್ತದೆ.

ಪ್ರತಿ ಬೇಸಿಗೆಯಲ್ಲಿ ಈ ಉಪ ಕಾಲುವೆಗಳಲ್ಲಿನ ಹೂಳು ಎತ್ತುವುದು, ಅದರ ದುರಸ್ತಿ ಕಾರ್ಯವನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮಾಡುತ್ತದೆ. ಇದಕ್ಕಾಗಿ ಓ ಆ್ಯಂಡ್ ಎಂ ಡಿವಿಜನ್ ಎಂಬ ವಿಭಾಗವೇ ಇದೆ. ದುಡ್ಡು ಮಾಡುವುದಕ್ಕೆ ಹೇಳಿಮಾಡಿಸಿದಂತಿರುವ ಈ ವಿಭಾಗದ ಕಾಮಗಾರಿಗಳನ್ನು ಪಡೆಯಲು ಕಂಟ್ರ್ಯಾಕ್ಟರರು ಕ್ಯೂ ನಿಂತಿರುತ್ತಾರೆ. ಜೊತೆಗೆ ನಿಗದಿತ ಕಾಮಗಾರಿ ಪಡೆಯಲು ಸಹ ಗುತ್ತೇದಾರರಿಗೆ ರಿಂಗ್ ಅಮೌಂಟ್ ನೀಡುತ್ತಾರೆ. ಈ ಹೂಳೆತ್ತುವ, ಕಾಲುವೆ ದುರಸ್ತಿಗೊಳಿಸುವ, ಈ ಕಾಲುವೆಯಲ್ಲಿ ನೀರು ಹರಿಯಲು ಅಡ್ಡಗಾಲಾಗಿರುವ ಜಾಲಿ-ಕಂಟಿ ಇತ್ಯಾದಿಯನ್ನು ಕಟಾವು ಮಾಡುವುದನ್ನು


ಕೆ.ಬಿ.ಜೆ.ಎನ್.ಎಲ್. ಕಚೇರಿ

ರೈತರು ಅಷ್ಟಾಗಿ ಗಮನಿಸುವುದಿಲ್ಲವಾದ್ದರಿಂದ ಇದೆಲ್ಲವನ್ನೂ ಕಾಗದದಲ್ಲಿ ಮಾತ್ರ ಮಾಡುತ್ತಾರೆ. ಈ ಕೆಲಸಕ್ಕೆ ಸಂಬಂಧಿಸಿದ ನಿರೀಕ್ಷಕರಾದ ಜೆ.ಇ, ಎ.ಇ.ಇ.ಗಳೆಂಬ ತಿಮಿಂಗಲಗಳಿಗೆ ಇಂತಿಷ್ಟು ಪರ್ಸೆಂಟೇಜ್ ನೀಡಿ ಬಿಲ್‌ನ್ನು ಅನಾಮತ್ತಾಗಿ ನುಂಗಿಹಾಕುತ್ತಾರೆ. ಹಾಗಾಗಿಯೆ ಈ ಆಡಳಿತಾಧಿಕಾರಿ ಕಚೇರಿಯ ಸುತ್ತ ಕಂಟ್ರ್ಯಾಕ್ಟರ್‌ರೆಂಬ ಬಿಲ್ ವಿದ್ಯೆ ಪರಿಣಿತರೆ ನೋಡಲು ಸಿಕ್ಕುತ್ತಾರೆ. ನಿನ್ನೆ ಮೊನ್ನೆಯವರೆಗೆ ಒಂದು ಊಟಕ್ಕೂ ಗತಿಯಿಲ್ಲದೆ ತಿರುಪೆ ತಿಂದು ಬದುಕುತ್ತಿದ್ದ ಬಹುತೇಕ ಜನ ಕಂಟ್ರ್ಯಾಕ್ಟರರು ಇವತ್ತು ಅಕ್ಷರಶಃ ಲಕ್ಷ್ಮೀಪುತ್ರರಾಗಿ ಮೆರೆಯುತ್ತಿದ್ದಾರೆ. ನಾವೇನು ಕಮ್ಮಿ ಎಂಬಂತೆ ಕೆ.ಬಿ.ಜೆ.ಎನ್.ಎಲ್‌ನ ಬಹುತೇಕ ಅಧಿಕಾರಿಗಳು, ನೌಕರರು ಸಹ ಗಿಂಬಳ ಪಡೆದುಕೊಂಡು ಹಣದ ಮದದಿಂದ ಮೆರೆಯುತ್ತಿದ್ದಾರೆ.

ಈ ಕೌಲುಕೂಟವನ್ನು ಸರಿಯಾಗಿ ಅರ್ಥಮಾಡಿಕೊಂಡ ರಾಜಕಾರಣಿಗಳು ಜನಪರವಾದ ಯಾವುದೇ ನಿಲುವಿಗೆ ಅಂಟಿಕೊಳ್ಳದೆ ಸಿಕ್ಕಷ್ಟು ಸೀರುಂಡೆ ಎನ್ನುತ್ತ ಇದರಲ್ಲಿ ತಮ್ಮ ಪಾಲನ್ನು ಇಟ್ಟುಕೊಂಡಿದ್ದಾರೆ. ಇದರಿಂದಾಗಿ ನೀವು ಯಾವುದೆ ದಿನ ಬಂದರೂ ಭೀಮರಾಯನ ಗುಡಿಯ ಒಂದೆರಡು ಐಬಿಗಳಲ್ಲಿ ಕಂಟ್ರ್ಯಾಕ್ಟರರು, ಅಧಿಕಾರಿಗಳು ಹಾಗೂ ರಾಜಕೀಯ ನಾಯಕರೇ ತುಂಬಿಕೊಂಡಿರುತ್ತಾರೆ. ಈ ಅವ್ಯವಹಾರದ ಕುರಿತು ವಿಧಾನಸಭೆ, ಪರಿಷತ್ತಿನ ಅಧಿವೇಶನಗಳಲ್ಲಿ ಸಾಕಷ್ಟು ಚರ್ಚೆಗಳು ನಡೆದು ಪತ್ರಿಕೆಗಳಲ್ಲಿ ಬಂದುದೊಂದೆ ಖರೆ. ಇವತ್ತಿಗೂ ಯಾರೊಬ್ಬರೂ ನೌಕರಿಯಿಂದ ಡಿಸ್‌ಮಿಸ್ ಆಗಿಲ್ಲ, ಹಾಗೆಯೆ ಕಂಟ್ರ್ಯಾಕ್ಟರ್‌ಗಳೂ ಸರಿಯಾದ ಕೆಲಸ ಮಾಡಿಲ್ಲ.



ಇತ್ತೀಚೆಗೆ ವಿಧಾನ ಪರಿಷತ್ ಸದಸ್ಯ ಅಮಾತೆಪ್ಪ ಕಂದಕೂರ ಕೃಷ್ಣಾ ಮೇಲ್ದಂಡೆ ಯೋಜನೆಯ 116 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು 68 ಕೋಟಿ ರೂಪಾಯಿ ನಷ್ಟು ಹೆಚ್ಚುವರಿ ಕೆಲಸಗಳನ್ನು ಕೈಗೊಂಡಿದೆ ಎಂದು ದಾಖಲೆಗಳ ಸಮೇತ ಒಂದೇ ಸಮ ಕೂಗಾಡಿದರು. ಇದಕ್ಕೆ ಸಂಬಂಧಿಸಿದಂತೆ ನೀರಾವರಿ ಖಾತೆಯ ಸಚಿವ ಬಸವರಾಜ ಬೊಮ್ಮಾಯಿ ಕೂಡ ವೀರಾವೇಶದಿಂದ ಕಳೆದ ಮಾರ್ಚ್ 31 ರಂದು ವಿಚಕ್ಷಣಾ ದಳ ಸಲ್ಲಿಸಿರುವ ತನಿಖಾ ವರದಿ ಪ್ರಕಾರ 6 ಜನ ಮುಖ್ಯ ಇಂಜಿನಿಯರ್, 3 ಜನ ಸೂಪರಿಂಟೆಂಡಿಂಗ್ ಇಂಜಿನಿಯರ್, 25 ಜ[...] ಕಾರ್ಯಪಾಲಕ ಇಂಜಿನಿಯರ್, 25 ಜನ ಕಾರ್ಯಪಾಲ[...] ಇಂಜಿನಿಯರ್, 39 ಜನ ಸಹಾಯಕ ಕಾರ್ಯಪಾಲ[...] ಇಂಜಿನಿಯರ್, 48 ಸಹಾಯಕ ಇಂಜಿನಿಯರ್ ಹಾಗು 15 ಜನ ಕಿರಿಯ ಇಂಜಿನಿಯರುಗಳ ವಿರುದ್ಧ ದೋಷ[...] ರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ನಡೆದಿದೆ ಎಂದರು.

ಆದರೆ ಜೇವರ್ಗಿ ಬ್ರ್ಯಾಂಚ್ ಕೆನಾಲ್ ಕಾರ್ಯನಿರ್ವಾಹ[...] ಇಂಜಿನಿಯರ್ ಭಾಸ್ಕರ್, ರಾಜಶೇಖರ, ನಾರಾಯಣಪು[...] ಬಲದಂಡೆ ಕಾಲುವೆಯ ನಾಗರಾಜ ಮಹಿಪಾಲರೆ[...] ಸುಬ್ರಮಣ್ಯಂ ಅವರನ್ನು ಅಮಾನತ್ತುಗೊಳಿಸುವ ನಾಟಕವಾ[...] ಕೈತೊಳೆದುಕೊಂಡರು. ಜೊತೆಗೆ ಕೋಟ್ಯಂತರ ರೂಪಾಯಿ[...]ಗಳನ್ನು ಅನಾಮತ್ತು ನುಂಗಿ ಕುಂತ ಬಹುತೇಕ ತಿಮಿಂಗಿಲಗ[...] ಹಾಗೇ ಉಳಿದುಬಿಟ್ಟವು. ಇದಕ್ಕೆ ಬಹುಮುಖ್ಯ ಕಾರ[...] ಯಾವ ಅಧಿಕಾರಿಯ ವಿರುದ್ಧ ದೋಷಾರೋಪ ಪ[...] ಸಲ್ಲಿಸಲಾಗಿದೆಯೋ ಆ ಅಧಿಕಾರಿಗಳು ಮಾಡಿದರೆನ್ನಲಾ[...] ಹೇರಾ- ಫೇರಿಯ ಕುರಿತು ಖಚಿತ ದಾಖ[...]ಗಳನ್ನು ಸಂಬಂಧಿಸಿದ ಅಧಿಕಾರಿಗಳು ನೀಡಿ[...] ಇರುವುದು.

2005-2007ರವರೆಗೆ ನಾರಾಯಣಪು[...] ಬಲದಂಡೆ ಕಾಲುವೆ, ಶಹಾಪುರ ಹಾಗ[...] ಜೇವರ್ಗಿ ಶಾಖಾ ಕಾಲುವೆಯ 6[...] ಕಾಮಗಾರಿಗಳಿಗೆ 12 ಕೋಟಿ ವೆಚ್ಚದ[...] ಅನುಮೋದನೆ ದೊರಕಿತ್ತು, ಆದರೆ 11[...] ಕಾಮಗಾರಿಗಳನ್ನು ಹೆಚ್ಚುವರಿಯಾ[...] ತೆಗೆದುಕೊಂಡು 26 ಕೋಟಿ 12 ಲ[...] ರೂಪಾಯಿ ನಷ್ಟ ಉಂಟಾಗಿದೆ ಎಂದು ಜಲಸಂಪನ್ಮೂ[...] ಇಲಾಖೆಯ ಜಾಗೃತ ದಳದ ಐಜಿ ವರದಿ ನೀಡಿದರ[...]

ಸಾವಿರಾರು ಎಕರೆ ಭೂಮಿ ಭೂಗಳ್ಳರ ಪಾಲು

ನೀರಾವರಿ ಕೆಲಸಗಳಲ್ಲಿ ಹಾಡುಹಗಲು ಲೂಟಿ ನಡೆದಿದ್ದರೆ ಇನ್ನೊಂದು ಕಡೆ ಭೂಗಳ್ಳರು, ಅತಿಕ್ರಮಣಕಾರರು, ಬೇನಾಮಿ ಸಾಗುವಳಿ ಮಾಡುವವರ ಸ್ವರ್ಗವೇ ಇಲ್ಲಿ ಸೃಷ್ಟಿಯಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಆರಂಭಗೊಳ್ಳುವ ಮುಂಚೆಯೆ ಈ ಯೋಜನೆಯ ಅಡಿಯಲ್ಲಿ ಕ್ಯಾಂಪ್ ನಿರ್ಮಾಣಕ್ಕೆ, ಕಾಲುವೆಗಳಿಗೆ ಸಾಕಷ್ಟು ಭೂಮಿಯನ್ನು ರೈತರಿಂದ ಭೂಸ್ವಾಧೀನ ಮಾಡಿಕೊಳ್ಳಲಾಗಿತ್ತು. ಆದರೆ ಈ ಭೂಮಿಯ ಪೈಕಿ ಇದೀಗ ಸಾವಿರಾರು ಎಕರೆ ಭೂಮಿ ಭೂಗಳ್ಳರ ಉಂಬಳಿಯಾಗಿದೆ.

ಗುಲಬರ್ಗಾ, ಬಾಗಲಕೋಟೆ, ವಿಜಾಪುರ ಹಾಗೂ ರಾಯಚೂರು ಜಿಲ್ಲೆಗಳಲ್ಲಿಯ ಸುಮಾರು 6 ಸಾವಿರ ಎಕರೆ ಭೂಮಿಯಲ್ಲಿ ಬೇನಾಮಿಯಾಗಿ ಸಾಗುವಳಿ ನಡೆದಿದೆ. ಭತ್ತ ಬೆಳೆಯಕೂಡದು ಎಂದು ರೈತರಿಗೆ ಯು.ಕೆ.ಪಿ. ತಾಕೀತು ಮಾಡಿ ನಿಷೇಧಾಜ್ಞೆ ಹೇರಿದ್ದರೂ ಇಲ್ಲಿ ಬಹುತೇಕ ರೈತರು ನೆಚ್ಚುವುದೇ ಭತ್ತದ ಬೆಳೆಯನ್ನು. ಇದು ಕದ್ದುಮುಚ್ಚಿ ಎಲ್ಲೋ ನಡೆದಿರುವುದಲ್ಲ, ಎಲ್ಲರ ಕಣ್ಣೆದುರಿನಲ್ಲೆ ನಡೆದಿರುವ ದಗಾಕೋರತನ. ಅದೂ ಸರಕಾರ ಈಗಾಗಲೇ ಭೂಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿಯೇ ಎಂಬುದು ಇನ್ನೊಂದು ವಿಶೇಷ.

ಉದಾಹರಣೆಗೆ ನಾರಾಯಣಪುರ ವಲಯದ ವ್ಯಾಪ್ತಿಯಲ್ಲಿ ಕೆ.ಬಿ.ಜೆ.ಎನ್.ಎಲ್ 453 ಎಕರೆ ಭೂಮಿ ಹೊಂದಿದೆ. ಈ ಪೈಕಿ ಕೇವಲ 320 ಎಕರೆಯನ್ನು ಮಾತ್ರ ನಿಗಮ ಬಳಸಿಕೊಂಡಿದೆ. ಇನ್ನುಳಿದ 132 ಎಕರೆ ಭೂಮಿ ಭೂಗಳ್ಳರ ಒಡಲು ಸೇರಿಕೊಂಡಿದೆ. ಇನ್ನು ಹುಣಸಗಿ ವಲಯದಲ್ಲಿ 1013 ಎಕರೆ ಭೂಮಿ ನಿಗಮದ ಆಸ್ತಿಯಾಗಿದೆ. ಆದರೆ ಇದರಲ್ಲಿ ಕೇವಲ 201 ಎಕರೆ ಮಾತ್ರ ಇಲಾಖೆ ಬಳಸಿಕೊಂಡಿದೆ. ಇನ್ನುಳಿದ 567 ಎಕರೆ ಅನಾಮತ್ತು ದಗಾಕೋರರ ಪಾಲಾಗಿದೆ.


ಕೇವಲ ಎರಡು ಉಪವಿಭಾಗಗಳಲ್ಲಿಯ ಭೂಮಿಯ ಪರಿಸ್ಥಿತಿಯ[...] ಹೀಗಿರುವಾಗ ಇನ್ನುಳಿದ ಕೆ.ಬಿ.ಜೆ.ಎನ್.ಎಲ್ ಪ್ರದೇಶಗಳಲ್ಲಿ ಇನ್ನೆಷ್ಟು ಭೂಮಿಯನ್ನು ಬೇರೆಯವರು ಕಬ್ಜಾ ತೆಗೆದುಕೊಂಡಿರಲಿಕ್ಕಿಲ್ಲ!?

ಕಾಲುವೆಗಳಿಗಾಗಿ, ಕಚೇರಿಗಾಗಿ ನಿಗಮಕ್ಕೆ ಭೂಮಿಯನ್ನು ನೀಡಿ[...] ರೈತರೇ ಈ ಭೂಮಿಯನ್ನು ತಮ್ಮ ಸುಪರ್ದಿಯಲ್ಲಿಟ್ಟುಕೊಂಡು ಮುನ್ನಡೆದಿದ್ದ[...] ಅದನ್ನು ಸ್ವಲ್ಪ ನಿರ್ಲಕ್ಷಿಸುಬಹುದಿತ್ತೇನೋ? ಆದರೆ ಸರಕಾರದ ಈ ಭೂಮಿಯನ್ನು ತಮ್ಮಪ್ಪನ ಆಸ್ತಿಯೆಂಬಂತೆ ಬಳಸುತ್ತಿರುವವರು ಈ ಭಾಗದ ಮರಿ-ಗಿ[...] ಪುಢಾರಿಗಳೆಂಬ ಹಲಾಲುಖೋರ ರಾಜಕಾರಣಿಗಳು ಹಾಗೂ ಅವರ ಮಕ್ಕಳು.

ಹೀಗೆ ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿಯನ್ನು ಅಕ್ರಮವಾ[...] ತಮ್ಮ ವಶಕ್ಕೆ ಪಡೆದುಕೊಂಡು, ಕೆಲವು ಕಡೆ ಅವನ್ನು ಮಾರಿಕೊಂಡು ಇನ್ನೂ ಹಲವು ಕಡೆ ಅವುಗಳನ್ನು ಬಾಡಿಗೆಗೆ ನೀಡಿರುವ ಭ್ರಷ್ಟಾಚಾರವನ್ನು ತಡೆಯುವ ತಾಕತ್ತು ಚೆಡ್ಡಿ ಸರಕಾರಕ್ಕೆ ಇದೆಯೆ?

ಧಾರವಾಡ: ನೋಂದಣಾಧಿಕಾರಿ ಪ್ರತಿಭಾಳ ನುಂಗಾಟ

ಅಕ್ಷರಶಃ ಧಾರವಾಡದ ಜನತೆ ನಲುಗಿ ಹೋಗಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಹಿರಿಯ ನೋಂದಣಾಧಿಕಾರಿಯ ಕುರ್ಚಿಗೆ ಚೆಂದು ಕುಳಿತಿರುವ ಪ್ರತಿಭಾ ಬಡಿಕರ್‌ಳ ಧನದಾಹ ಅದಕ್ಕೆ ಕಾರಣ. ಬೆಳಗ್ಗೆ ಬಗಲಿಗೆ ವ್ಯಾನಿಟಿ ಬ್ಯಾಗ್ ಏರಿಸಿದಳೆಂದರೆ ಅದು ಭರ್ತಿಯಾಗುವವರೆಗೆ ಮನೆ ಸೇರಕೂಡದೆಂಬ ನಿತ್ಯ ನಿರ್ಧಾರ ಈಕೆಯದ್ದು. ಬರೋಬ್ಬರಿ ಎರಡೂವರೆ ಡಜನ್ ಸೈಟುಗಳು, ನಾಲ್ಕಾರು ಬ್ಯಾಂಕುಗಳಲ್ಲಿ ಡಿಪಾಸಿಟ್ ಸೇರಿದಂತೆ ಸಂಬಂಧಿಕರ ಹೆಸರಲ್ಲಿ ಲಾಕರ್‌ಗಳನ್ನು ಹೊಂದಿರುವ ಪ್ರತಿಭಾ ತನ್ನ ದಿನದ ಪ್ರತಿಭಾ ಬಾಬತ್ತನ್ನೆಲ್ಲಾ ಇಲ್ಲಿಯೇ ಸೇಫಾಗಿಡುತ್ತಾ ಬಂದಿದ್ದಾಳೆ.




1999ರಲ್ಲಿ ಹುಬ್ಬಳ್ಳಿಯ ಸಬ್ ರಿಜಿಸ್ಟ್ರಾರ್ ಕಚೇರಿಗೆ ಪ್ರತಿಭಾ ಎಂಟ್ರಿ ಕೊಟ್ಟಳು. ನಂತರ ಬೆಳಗಾವಿ ಜಿಲ್ಲೆಯ ಸವದತ್ತಿ, ಧಾರವಾಡ, ಬಾಗಲಕೋಟೆ ಜಿಲ್ಲೆಯ ಬೀಳಗಿಯಲ್ಲೆಲ್ಲ ಲೂಟಿ ಕಾಯಕವನ್ನು ನಿಷ್ಠೆಯಿಂದ ಮಾಡಿದಳು. ಹಾಗೆ ನೋಡಿದರೆ ಪ್ರತಿಭಾ ಕೃಷಿ ಇಲಾಖೆಯಲ್ಲಿರಬೇಕಿತ್ತು, ಏಕೆಂದರೆ, ಇವಳು ಅಗ್ರಿ ಸ್ಟೂಡೆಂಟ್. ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಒಳ್ಳೆ ಕೆಲಸದಲ್ಲಿರುವ ಅಪ್ಪನ ನೆರಳಿನಲ್ಲೇ ಸಲೀಸಾಗಿ ಕೃಷಿ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಪ್ರತಿಭಾ ಕಾಸಿಲ್ಲದ ಕೃಷಿ ಇಲಾಖೆ ಬಿಟ್ಟು ಜಮೀನನ್ನೇ ಎಂಟ್ರಿ ಮಾಡುವ ನೋಂದಣಿ ಇಲಾಖೆಗೆ ಸೇರಿ ಹಗಲು ದರೋಡೆ ಪ್ರಾರಂಭಿಸಿಬಿಟ್ಟಳು.

ಮಂತ್ರಿ ಶೆಟ್ಟರ್‌ನ ಎಲ್ಲ ವ್ಯವಹಾರ ನಡೆಸುವ ಆತನ ತಮ್ಮ ಪ್ರದೀಪ ಶೆಟ್ಟರನ ಮೂಲಕ ನಾಲ್ಕು ವರ್ಷದ ಹಿಂದೆ ಧಾರವಾಡದ ನೋಂದಣಿ ಅಧಿಕಾರಿಯಾಗಿ ಸೀಟು ಗಿಟ್ಟಿಸಿಕೊಂಡ ಪ್ರತಿಭಾ ವರ್ಷಕ್ಕೆ ನಾಲ್ಕು ಲಕ್ಷದಂತೆ ದರ ಹೆಚ್ಚಿಸುತ್ತಾ ಇಪ್ಪತ್ನಾಲ್ಕು ಲಕ್ಷ ಪೇಮೆಂಟ್ ಮಾಡುತ್ತಿದ್ದಾಳೆ. ಇವಳ ಜಾಗಕ್ಕೆ ಜಗದೀಶ ಶೆಟ್ಟರ್‌ನ ಸಂಬಂಧಿಕರೊಬ್ಬರು ಬರಲು ಹರಸಾಹಸ ಪಟ್ಟು ದುಂಬಾಲು ಬಿದ್ದರೂ ಕ್ಯಾರೆ ಅನ್ನದ ಶೆಟ್ಟಿ ಪಕ್ಕಾ ವ್ಯವಹಾರಕ್ಕೆ ಕುಳಿತು ಪ್ರತಿಭಾಳನ್ನೇ ಇಲ್ಲಿ ರಿಕಾಣಿ ಹೂಡಿಸಿದ್ದಾನೆ. ವರ್ಷವೊಂದಕ್ಕೆ ಸರಿಸುಮಾರು ಮೂವತ್ತು ಲಕ್ಷ ಮಾಮೂಲಿ ಕೊಡುವ ಸಬ್‌ರಿಜಿಸ್ಟ್ರಾರ್ ದಿನವೊಂದಕ್ಕೆ ಅದೆಷ್ಟು ಗಳಿಸುತ್ತಾಳೆ ಅನ್ನೋದನ್ನ ಲೆಕ್ಕ ಹಾಕುವುದೇ ಸಾಹಸದ ಕೆಲಸವಾಗಿದೆ. ಒಂದು ದಿನವೂ ಸಮಯಕ್ಕೆ ಸರಿಯಾಗಿ ಕಚೇರಿಗೆ ಕಾಲಿಡದ ಈಕೆ ಬಿಂದಾಸಾಗಿ ಮಧ್ಯಾಹ್ನ ಹೊತ್ತಿಗೆ ಬಂದು ಕುಳಿತಳೆಂದರೆ, ಕಚೇರಿಯ ಸಿಬ್ಬಂದಿಗಳು ಗಿರಾಕಿಗಳನ್ನ ಎಳೆತರುವುದರಲ್ಲಿ ಬ್ಯುಸಿಯಾಗುತ್ತಾರೆ.

ಬೇಕಾದ ದಾಖಲೆ ಸರಿಯಿರದಿದ್ದರೂ ಪರವಾಗಿಲ್ಲ, ಪೇಮೆಂಟ್ ಮಾತ್ರ ಚೊಕ್ಕಾಗಿರಬೇಕು ಎಂದು ಆರ್ಡರ್ ಮಾಡಿರುವ ಪ್ರತಿಭಾಳ ಹಿಂದೆ ಬಿಕರಿಗೆ ನಿಂತಿರುವ ಏಜೆಂಟರುಗಳ ಸಂಖ್ಯೆಯೇ ಐವತ್ತರ ಗಡಿ ದಾಟುತ್ತೆ. ಇವಳ ಕೆಲಸದಲ್ಲಿ ಒಂದು ವಿಶೇಷವೆಂದರೆ ಯಾರ ಶಿಫಾರಸ್ಸಿಗೂ ಜಗ್ಗುವುದೇ ಇಲ್ಲ. ಸ್ವತಃ ಈ ವಿಚಾರದಲ್ಲಿ ಶಾಸಕನ ಪುತ್ರ ಅರವಿಂದ ಬೆಲ್ಲದ ಪ್ರತಿಭಾಳೊಂದಿಗೆ ಜಗಳವಾಡಿದ್ದಾನೆ. ಹಣಕಾಸಿನ ವಿಚಾರದಲ್ಲಿ ಬಹಳ ನಿಷ್ಠಳಾಗಿರುವ ಇವಳು ತಮ್ಮ ಸ್ವಂತ ಮನೆ, ಸೈಟುಗಳ ನೋಂದಣಿಗೆ ಕಚೇರಿಗೆ ಬಂದಿದ್ದ ಎಲೆಕ್ಟ್ರಾನಿಕ್ ಮೀಡಿಯಾದ ಮೂರ್‍ನಾಲ್ಕು ವರದಿಗಾರರಿಗೂ ಹಣ ಕೊಡದೆ ಕೆಲಸವಾಗೊಲ್ಲ ಎಂದು ನೇರವಾಗಿ ಹೇಳಿ ಕಳಿಸಿದ್ದಾಳೆ.


ಭ್ರಷ್ಟಾಚಾರ ನಿರ್ಮೂಲನೆಯ ಟೈಟಲ್ ಹೇಳಿಕೊಳ್ಳುವ ಚಾನಲ್‌ವೊಂದರ ರಹಸ್ಯ ಕಾರ್ಯಾಚರಣೆಗೆ ಪ್ರತಿಭಾ ಬಲಿಯಾಗಿ ಲಕ್ಷಕ್ಕೂ ಹೆಚ್ಚು ಹಣವನ್ನು ವರದಿಗಾರನಿಗೆ ಕೊಟ್ಟು ಬಚಾವಾಗಿದ್ದಾಳೆ. ಇಂಥ ಐನಾತಿ ಬುದ್ಧಿಯಿಂದಾಗಿ



ಈಕೆ ಸ್ವತಃ ತನ್ನ ಕಚೇರಿಯಲ್ಲಿನ ಸಿಬ್ಬಂದಿಯ ವಿರೋಧ ಕಟ್ಟಿಕೊಂಡಿದ್ದಾಳೆ. ಕೆಲ ಸಿಬ್ಬಂದಿಗಳು ದಿನನಿತ್ಯ ಇವಳನ್ನ ಬೈಗುಳಗಳಿಂದ ಹಾಡಿ ಹೊಗಳುತ್ತಾರೆ. ವಿಚಿತ್ರವೆಂದರೆ, ಇವರಲ್ಲೆ ಯಾರೋ ಒಬ್ಬರು ಮೇಲಧಿಕಾರಿಗಳಿಗೆ ಪ್ರತಿ ತಿಂಗಳು ಒಂದು ಮೂಕರ್ಜಿ ಬರೆದು ಇವಳ ತಿಂಗಳ ಪ್ರತಿಭಾ ಪುರಾಣವನ್ನ ಯಥಾವತ್ತಾಗಿ ತಿಳಿಸುತ್ತಾರಂತೆ. ಆದರೆ, ಇವಳು ಹಾಕುವ ದುಬಾರಿ ಬಿಸ್ಕೆಟು ಚಪ್ಪರಿಸುವ ಅಧಿಕಾರಿಗಳ್ಯಾರೂ ಅವುಗಳತ್ತ ನೋಡುತ್ತಿಲ್ಲ.

ಯಾವ ಕೆಲಸಕ್ಕೆ ಎಷ್ಟು ಅಂತ ಸ್ವಂತದ್ದೊಂದು ರೇಟ್ ಬೋರ್ಡ್ ಹಾಕಿಕೊಂಡು ನೋಂದಣಿ ಮಾಡಲು ಕುಳಿತಿರುವ ಪ್ರತಿಭಾ ಬಿಡಿಕರ್‌ಗೆ ಕೃ[...] ಜಮೀನು ಗುಂಟೆ ಲೆಕ್ಕದಲ್ಲಿ ರಿ[...] ಸ್ಟ್ರೇಷನ್‌ಗೆ ಬಂದರೆ ಹಬ್ಬದ ಸಂಭ್ರಮ[...] ಇಂತಹ ಕೇಸುಗಳು ದಿನಕ್ಕೆ 10[...] ಮೇಲೆ ಬರುತ್ತವೆ. ಇಂಥವಕ್ಕೆ ಹತ್ತು[...] ಸಾವಿರ ಫಿಕ್ಸ್ ಆಗಿದೆ. ಮನೆ ಮತ್ತು[...] ಸೈಟುಗಳ ನೋಂದಣಿಗೆ ತಲಾ ಎಂಟು[...] ಸಾವಿರ ಕೊಡಲೇ ಬೇಕು. ಇನ್ನು[...] ಡೆವಲಪ್‌ಮೆಂಟ್ ಅಗ್ರಿಮೆಂಟು[...] ಜಿ.ಪಿ.ಎ.ಗಳು ದಿನಕ್ಕೆ ಸರಿಸುಮಾರು ಇಪ್ಪತ್ತು ಇದ್ದೇ ಇರುತ್ತವೆ.

ಇನ್ನು ಪುಕ್ಕಟೆ ಅಂತರ್ಜಾತಿ ಮದುವೆ ಮಾಡಿ[...] ಪುಣ್ಯ ಕಟ್ಟಿಕೊಳ್ಳುವ ಪುಣ್ಯಾತಗಿತ್ತಿ ಇವಳಲ್ಲ. 20-2[...] ಸಾವಿರ ಕೊಟ್ಟರೇನೆ ಮದುವೆ ನೋಂದಣಿಯಾಗುತ್ತದೆ[...] ಬೇಕಾದರೆ ಎರಡು ಸಾವಿರ ಹೆಚ್ಚಿಗೆ ಕೊಟ್ಟರೆ, ಹಿಂದಿನ[...] ದಿನಾಂಕ ಹಾಕಿ ತಕರಾರು ಬರದ ಹಾಗೆ ಕೇಸ್ ಕ್ಲೋಸ್ ಮಾಡುತ್ತಾಳೆ. ಇಷ್ಟೆಲ್ಲಾ ದಂಧೆ ಮಾಡಿ ಕಾಸು ಕೀಳಲು ಬೆವರು ಹರಿಸುತ್ತಿರುವ ಸ್ಟ್ಯಾಂಪ್ ವೆಂಡರ್‌ಗಳ ಸೇವೆಯನ್ನು ಮರೆಯುವಂತಿಲ್ಲ. ಸ್ಟ್ಯಾಂಪ್ ವೆಂಡರುಗಳಾದ ಕಾಪೋ[...]



ಡಾರ್ಮೆಂಟ್ ಮಾಡಲಾದ ...ಟೇರಿಗಳೆಲ್ಲ ತುಡುಗರ ಪಾಲು!

1990ರ ದಶಕದಿಂದ ಇದುವರೆಗೆ ನಡೆದಿರುವ ...ವರಿ ಕಾಮಗಾರಿಗಳನ್ನು ಮಾಡಿಸಿಕೊಡಲು ಬರುವ ...ದಾರಿಗಳಿಗಾಗಿ ಕಟ್ಟಿಸಲಾದ ವಸತಿ ಸಮುಚ್ಚಯಗಳು ...ಗ ಕೆಲಸವೆಲ್ಲ ಮುಗಿದುಹೋಗಿವೆ ಎಂದು ಕೆಲವು ...ರಿಗಳನ್ನು ಡಾರ್ಮೆಟ್ ಮಾಡಲಾಗಿದೆ. ಹೀಗಾಗಿ ಅವರ ...ಗೃಹಗಳು/ ಕೆಲವು ನಿಗಮದ ಕಟ್ಟಡಗಳು ಖಾಲಿ ...ಯಾಗಿವೆ. ಇದನ್ನು ಸರಿಯಾಗಿ ಗ್ರಹಿಸಿರುವ ಕೆಲವು ...ಲುಬಾವಲಿಗಳು ಹೊಂಚುಹಾಕಿ ತಮ್ಮ ರಾಜಕೀಯ ...ವ ಬಳಸಿ ಯುಕೆಪಿ ಕ್ಯಾಂಪ್ ವಸತಿಸಮುಚ್ಚಯಗಳಲ್ಲಿ ...ಸತೊಡಗಿವೆ. ಇದಲ್ಲದೆ ಕೆಲವು ಬೃಹತ್ ಕಟ್ಟಡಗಳ ...ನಿಯನ್ನು ಆಡಳಿತಾಧಿಕಾರಿಗೆ ಬೂಸಾ ತಿನ್ನಿಸಿ ಕೆಲವು ...ಟನೆಗಳು ಮತ್ತು ಜಾತಿಗಳು ತಮ್ಮ ಸಂಘಟನೆಯ ...ರಿಗಳನ್ನಾಗಿ ಮಾಡಿಕೊಂಡಿವೆ.

ಇದೆಲ್ಲ ಕಾನೂನುಬಾಹಿರ ಎಂಬುದು ಎಲ್ಲರಿಗೂ ...ದೆ. ಜಲಸಂಪನ್ಮೂಲ ಮಂತ್ರಿ ಬಸವರಾಜ ಬೊಮ್ಮಾಯಿ ...ಗಮನ ಹರಿಸುವರೆ?

...ರ ಕೂದಲನ್ನೂ ಇದುವರೆಗೆ ಕೊಂಕಿಸಲು ಆಗಿಲ್ಲ! ...ಷ್ಟೊಂದು ಸೋಜಿಗದ ಸಂಗತಿಯೆಂದರೆ ಈ ಅವ್ಯವಹಾರ ... ನೇರವಾಗಿ ಭಾಗಿಯಾಗಿರುವ ಅರವಿಂದ, ಪ್ರಕಾಶ, ...ರ ಹಾಗೂ ಬಾಲಸುಬ್ರಮಣ್ಯಂ ಈಗಾಗಲೇ ...ತ್ತಿಯಾಗಿದ್ದಾರೆ!!

...ಜಿಲ್ಲೆಯ ಚಿಂಚೋಳಿ ತಾಲೂಕಿನ ಕೆಳದಂಡೆ ಮುಲ್ಲಾ... ಯೋಜನೆಯಲ್ಲಿ ನಡೆದ ಲಫಡಾಗಳಿಂದ ನೀರಾವರಿ ...ಖೆಗೆ ಖಚಿತವಾಗಿ 53 ಕೋಟಿ 36 ಲಕ್ಷ ರೂ. ಕನ್ನ ...ದೆ. ಇದನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿ ಕ್ರಮ ...ದುಕೊಳ್ಳಬೇಕೆಂದು ಒತ್ತಾಯಿಸಬೇಕಿರುವ ದರ್ಶನಾಪುರ ...ಬಸಪ್ಪ ಸ್ವತಃ ಕಂಟ್ರಾಕ್ಟರ್‌ರ ಗುಂಪಿನಲ್ಲಿ ತೂರಿಕೊಂಡಿ... ಖರ್ಗೆಗಂತೂ ಈ ಕಡೆ ನೆದರಿಲ್ಲ, ಧರ್ಮಸಿಂಗ್ ...ಯೊಳಗೆ ಈ ಸಂಗತಿ ಹೋಗುವುದಿಲ್ಲ. ಶಶೀಲ ...ಶಿಯಂತೂ ಇತ್ತೀಚೆಗೆ ಸಿಕ್ಕ ಚೇರಮನ್ ಸೀಟ್‌ನ ...ಯಲ್ಲಿ ತೇಲಾಡುತ್ತಿದ್ದಾನೆ. ಕೇದಾರಲಿಂಗಯ್ಯ ಹಿರೇಮಠ ... ರಾಜಕಾರಣಿ ಕಮ್ ಕಂಟ್ರಾಕ್ಟರ್‌ನಿಗೆ ಕಾಳಜಿ ಇರಲು ...ಧ್ಯವಿಲ್ಲ. ಜೇವರ್ಗಿ ಮತಕ್ಷೇತ್ರದಿಂದ ಧರ್ಮಸಿಂಗ್‌ನನ್ನು ...ಕ್ಕಿ ಚುನಾಯಿತನಾದ ದೊಡ್ಡಪ್ಪಗೌಡ ನರಿಬೋಳಿಗಂತೂ ... ಸ್ಥಾನ ನಿಭಾಯಿಸುವುದೆ ಕಷ್ಟವಾಗತೊಡಗಿದೆ.

...ಪರಿಸ್ಥಿತಿ ಹೀಗಿರುವಾಗ ಕಾಮಗಾರಿಗಳನ್ನು ಲಫಡಾ...ದ ಕಾಪಾಡುವವರ್ಯಾರು?

• ವಿಶ್ವಾರಾಧ್ಯ ಸತ್ಯಂಪೇಟೆ


...ರ್ ಪ್ರಕಾಶ್ ಗೋಡಬೋಲೆ, ಉದಯದಾತೆ, ಶೇಖ್, ...ಧರ, ಬಸ್ತೆ ಬಿಲ್ಲರವಾರ ಗೌಡಪ್ಪ ಎಲಿಗಾರ್‌ಗಳಂಥವರು ...ರಿಯದೆ ಪ್ರತಿಭಾಳ ಸೇವೆ ನಡೆಸುತ್ತಿದ್ದಾರೆ.

...ವಳಿಗೆ ಅತಿ ಹೆಚ್ಚು ಆಮದನಿ ತಂದುಕೊಡುವವರು ...ಪರ್ಸ್ ಕಂಪನಿಯವರು. ರಾಶಿ ಮತ್ತು ಕೃಷಿ ಡೆವಲಪರ್ಸ್, ...ಗಿರಿ ಡೆವಲಪರ್ಸ್, ಪವನ್ ಬಿಲ್ಡರ್ಸ್‌ನ ರಿಕಾರೆ, ...ಮುಖ್, ಸಿ.ಬಿ. ಎಲಿಗಾರ್, ಪ್ರತಾಪ್ ಮರಾಠೆ, ...ಕ್ಕಿ ಬ್ರದರ್ಸ್‌ಗಳಾದ ಪ್ರಕಾಶ್, ಶಿವಾಜಿ ಇವರುಗಳೆಲ್ಲ ...ಭಾಳಿಗೆ ಖಾಯಂ ಆಗಿ ಮಾಮೂಲಿ ಕೊಡುವಂಥವರು. ...ವನಕ್ಕೆ ಬೆಳೆಯುತ್ತಿರುವ ಧಾರವಾಡದಲ್ಲಿ ಜಮೀನು ...ತ್ತಿ ಸೈಟು ಮಾರುವುದರಲ್ಲಿ ಇವರುಗಳೇ ಪ್ರಮುಖರು. ...ಾಗೇ ಮೇಡಮ್ ಕೆಲಸಕ್ಕೆ ತೊಂದರೆ ಮಾಡಬಾರದಂತೆ ... ಒಬ್ಬೊಬ್ಬರೂ ತಲಾ ಎರಡು ಸೈಟಗಳನ್ನು ಗಿಫ್ಟಾಗಿ ...ಟ್ಟಿದ್ದಾರಂತೆ. ಅವುಗಳ ಸಂಖ್ಯೆಯೇ ಮೂವತ್ತಾಗಿದೆ. ...ತೇಕ ಸೈಟುಗಳು ಪ್ರತಿಭಾಳ ಹತ್ತಿರದ ಸಂಬಂಧಿಕರ ...ರಲ್ಲಿ ನೋಂದಣಿಯಾಗಿವೆ. ದಿನನಿತ್ಯ ವಿವಿಧ ...ಲಗಳಿಂದ ವಸೂಲಾದ ಹಣವನ್ನು ಪ್ರತಿಭಾ ...ವಾಡದ ಎಸ್.ಬಿ.ಐ. ಬ್ಯಾಂಕಿನ ರಹಸ್ಯ ಖಾತೆಗೆ ...ಸುತ್ತಾಳೆ. ಅಲ್ಲದೆ ಸಿಂಡಿಕೇಟ್, ಕರ್ನಾಟಕ, ಎಸ್.ಬಿ.ಐ, ...ಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಸಂಬಂಧಿಕರ ...ಲ್ಲಿ ಲಾಕರ್‌ಗಳನ್ನು ಹೊಂದಿರುವ ಪ್ರತಿಭಾ ತನ್ನ ...ಯುಯನ್ನೆಲ್ಲಾ ಅಲ್ಲೇ ಸೇಫಾಗಿಡುತ್ತಿದ್ದಾಳೆ.

...ಭ್ರಷ್ಟಾಚಾರದ ಭೀಷ್ಮ ಯಡಿಯೂರಪ್ಪನ ಸರ್ಕಾರದಲ್ಲಿ ...ದ್ದವರ ಪೈಕಿ ನೋಂದಣಾಧಿಕಾರಿ ಪ್ರತಿಭಾ ಬಡಿಕರ್ ... ಒಬ್ಬಳು. ಆದರೆ ಇವಳ ರಣಹಸಿವು ಇನ್ನೂ ತೀರಿಲ್ಲ, ... ಬಿಟ್ಟು ಮೇಲೇಳುವ ಲಕ್ಷಣಗಳೂ ಕಾಣಿಸುತ್ತಿಲ್ಲ. ... ಭಯಾನಕ ಭ್ರಷ್ಟಾಚಾರಕ್ಕೆ, ಜನ ಹೊಸ ಮನೆ, ..., ಜಮೀನುಗಳ ಖರೀದಿಯನ್ನೇ ನಿಲ್ಲಿಸುವ ಹಂತ ...ಿದ್ದಾರೆ. ವಿದ್ಯಾನಗರಿ ಧಾರವಾಡವನ್ನು ಪೈಶಾಚಿಕ...ವಾಗಿ ಕುಳಿತಿರುವ ಪ್ರತಿಭಾಳನ್ನು ಪರಮನೆಂಟಾಗಿ ...ಗೆ ಕಳಿಸಲು ಲೋಕಾಯುಕ್ತರು ಅದ್ಯಾವಾಗ ಸಿದ್ಧರಾಗು... ಕಾದು ನೋಡಬೇಕಿದೆ.

• ಹುರಳಿಕುಪ್ಪಿ ವಿನಯ್

ಮಂಡ್ಯದಿಂದ ಎಮ್ಮೆಲ್ಲೆಯಾಗಲು ಅಂಬಿ ಸಿದ್ಧತೆ!



ಮಂಡ್ಯದ ಗಂಡು, ಸೋಲಿಲ್ಲದ ಸರದಾರ ಎಂದು ಕರೆಸಿಕೊಳ್ಳುತ್ತಿದ್ದ ಅಂಬಿ ಸತತ ಸೋಲನ್ನುಂಡಿದ್ದು ಇತ್ತೀಚಿನ ಇತಿಹಾಸ. ಈ ಹಿಂದೆ ಚುನಾವಣೆಗೆ ಮುಂಚೆಯೂ ಜನರಿಗೆ ಕೇರ್ ಮಾಡದೆ, ಗೆದ್ದ ನಂತರ ಜನರಿಗೆ ಸಿಗದೆ ನಾಪತ್ತೆಯಾಗುತ್ತಿದ್ದ ಅಮರನಾಥ್ ಅಲಿಯಾಸ್ ಅಂಬರೀಷರ ವ್ಯಕ್ತಿತ್ವದಲ್ಲಿ ಇತ್ತೀಚೆಗೆ ಆಗಿರುವ ಹೊಸ ಬದಲಾವಣೆಯನ್ನು ಜನ ಅಚ್ಚರಿಯಿಂದ ನೋಡುತ್ತಿದ್ದಾರೆ.

ಅಂಬಿ ಈಗ ತನ್ನ ಎಂದಿನ ಆಲಸ್ಯ ಸೋಮಾರಿತನವನ್ನೆಲ್ಲಾ ಬಿಟ್ಟು ಆಗಾಗ ಮಂಡ್ಯ ತಾಲೂಕಿನ ಹಳ್ಳಿಗಳಿಗೆ ಭೇಟಿ ಕೊಡುತ್ತಿದ್ದಾರೆ. ಎಲೆಕ್ಷನ್ ವೇಳೆಯಲ್ಲಿ ತನ್ನ ಹಿಂದೆ ಮುಂದೆ ಪುಡಿಪುಕ್ಕಗಳ ಹಿಂಡನ್ನೂ, ತಾರೆಯರ ದಂಡನ್ನೂ ಕಟ್ಟಿಕೊಂಡು ಸುತ್ತುವುದು ಅಂಬಿಯ ಹವ್ಯಾಸವಾಗಿತ್ತು. ಆದರೀಗ ಅಂಬಿ ಅದನ್ನೆಲ್ಲಾ ಬಿಟ್ಟು ತಾನೇ ಖುದ್ದು ಹಾದಿಬೀದಿಯಲ್ಲಿ ಜನರನ್ನು ಮಾತಾಡಿಸುತ್ತಿದ್ದಾರೆ. ಹಳ್ಳಿಗಳಲ್ಲಿ ನಡೆಯುವ ದೊಡ್ಡ ಕಾರ್ಯಕ್ರಮಗಳಿಗೂ ಬರದೆ ಜನರಿಗೆ ಬೇಸರ ಮಾಡುತ್ತಿದ್ದ ಅಂಬಿ ಇತ್ತೀಚೆಗೆ ಹಳ್ಳಿಗಳ ಸಣ್ಣಪುಟ್ಟ ಕಾರ್ಯಕ್ರಮಗಳಿಗೂ ತಪ್ಪದೆ ಹೋಗುತ್ತಿರುವುದನ್ನು, ಭಾಷಣ ಬಿಗಿಯುತ್ತಿರುವುದನ್ನು ಕಂಡು ಹಾಲಿ ಶಾಸಕ ಎಂ.ಶ್ರೀನಿವಾಸ್ ಭೀತಿಗೆ ಬಿದ್ದಿದ್ದಾಗಿದೆ. ಜೊತೆಗೆ ಸ್ವತಃ ಕಾಂಗ್ರೆಸ್‌ನಲ್ಲಿ ಇದ್ದೂ ಇಲ್ಲದಂತಾಗಿರುವ ನಾಯಕರಂತೂ ವಿಲವಿಲ ಒದ್ದಾಡುವಂತಾಗಿದೆ!



ಎ.ರವೀಂದ್ರ ಶ್ರೀಕಂಠಯ್ಯ

ಫುಲ್‌ಟೈಮ್ ರಾಜಕಾರಣ ಮಾಡಲು ತಯಾರಿ ನಡೆಸುತ್ತಿರುವ ಅಂಬರೀಷ್ ಕಳೆದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಬಹುತೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ ಕ್ಯಾಂಡಿಡೇಟ್‌ಗಳನ್ನು ಗೆಲ್ಲಿಸಿಕೊಡುತ್ತೇನೆ, ತನಗೇ ಉಸ್ತುವಾರಿ ಕೊಡಿ ಎಂದು ರಾಜ್ಯ ನಾಯಕರ ಹತ್ತಿರ ಪಟ್ಟು ಹಿಡಿದು ಗುದ್ದಾಡಿದ್ದರು.



ಎಂ.ಎಸ್.ಆತ್ಮಾನಂದ

ವಾಸ್ತವದಲ್ಲಿ ಆ ಹೊತ್ತಿಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಒಬ್ಬನೇ ಒಬ್ಬ ಸಮರ್ಥ ನಾಯಕನಿಲ್ಲದೆ ಪಕ್ಷ ಸೋತು ಸೊರಗಿತ್ತು. ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಬಿಟ್ಟು ಹೋಗಿದ್ದ ಕಡು ವೈರಿ ಮಾಜಿ ಸಂಸದ ಜಿ.ಮಾದೇಗೌಡ ಮತ್ತು ಮಾಜಿ ಎಮ್ಮೆಲ್ಸಿ ಮಧು ಮಾದೇಗೌಡರನ್ನೂ ಕರೆದು ಕಾಂಗ್ರೆಸ್ ಸೇರಿಸಿದ್ದು, 'ರಾಷ್ಟ್ರನಾಯಕ' ಎಸ್ಸೆಂ ಕೃಷ್ಣರನ್ನೂ ಪ್ರಚಾರಕ್ಕೆ ಎಳೆದು ತಂದದ್ದು ಮದ್ದೂರಿನಲ್ಲಿ ಕ್ಲಿಕ್ ಆಯಿತು. ಹೇಳಿಕೇಳಿ ಮದ್ದೂರು ಈ ಮೂರೂ ನಾಯಕರ ಸ್ವಂತ ಊರುಗಳಿದ್ದ ತಾಲೂಕು. ಅದೇ ರೀತಿಯಲ್ಲಿ ಅಂಬರೀಷೇ ಪ್ರಯತ್ನಪಟ್ಟು ಪಾಂಡವಪುರದಲ್ಲಿ ರೈತ ಸಂಘದೊಂದಿಗೆ ಮಾಡಿಕೊಂಡ ಕೂಡಾವಳಿಯೂ ಸಹಾಯ ಮಾಡಿತು. ಆದರೆ ಅಂಬರೀಷ್‌ರ ನೆಚ್ಚಿನ ಕ್ಷೇತ್ರ ಶ್ರೀರಂಗಪಟ್ಟಣದಲ್ಲಿ ಏನೇ ಸರ್ಕಸ್ ಮಾಡಿದರೂ ಸ್ವಪಕ್ಷೀಯ ರೆಬೆಲ್ ರವೀಂದ್ರನನ್ನು ಮಣಿಸಲಾಗದೇ ಶ್ರೀರಂಗಪಟ್ಟಣದ ಮೇಲಿನ ಆಸೆಯನ್ನು ಸಂಪೂರ್ಣ ಕೈಬಿಡಬೇಕಾಗಿ ಬಂತು.



ವಿದ್ಯಾ ನಾಗೇಂದ್ರ

ಇದರ ವಾಸನೆ ಮೊದಲೇ ಅರಿತಿದ್ದ ಅಂಬರೀಷ್ ಮಂಡ್ಯ ವಿಧಾನಸಭಾ ಕ್ಷೇತ್ರವೇ ತನ್ನ ಟಾರ್ಗೆಟ್ ಎಂದು ಮುಂಚೆಯೇ ಡಿಸೈಡ್ ಮಾಡಿದಂತಿದೆ. ಹಾಗಾಗಿಯೇ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಜವಾಬ್ದಾರಿ ಹೊತ್ತಿದ್ದರೂ, ವಾಸ್ತವದಲ್ಲಿ ಅಂಬಿ ಮಂಡ್ಯ ತಾಲ್ಲೂಕನ್ನು ಬಿಟ್ಟು ಕದಲಿರಲಿಲ್ಲ. ಆದರೆ ಅಂಬರೀಷ್‌ರ ಎಡವಟ್ಟುಗಳಿಂದ ಕಾಂಗ್ರೆಸ್ಸು ಹಿಂದಿಗಿಂತ ಕಡಿಮೆ ಸ್ಥಾನಗಳನ್ನು ಗಳಿಸಿತು.

ಅಂಬಿ ಚೇಲಾ ಹನಕೆರೆ ಶಶಿಯ ಹೆಂಡತಿಯನ್ನು ಬೂದನೂರು ಜಿಪಂ ಕ್ಯಾಂಡಿಡೇಟ್ ಅಂತ ಘೋಷಿಸಿ ಆಕೆಗೆ ಬಿ ಫಾರಂ ನೀಡಲಾಗಿತ್ತು. ಆದರೆ ಆಕೆ ಕೊನೆಗೆ ಬಿ ಫಾರಂ ಅನ್ನೇ ಚುನಾವಣಾಧಿಕಾರಿಗಳಿಗೆ ನೀಡಲಿಲ್ಲ. ಶಶಿಗೆ ಎಲ್ಲರೂ ಎಕ್ಕ ಮಕ್ಕ ಉಗಿದಿದ್ದರು. ಆದರೆ ಈ ಪ್ಲಾನ್‌ಅನ್ನು ಮಾಡಿದ್ದು ಸ್ವತಃ ಅಂಬಿಯೇ. ಅಂಬರೀಷ್‌ರ ಹತ್ತಿರದವರು ಈಗ ಹೇಳುತ್ತಿರುವ ಪ್ರಕಾರ ಮುಂದಿನ ವಿಧಾನಸಭೆ ಚುನಾವಣೆಗೆ ಮಂಡ್ಯದಿಂದಲೇ ಸ್ಪರ್ಧಿಸುವ ತಯಾರಿಯ ಭಾಗವಾಗಿಯೇ ಇದನ್ನು ಮಾಡಲಾಯಿತು. ಅಂಬರೀಷ್‌ರ ಮಾಜಿ ಶಿಷ್ಯ ರಂಗಸ್ವಾಮಿ ಹುಡುಗರಿಂದ ಹತನಾದ ಸಾರಾಯಿ ದೊರೆ ನಾಗೇಂದ್ರರ ಹೆಂಡತಿ ವಿದ್ಯಾ ನಾಗೇಂದ್ರ ಗೆಲ್ಲಲೆಂದೇ ಈ ಬಿ ಫಾರಂ ಲೇಟಾಯಿತು ಎಂಬ ನಾಟಕ ನಡೆದದ್ದು.

ಇದಕ್ಕೂ ಅಂಬರೀಷ್ ಮಂಡ್ಯ ಕ್ಷೇತ್ರದಿಂದ ಎಂಎಲ್‌ಎ ಆಗುವ ಕನಸು ಹೊಂದಿರುವುದಕ್ಕೂ ನೇರಾನೇರಾ ಸಂಬಂಧವಿದೆ. ವಿದ್ಯಾ ನಾಗೇಂದ್ರ ಕಳೆದ ಸಾರಿ ಬಿಜೆಪಿಯಿಂದ ಇದೇ ಮಂಡ್ಯ ಕ್ಷೇತ್ರದ ಕ್ಯಾಂಡಿಡೇಟ್ ಆಗಿ ಸ್ಪರ್ಧಿಸಿ ಎರಡನೇ ಸ್ಥಾನ ಗಳಿಸಿದ್ದರು. ಬಿಜೆಪಿಗೆ ಯಾವ ಬೇಸೂ ಇಲ್ಲದ ಮಂಡ್ಯ ಕ್ಷೇತ್ರದಲ್ಲಿ ಎಂಎಲ್‌ಎ ಸೀಟು ಗೆಲ್ಲಬಹುದಾದ ಸಾಧ್ಯತೆ ಏನಾದರೂ ಇದ್ದರೆ ಅದು ವಿದ್ಯಾ ನಾಗೇಂದ್ರರಿಗೆ ಮಾತ್ರವೇ. ಅಂತಹ ವಿದ್ಯಾ ನಾಗೇಂದ್ರ ಜಿಪಂ ಚುನಾವಣೆಗೆ ಸ್ಪರ್ಧಿಸಿ ಹಿಂಬಡ್ತಿ ಪಡೆದಿದ್ದು ಯಾಕೆ ಎಂಬ ಪ್ರಶ್ನೆ ಎಲ್ಲರಿಗೂ ನಿಗೂಢವಾಗಿತ್ತು.

ಪತಿಯ ಹತ್ಯೆ ನಂತರ ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋಗಿದ್ದ ವಿದ್ಯಾ ನಾಗೇಂದ್ರ ಮತ್ತು ಹನಕೆರೆ ಪುಟ್ಟಪ್ಪನ ಫ್ಯಾಮಿಲಿಯು ಅಲ್ಲಿ ತಮಗೆ ಏನೂ ಗಿಟ್ಟುವುದಿಲ್ಲ ಎಂಬ ಕಾರಣಕ್ಕೆ ಒದ್ದಾಡುತ್ತಿದ್ದರು. ತಮ್ಮ ದಿವಂಗತ ಪತಿಯ ಮಾಜಿ ಗಾಡ್‌ಫಾದರ್ ಅಂಬರೀಷ್‌ರನ್ನು ಸಂಪರ್ಕ ಮಾಡಿದರು. ಹೇಗೂ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೊಂದು ಕ್ಯಾಂಡಿಡೇಟ್ ದಿಕ್ಕಿರಲಿಲ್ಲ. ಜಿಲ್ಲಾ ಕಾಂಗ್ರೆಸ್‌ನ ಹೊಸ ಅಧ್ಯಕ್ಷ ಆತ್ಮಾನಂದ ಎಂಬ ಮಾಸು-ಬೇಸು ಎರಡೂ ಇಲ್ಲದ ವ್ಯಕ್ತಿ ಎಂಎಲ್‌ಎ ಟಿಕೆಟ್ ಕೇಳಲೂ ಆಗದ ಸ್ಥಿತಿಯಲ್ಲಿ ಇದ್ದಾರೆ. ಕಳೆದ ಸಾರಿಯ ಕ್ಯಾಂಡಿಡೇಟ್ ಎಚ್.ಬಿ.ರಾಮು ಎಲ್ಲಾ ರೀತಿಯಲ್ಲೂ ಸ್ಕ್ರಾಪ್ ಆಗಿ ಓವರ್ ಡ್ರಿಂಕ್ ಕ್ಯಾಂಡಿಡೇಟ್ ಆಗಿದ್ದಾರೆ. ಹೀಗಾಗಿ ವಾಪಸ್ಸು ಕಾಂಗ್ರೆಸ್‌ಗೇ ಹೋದರೆ ಒಳ್ಳೆಯದು ಎಂಬುದು ವಿದ್ಯಾ ನಾಗೇಂದ್ರರ ಫ್ಯಾಮಿಲಿಯ ಲೆಕ್ಕಾಚಾರವಾಗಿತ್ತು.

ಆದರೆ ಅಂಬರೀಷ್ ಲೆಕ್ಕಾಚಾರವೇ ಮತ್ತೊಂದಿತ್ತು. ಅದು ಸ್ವತಃ ತಾನೇ ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಅಭ್ಯರ್ಥಿಯಾಗುವುದು. ಹಳೆಯ ಗೆಳೆತನವಾದ್ದರಿಂದ ಮಾತುಕತೆ ನಡೆದು ಒಪ್ಪಂದ ಕುದುರಿತು. ಅದರಂತೆ ವಿದ್ಯಮ್ಮ ಈ ಸಾರಿ ಜಿಲ್ಲಾ ಪಂಚಾಯತಿಗೆ ಬಿಜೆಪಿಯಿಂದಲೇ ಸ್ಪರ್ಧಿಸುವುದು, ಮೀಸಲಾತಿ ವರ್ಕ್‌ಔಟ್ ಆದರೆ ಜಿಲ್ಲಾ ಪಂಚಾಯತಿಯ ಅಧ್ಯಕ್ಷೆಯಾಗುವುದು, ಅದಕ್ಕೆ ಜಿಲ್ಲೆಯಲ್ಲಿ ಸಮಾನ ಶತ್ರುವಾದ ಜೆಡಿಎಸ್‌ಅನ್ನು ದೂರ ಇಡುವ ಕಾರಣ ಹೇಳಿ ಕಾಂಗ್ರೆಸ್‌ನಿಂದ ಬೆಂಬಲವನ್ನು ಅಂಬಿ ಕೊಡಿಸುವುದು, ಇದಕ್ಕೆ ಪ್ರತಿಯಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅಂಬರೀಷ್ ಮಂಡ್ಯ ಕ್ಷೇತ್ರದಿಂದಲೇ ಸ್ಪರ್ಧಿಸಿದಾಗ ಅದಕ್ಕೆ ನಾಗೇಂದ್ರ ಫ್ಯಾಮಿಲಿ ಸಂಪೂರ್ಣ ಬೆಂಬಲ ಕೊಡುವುದು. ಅಂಬರೀಷ್ ಕ್ಯಾಂಡಿಡೇಟ್ ಆಗದಿದ್ದರೆ ಮಾತ್ರ ಬಿಜೆಪಿಯಿಂದ ವಿದ್ಯಾ ಅಥವಾ ಆಕೆಯ ಮೈದುನ ಮಹೇಶ್ ನಿಲ್ಲುವುದು ಎಂಬುದೇ ಒಪ್ಪಂದದ ಕಂಡೀಷನ್ಸ್. ಜಿಪಂ ಸ್ಥಾನ ಈ ಫ್ಯಾಮಿಲಿಗೆ ಗಟ್ಟಿಯಾಗಲೆಂದೇ ಅಂಬರೀಷ್ ಹನಕೆರೆ ಶಶಿಗೆ ಹೇಳಿ ಕಾಂಗ್ರೆಸ್‌ನಿಂದ ಕೊಡಿಸುವ ಬಿ ಫಾರಂ ಅನ್ನು ನಿನ್ನ ಹೆಂಡತಿಯ ಕೈಲಿ ಹಾಕಿಸಬೇಡ ಎಂದು ಹೇಳಿದ್ದು.

ಆದರೆ ಒಪ್ಪಂದವನ್ನು ಸಾರಾಸಗಟಾಗಿ ಸೋಲಿಸಿದ್ದು ಮಾತ್ರ ಬೂದನೂರು ಜಿಲ್ಲಾ ಪಂಚಾಯ್ತಿ ಮತದಾರರು. ಅದೇ ಹನಕೆರೆಯ ಶಾಸಕ ಎಂ.ಶ್ರೀನಿವಾಸ್ ಬೆಂಬಲಕ್ಕೆ ನಿಂತ ಮತದಾರರು ಜೆಡಿಎಸ್ ಅಭ್ಯರ್ಥಿ ಕೋಮಲಾ ಸ್ವಾಮಿಯನ್ನು ಜಿಪಂ ಸದಸ್ಯೆಯನ್ನಾಗಿ ಮಾಡಿದರು. ಇಡೀ ಮಂಡ್ಯ ತಾಲೂಕಿನ ಜಿಪಂ ಮತ್ತು ತಾಪಂ ಎರಡರಲ್ಲೂ ಜೆಡಿಎಸ್ ಪಾರಮ್ಯ ಮೆರೆಯಿತು.


ಆದರೂ ಅಂಬರೀಷ್‌ರ ಎಂಎಲ್‌ಎ ಆಸೆಯೇನೂ ಕಮರಿಲ್ಲ. ಅದಕ್ಕಾಗಿ ತಾನು ಹಿಂದಿನಂತೆಯೇ 11 ಗಂಟೆಗೆ ಎದ್ದು, ಮಂಡ್ಯದ ಹೊರವಲಯದ ಅಮರಾವತಿ ಹೋಟೆಲ್‌ಗೆ ಬಂದು ಕ್ಯಾಂಪ್ ಮಾಡಿ ಸೀದಾ ಮೈಸೂರಿಗೆ ಹೋದರೆ ಎಂಎಲ್‌ಎ ಆಗುವುದು ಸಾಧ್ಯವಿಲ್ಲ ಎಂದು ಕಂಡುಕೊಂಡಿದ್ದಾರೆ. ಬಹುಶಃ ಎರಡು ಸತತ ಸೋಲುಗಳು ಅಂಬಿಗೆ ಕಲಿಸಿರುವ ರಾಜಕೀಯ ಪಾಠ ಇದಾಗಿದೆ. ಹಾಗಾಗಿಯೇ ಅವರ ನಡೆ-ನುಡಿ ಎರಡರಲ್ಲಿಯೂ ಬದಲಾವಣೆ ಎದ್ದು ಕಾಣುತ್ತಿದೆ.

ಈಗೀಗ ಮೈಸೂರಿಗೆ ಟ್ರಿಪ್‌ಗಾಗಲೀ, ಜೂಜಿಗಾಗಲೀ ಹೋಗುವಾಗಲೆಲ್ಲಾ ಹನಕೆರೆ, ಬೂದನೂರು, ಶ್ರೀನಿವಾಸಪುರ ಮುಂತಾದ ಮಂಡ್ಯ ಕ್ಷೇತ್ರದ ಹಲವು ರಸ್ತೆ ಬದಿಯ ಹಳ್ಳಿಗಳಲ್ಲಿ ತಾನೇ ನಿಂತು ಜನರನ್ನು ಬಲವಂತವಾಗಿಯಾದರೂ ಮಾತನಾಡಿಸುತ್ತಿದ್ದಾರೆ. ಹೋಟೆಲ್‌ಗಳಿಗೆ ನೇರವಾಗಿ ಒಳಗೆ ಹೋಗಿ, ಸಿಕ್ಕವರಿಗೆ ವಿಷ್ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ನಡೆಯುವ ಯಾವ ಕಾರ್ಯಕ್ರಮಕ್ಕೆ ಕರೆದರೂ ತಪ್ಪಿಸದೆ ಹೋಗುತ್ತಿದ್ದಾರೆ. ಹಿಂದಿನಂತೆ ಸಿಕ್ಕವರನ್ನೆಲ್ಲಾ ಅಡ್ಡಾದಿಡ್ಡಿ ಮಾತನಾಡಿಸುವುದು, ಎಲ್ಲರನ್ನೂ ಏಕವಚನದಲ್ಲಿ ಕರೆಯುವುದನ್ನು ಮಾಡುತ್ತಿಲ್ಲ. ಅಂಬಿಯ ಈ ಎಲ್ಲಾ ಚಟುವಟಿಕೆಗಳು ಮುಂದಿನ ಚುನಾವಣೆಗೆ ತಯಾರಿಯಂತೆ ಕಾಣುತ್ತಿದೆ. ಚನ್ನಪಟ್ಟಣದ ಉಪಚುನಾವಣೆಗೆ ಖುದ್ದು ಎಚ್.ಡಿ. ಕುಮಾರಸ್ವಾಮಿಯೇ ಆಹ್ವಾನ ವಿತ್ತರೂ ಒಪ್ಪದೆ ಕಾಂಗ್ರೆಸ್‌ನಲ್ಲೇ ಉಳಿದಿರುವುದರ ಗುಟ್ಟು ಮಂಡ್ಯದಲ್ಲಿ ಓಡಾಡುತ್ತಿರುವುದರಲ್ಲಿ ಅಡಗಿದೆ. •

ಇಲ್ಲೊಬ್ಬನಿದ್ದಾನೆ ಸ್ವಿಚ್‌ಆಫ್ ಗೌಡನೆಂಬ ಎಮ್ಮೆಲ್ಲೆ!

ಇದೇನು ಮೊಬೈಲ್ ಕಂಪೆನಿಗಳ ಹೊಸ ಆಫರ್‌ನ ಹೆಸರು ಎಂದುಕೊಂಡಿರಾ? ಕ್ಷಮಿಸಿ, ಇದು ಅದಲ್ಲ. ಬದಲಿಗೆ ಮಂಡ್ಯ ಜಿಲ್ಲೆಯ ನಾಗಮಂಗಲ ಕ್ಷೇತ್ರದ ಶಾಸಕನಿಗೆ ಜನರೇ ಹೊಸದಾಗಿ ನೀಡಿರುವ ಬಿರುದು!

ಆ ಎಮ್ಮೆಲ್ಲೆ ಕೆ.ಸುರೇಶ್ ಗೌಡ. ಈ ಶಾಸಕನಿಗೆ ಈ ನಾಮಧೇಯ ಬಂದಿದ್ದಾದರೂ ಯಾಕೆ ಎಂದು ನೋಡಿದರೆ ಆತ ಜನರಿಗೆ ಸಿಗುತ್ತಿಲ್ಲವಂತೆ, ಯಾವತ್ತೂ ನಾಗಮಂಗಲದಲ್ಲಿ ಉಳಿಯುತ್ತಿಲ್ಲವಂತೆ, ಅಭಿವೃದ್ಧಿ ಅಂತ ಏನೂ ನಡೀತಾ ಇಲ್ಲಂತೆ. ಯಾವಾಗಲೂ ರಿಯಲ್ ಎಸ್ಟೇಟ್ ದಂಧೆಯಲ್ಲೇ ಬಿಜಿಯಂತೆ. ಕನಿಷ್ಠ ಪಕ್ಷ ತನ್ನ ಚೇಲಾಗಳಿಗೂ, ಕಾಂಗ್ರೆಸ ಪುಢಾರಿಗಳಿಗೂ ಈ ಶಾಸಕ ಸಿಗುತ್ತಿಲ್ಲವಂತೆ. ದಿನದ 24 ಗಂಟೆಯೂ ಸುರೇಶ್ ಗೌಡರ ಮೊಬೈಲ್ ಸ್ವಿಚ್‌ಆಫ್ ಆಗಿರುತ್ತಂತೆ. ಇದನ್ನೆಲ್ಲಾ ನೋಡಿದ ನಾಗಮಂಗಲದ ಜನರು "ಈ ವಯ್ಯನನ್ನು ಸುರೇಶ್ ಗೌಡ ಎಂಬ ಬದಲು ಸ್ವಿಚ್‌ಆಫ್ ಗೌಡ ಎಂದರೆ ಸೂಕ್ತ" ಎಂದು ಹೀಗೆ ನಾಮಕರಣ ಮಾಡಿದ್ದಾರಂತೆ.




ಕೆ. ಸುರೇಶ್‌ಗೌಡ

ಸುರೇಶ್‌ಗೌಡ ಹೀಗೆ ಜನರಿಂದ ಎಸ್ಕೇಪ್ ಆಗಿರುವುದಕ್ಕೆ ಇರುವ ಕಾರಣವೇ ಬೇರೆ ಎಂದು ಅವರ ಆಪ್ತರು ಹೇಳುತ್ತಾರೆ. "ರಿಯಲ್ ಎಸ್ಟೇಟೆಲ್ಲಾ ಎಲ್ಲಿ ನಡೆಯಬೇಕು ಸಾರ್? ಎಲ್ಲ ಫುಲ್ ಡಲ್ಲು. ನಮ್ಮ ಸಾಹೇಬರಿಗೆ ನಾಗಮಂಗಲದ ಜನರನ್ನು ಮೈಂಟೇನ್ ಮಾಡಲಾಗದೇ ಸುಸ್ತಾಗಿದ್ದಾರೆ" ಎನ್ನುವುದು ಅವರ ಅಂಬೋಣ.

ಈ ಹಿಂದೆ ಎಲ್.ಆರ್.ಶಿವರಾಮೇಗೌಡ ಮತ್ತು ಚೆಲುವರಾಯಸ್ವಾಮಿಗಳೆಂಬ ಗೂಳಿಗಳಿಬ್ಬರು ಜನರನ್ನು ಮೈಂಟೇನ್ ಮಾಡುತ್ತಿದ್ದ ಸ್ಟೈಲಿಗೂ ಸುರೇಶ್ ಗೌಡನ ಸ್ಟೈಲಿಗೂ ವ್ಯತ್ಯಾಸವಿದೆ. ಎಲ್ಲಾರೆಸ್, ಸಿಆರೆಸ್‌ಗಳೇನಿದ್ದರೂ ಜನರಿಗೆ ರಾಜಕೀಯದ ಹೆಂಡ ಕುಡಿಸಿ ಪರಸ್ಪರ ಎತ್ತಿಕಟ್ಟಿ ಕಿತ್ತಾಡಿಸುತ್ತಿದ್ದರು. ಅದೇ ರಾಮರಸ ಕುಡಿದಂತಾಗಿ ಜನರು ತಮ್ಮ ನಾಯಕರಿಗೆ ನಿಷ್ಠರಾಗಿರುತ್ತಿದ್ದರು. ಹೆಚ್ಚೆಂದರೆ ಬಾಡೂಟ, ಇನ್ನೂ ಕೇಳಿದರೆ ನಂಗಾನಾಚ್... ಅಲ್ಲಿಗೆ ಇವರ ಹಿಂದಿನ ಜನ ಖಲಾಸ್. ಆದರೆ ಸುರೇಶ್ ಗೌಡ ನಾಗಮಂಗಲದ ಎಂಎಲ್‌ಎ ಕ್ಷೇತ್ರದ ಮೇಲೆ ಕಣ್ಣಿಟ್ಟು ಬಂದಾಗಲೇ ಕಟ್‌ಔಟ್ ರಾಜಕೀಯ ಇಲ್ಲಿ ಕಾಣಿಸಿಕೊಂಡಿದ್ದು. ಅಭಿಮಾನಿಗಳ ಹೆಸರಿನಲ್ಲಿ ಕಟೌಟ್‌ಗಳು ನಾಗಮಂಗಲಕ್ಕೆ ದೊಡ್ಡ ಮಟ್ಟದಲ್ಲಿ ಪ್ರವೇಶ ಮಾಡಿದ್ದೇ ಸುರೇಶ್ ಗೌಡನಿಂದ.

ನಾಗಮಂಗಲ ಕ್ಷೇತ್ರಕ್ಕೆ ಮದ್ದೂರು ತಾಲೂಕಿನ ಕೊಪ್ಪ ಹೋಬಳಿ ಸೇರಿಕೊಂಡ ಮೇಲೆ ಇಲ್ಲೂ ಕಟೌಟ್ ಅಭಿಮಾನಿಗಳು ಹುಟ್ಟಿಕೊಂಡಿದ್ದಾರೆ. ಅಪ್ಪು ಹಿ.ಗೌಡನೆಂಬ ರಾಬರಿ ಗಿರಾಕಿಯೊಬ್ಬ ದಿನಬೆಳಗಾದರೆ ಮದ್ದೂರಿನ ರಸ್ತೆಗೆ ತನ್ನ ಮತ್ತು ಸುರೇಶ್‌ಗೌಡನ ಫೋಟೋ ಲಗತ್ತಿಸಿ ಕಟೌಟ್ ಕಟ್ಟಲು ಶುರು ಮಾಡುತ್ತಾನೆ. ಇಂಥ ರಾಬರಿ ಅಭಿಮಾನಿಗಳು ಕ್ಷೇತ್ರದ ತುಂಬೆಲ್ಲಾ ಎದ್ದು ನಿಂತಿದ್ದರಿಂದ ಗೌಡ ಸ್ವಿಚ್ ಆಫ್ ಮಾಡದೇ ಇನ್ನೇನು ಮಾಡಿಯಾರು? •




ಬೆನ್ನೆಲುಬನ್ನು ಇಂದ್ರಾಯುಧದಂತೆ ಧರಿಸಿಕೊಂಡು....

• ಬಿ.ಎಂ.ಬಶೀರ್

ನನ್ನಜ್ಜನಜ್ಜನಜ್ಜನನ್ನು ಖಡ್ಗದಿಂದ
ಮತಾಂತರಗೊಳಿಸಿದರು!
ನನ್ನಜ್ಜನಜ್ಜನಜ್ಜ ತನ್ನ ಕೇರಿಗೆ ಮಹಾರಾಜನಾಗಿದ್ದ
ಪೇಜಾವರ ಶ್ರೀಗಳು ಅವನ ತಲೆಗೆ ಹೇಲಿನ ಬುಟ್ಟಿಯ
ಕಿರೀಟವನ್ನಿಟ್ಟು ಪಟ್ಟಾಭಿಷೇಕ ಮಾಡಿದ್ದರು
ಸರ್ವಾಲಂಕಾರ ಭೂಷಿತನಾಗಿದ್ದ ನನ್ನಜ್ಜನಜ್ಜನಜ್ಜನ
ಕೈಕಾಲುಗಳನ್ನು ಫಳಫಳನೆ ಮಿಂಚುವ ಸರಪಳಿಗಳಿಂದ
ಅಲಂಕರಿಸಲಾಗಿತ್ತು
ಅವನ ಬೆಲೆಬಾಳುವ ಕೈಕಡಗಗಳನ್ನು ನೀವು ನೋಡಬೇಕಾಗಿತ್ತು?
ಯಾವ ಸುತ್ತಿಗೆಯೂ ಭೇದಿಸಲರಿಯದ
ಆ ಕೋಳಗಳು ನನ್ನಜ್ಜನಜ್ಜನಜ್ಜನನ್ನು
ಹಾವಿನಂತೆ ಸುತ್ತಿಕೊಂಡಿದ್ದರೆ
ಆತ ನಂಜುಂಡನಂತೆ ಕಣ್ಮುಚ್ಚಿ ಕುಣಿಯುತ್ತಿದ್ದನಂತೆ...
ರಾಜರಿಗೆ ರಾಜನಾಗಿದ್ದ ನನ್ನಜ್ಜನಜ್ಜನಜ್ಜನಿಗೆ
ಉಣ್ಣುವುದಕ್ಕೆ ಪ್ರತ್ಯೇಕ ತಟ್ಟೆ,
ಹರಡಿ ನಿಂತ ಆಕಾಶದಂತಿರುವ
ವಿಶಾಲ ಎದೆಗೆ ಹೊದಿಸುವುದಾದರೂ ಹೇಗೆ ಬಟ್ಟೆ?
ಅವನಿಗೂ ಒಂದು ಸಮಸ್ಯೆಯಿತ್ತು
ಆನೆಯ ಸೊಂಡಿಲಿನಂತಹ ಆತನ ತೋಳು
ಸಿಗುರಿ ನಿಲ್ಲುವ ಮಾಂಸಖಂಡಗಳು...
ಅವನ್ನೆಲ್ಲ ಕಷ್ಟದಿಂದ ಅದುಮಿಟ್ಟು
ಅವನು ನಡುಬಾಗಿ ನಿಂತರೆ
ಅದೆಂತಹ ನಯ...ವಿನಯ...ರಾಜಕಳೆ!
ತೂಗಿದಂತೆ ಬಾಳೆ...ವಿಲಕ್ಕಿ ಬೆಳೆ!
ಆದರೂ ಅವನ ಮುಟ್ಟಲು ಅವರೆಲ್ಲರಿಗೂ ಭಯ
ಯಾಕೆಂದರೆ ರಾಜರ ರಾಜನಾದ ನನ್ನಜ್ಜನಜ್ಜನಜ್ಜನಿಗೆ
ಪೇಜಾವರಶ್ರೀಗಳು ನೀಡಿದ್ದರು ಅಭಯ!
ಇಂತಹ ಅವನನ್ನು ಖಡ್ಗದ ಮೊನೆಯಿಂದ
ಮತಾಂತರಗೊಳಿಸಿ ಬಿಟ್ಟರು!
ಅವರು ಎಲ್ಲಿಂದ ಬಂದರು?
ಹಿಮಾಲಯವನ್ನು ಕೊರೆದು ಬಂದರೋ...
ಅರಬೀ ಸಮುದ್ರದ ಅಲೆಗಳನ್ನು ಹೆಡೆಮುರಿ ಕಟ್ಟಿ ಬಂದರೋ...
ಅಥವಾ ಹಿಂದೂಸ್ತಾನವೆನ್ನುವ
ಈ ಖಂಡದ ತೊಡೆಯನ್ನು ತುಂಡರಿಸಿ ಬಂದರೋ
ಹರಡಿನಿಂತ ಮರುಭೂಮಿಯ ಎದೆಯನ್ನು ಸೀಳಿ ಬಂದರೋ?
ಅಂತೂ ಅವರು ನನ್ನಜ್ಜನಜ್ಜನಜ್ಜನ ಕೇರಿಯನ್ನೇ
ಹುಡುಕಿಕೊಂಡು ಬಂದರು...
ಅವರ ಖಡ್ಗದ ಒಂದೇ ಏಟಿಗೆ
ಆತನ ತಲೆಯ ಮೇಲೆ ರಾರಾಜಿಸುತ್ತಿದ್ದ
ಕಿರೀಟ ಮುರಿದು ಬಿತ್ತು
ಅವನ ಶೃಂಗರಿಸಿದ್ದ ಆಭರಣಗಳ ಕಡಿದೆಸೆದರು
ಒಂದೊಂದು ಬೀಸಿಗೆ ನಯ-ವಿನಯಗಳ
ರುಂಡಮುಂಡಗಳು ಬೇರ್ಪಟ್ಟವು
ತಲೆತಲಾಂತರಗಳಿಂದ ಅವನ ಆಸ್ತಿಯಾಗಿದ್ದ
ಆ ತಟ್ಟೆಯನ್ನೇ ಸೀಳಿದರು...
ಕಪ್ಪುಮೋಡಗಳು ದಟ್ಟೈಸಿದ್ದ ಅವನ ವಿಶಾಲ
ಎದೆಯ ಮೇಲೆ
ಆ ಖಡ್ಗ ಕೋಲ್ಮಿಂಚಿನಂತೆ ಎರಗಿತು
ರಕ್ತ ಮಳೆಯಂತೆ ಭೋರ್ಗರೆಯಿತು
ನನ್ನಜ್ಜನಜ್ಜನಜ್ಜನದೋ ದೊಡ್ಡ ಸೈನ್ಯ
ತಲೆತಲಾಂತರಗಳಿಂದ ಪೇಜಾವರ ಶ್ರೀಗಳ
ಉಪ್ಪುಂಡು ಬೆಳೆದ ದಂಡು!
ಅಷ್ಟು ಸುಲಭದಲ್ಲಿ ಸೋಲೊಪ್ಪುವವನಲ್ಲ ಆತ
ಗಂಗಾನದಿಯಂತೆ ಹರಿದವು ಕೇರಿ ತುಂಬಾ ರಕ್ತ
ಆತ ತನ್ನ ಮೌನದ ತಿಜೋರಿಯಲ್ಲಿ
ಮಾತುಗಳೆಂಬ ಮುತ್ತು ರತ್ನಗಳನ್ನು ಭದ್ರವಾಗಿಟ್ಟಿದ್ದ!
ಅದರ ಕೀಲಿಕೈಯನ್ನು ಜೋಪಾನವಾಗಿ
ಪೇಜಾವರಶ್ರೀಗಳ ಕೈಗೆ ಒಪ್ಪಿಸಿದ್ದ!
ಖಡ್ಗ ಹಿರಿದು ಬಂದವರೋ ಕ್ರೂರಿಗಳು
ಆ ತಿಜೋರಿಯನ್ನು ಒಡೆದರು
ಯಾವ ಶಬ್ದಗಳೂ ಒಳಸಾಗದಂತೆ ತಡೆದಿದ್ದ
ಕಿವಿ ತಮಟೆಯನ್ನು ಹರಿದರು!!
ಎಲ್ಲಕ್ಕಿಂತ ದೊಡ್ಡ ದುರಂತವೊಂದು ನಡೆದು ಹೋಯಿತು
ಅವರು ನನ್ನಜ್ಜನಜ್ಜನಜ್ಜನನ್ನು ಮುಟ್ಟಿ ಬಿಟ್ಟರು!
ನಾಡು-ಕೇರಿ ಒಂದಾಗಿ ಬಿಟ್ಟಿತ್ತು
ರಾಜಪದವಿಯ ಏರಿ ಕುಳಿತಿದ್ದ ಆತ
ಒಮ್ಮೆಲೆ ಬೀದಿಗೆ ಬಿದ್ದಿದ್ದ
ನನ್ನಜ್ಜನಜ್ಜನಜ್ಜ ಸಾಮಾನ್ಯ ಮನುಷ್ಯನಾಗಿ ಬಿಟ್ಟಿದ್ದ!
ಅಯ್ಯೋ! ಆತನನ್ನು ಖಡ್ಗದ ಮೊನೆಯಿಂದ
ಮನುಷ್ಯನಾಗಿ ಮತಾಂತರಗೊಳಿಸಿ ಬಿಟ್ಟರು!
ಆ ದುರಂತದ ನೆನಪಿಗಾಗಿ...
ಕೇರಿಯಲ್ಲಿ ಗಂಗಾನದಿಯಂತೆ ಹರಿಯುತ್ತಿದ್ದ
ರಕ್ತದಿಂದ ಆ ಖಡ್ಗವನ್ನು ಶುಚಿಗೊಳಿಸಿ
ನನ್ನಜ್ಜ ಜೋಪಾನವಾಗಿಟ್ಟುಕೊಂಡ
ತಲೆತಲಾಂತರಗಳಿಂದ ಬಂದ ಆ ಖಡ್ಗ
ಇದೀಗ ನನ್ನ ಪಿತ್ರಾರ್ಜಿತ ಆಸ್ತಿ
ಬೆನ್ನೆಲುಬಿನಂತೆ....
ಬೆನ್ನ ಹಿಂದೆ ಧರಿಸಿಕೊಂಡಿದ್ದೇನೆ
ಸುದ್ದಿ ಬಂದಿದೆ...
ಪೇಜಾವರ ಶ್ರೀಗಳು ಮತ್ತೆ
ನನ್ನಜ್ಜನಜ್ಜನಜ್ಜನ ಕಿರೀಟದೊಂದಿಗೆ
ನನ್ನ ಪಟ್ಟಾಭಿಷೇಕಕ್ಕೆ ಬರುತ್ತಿದ್ದಾರೆ...
ಕಳೆದುಕೊಂಡ ನನ್ನ ಕೇರಿಯನ್ನು ನನಗೆ
ಮರಳಿಸಲು ಬಯಸಿದ್ದಾರೆ...
ನನ್ನ ಬೆನ್ನೆಲುಬನ್ನು ಇಂದ್ರಾಯುಧದಂತೆ
ಕೈಯಲ್ಲಿ ಧರಿಸಿಕೊಂಡು ಕಾಯುತ್ತಿದ್ದೇನೆ ನಾನು...
ಅವರ ಬರವಿಗಾಗಿ...!!

1981ರಲ್ಲಿ ಲಂಕೇಶ್ ಪತ್ರಿಕೆಯಲ್ಲಿ ನನ್ನ ಪ್ರಥಮ ಲೇಖನ ಪ್ರಕಟವಾದ ಕೆಲವೇ ದಿನಗಳಲ್ಲಿ ಪತ್ರಿಕೆಗಳಲ್ಲಿ ಮತ್ತೊಂದು ಸುದ್ದಿ ಪ್ರಕಟವಾಯಿತು. ಬಿಜಾಪುರದಲ್ಲಿ ನಾಜಿಮಾ ಭಾಂಗಿ ಎಂಬ ಅಧ್ಯಾಪಕಿಯೊಬ್ಬರು ಥಿಯೇಟರಿಗೆ ಹೋಗಿ ಸಿನಿಮಾ ನೋಡಿದಳೆಂಬ ಕಾರಣ ವೀಡಿ, ಮುಸ್ಲಿಂ ಮೂಲಭೂತವಾದಿ ಗುಂಪುಗಳು, ಮುಸ್ಲಿಂ ಮಹಿಳೆಯರು ಸಿನಿಮಾ ನೋಡಬಾರದೆಂದು ನಿಷೇಧ ಹೇರಿ ಆಕೆಯ ಮೇಲೆ ಆಕ್ರಮಣ ಮಾಡಿದರು. ಈ ನಿಷೇಧವನ್ನು ಆಕೆ ಪ್ರತಿಭಟಿಸಿದ್ದು ಸುದ್ದಿಯಾಗಿತ್ತು. ಈ ಆಕ್ರಮಣದ ವಿರುದ್ಧ ನಾನು ಮತ್ತು ಭಾನು ಮುಷ್ತಾಕ್ ಖಾರವಾಗಿಯೇ ಲೇಖನ ಬರೆದಿದ್ದೆವು. ಇಸ್ಲಾಂ ಧಾರ್ಮಿಕ ನಿಯಮಗಳು ಸ್ತ್ರೀಪುರುಷರೆಲ್ಲರಿಗೂ ಏಕಪ್ರಕಾರವಾಗಿ ಅನ್ವಯಿಸುತ್ತದೆಯೇ ಹೊರತು ಸ್ತ್ರೀಗೊಂದು ನಿಯಮ, ಪುರುಷರಿಗೊಂದು ನಿಯಮವೆಂಬುದಿಲ್ಲ, ಥಿಯೇಟರಿಗೆ ಪುರುಷರು ಹೋಗ ಬಹುದಾದರೆ ಸ್ತ್ರೀಯರೂ ಹೋಗಬಹುದು ಎಂಬುದು ನನ್ನ ವಾದವಾಗಿತ್ತು.

ಅದಾದ ಕೆಲವು ತಿಂಗಳುಗಳ ಬಳಿಕ ನಾನು ಬಿಜಾಪುರಕ್ಕೆ ಹೋಗುವ ಅವಕಾಶ ದೊರೆತಾಗ ಅವರ ಮನೆಗೆ ಹೋಗಿ ನಾಜಿಮಾ ಭಾಂಗಿಯನ್ನು ಭೇಟಿಯಾಗಿ ಮಾತನಾಡಿಸಿ ಬಂದಿದ್ದೆ. ಆಕೆಗೆ ಮೂವರು ಸಹೋದರಿಯರಿದ್ದು ಯಾರಿಗೂ ಮದುವೆಯಾಗಿರಲಿಲ್ಲ. ಅಂಜುಮಾನ್ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕಿಯಾಗಿದ್ದ ಆಕೆಯನ್ನು ನೌಕರಿಯಿಂದ ಅಮಾನತುಗೊಳಿಸಲಾಗಿತ್ತು. ಆಕೆ ಮಂಕಾಗಿದ್ದು ತುಂಬಾ ದುಃಖದಲ್ಲಿದ್ದಂತೆ ಕಂಡುಬಂದಿದ್ದಳು. ಆಕೆಯ ತಂದೆಯ ಮುಖದಲ್ಲೂ ದುಃಖ ಮಡುಗಟ್ಟಿದಂತಿತ್ತು. ಆ ಕುಟುಂಬವನ್ನು ಕಂಡ ಬಳಿಕ ನಾನು ಭಾರವಾದ ಹೃದಯದಿಂದ ಅಲ್ಲಿಂದ ಹೊರಬಿದ್ದಿದ್ದೆ. ಆಕೆ ವೃತ್ತಿಯಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಿರುವುದಾಗಿ ಆಕೆಯ ತಂದೆ ಹೇಳಿದ್ದರು. ನೌಕರಿಯಲ್ಲಿ ಮುಂದುವರಿದು ಮದುವೆಯಾಗಿ ಆಕೆ ಸುಖವಾಗಿರಬಹುದೆಂದು ನಾನಂದುಕೊಂಡಿದ್ದು ನಾನಾಕೆಯನ್ನು ಮರೆತೇ ಬಿಟ್ಟಿದ್ದೆ ಎಂದರೂ ತಪ್ಪಾಗದು.



ಬುರ್ಖಾದಲ್ಲಿ ಬಂಧಿಯಾದ ಸ್ತ್ರೀಸ್ವಾತಂತ್ರ್ಯ

• ಸಾರಾ ಅಬೂಬಕ್ಕರ್

ಇದೇ ಫೆಬ್ರವರಿ ತಿಂಗಳಲ್ಲಿ ಮಹಿಳಾ ವಿಶ್ವವಿದ್ಯಾಲಯ ನನಗೆ ಗೌರವ ಡಾಕ್ಟರೇಟ್ ನೀಡಲು ನನ್ನನ್ನು ಆಮಂತ್ರಿಸಿದ್ದಕ್ಕಾಗಿ ನಾನು ಬಿಜಾಪುರಕ್ಕೆ ಹೋಗಿದ್ದೆ. ಮುಸ್ಲಿಂ ಹೆಣ್ಣುಮಕ್ಕಳು ಥಿಯೇಟರಿಗೆ ಕಾಲಿಡದಂತೆ ಅವರ ಮೇಲೆ ಆಕ್ರಮಣ ಮಾಡಿದ್ದ ಅದೇ ಊರಿನಲ್ಲಿ ಇಂದು ಹಲವಾರು ಮುಸ್ಲಿಂ ಹೆಣ್ಣುಮಕ್ಕಳು ಚಿನ್ನದ ಪದಕವನ್ನೂ ಪಡೆಯುತ್ತಿರುವುದನ್ನು ಕಂಡು ಸಂತೋಷವಾಗಿತ್ತು. ಆದರೆ ಶಿಕ್ಷಣ ಈ ಜನರ ಮತಾಂಧತೆಯನ್ನು ದೂರ ಮಾಡಿಲ್ಲವೆಂಬುದೂ ಕಂಡುಬಂದಿತು. ಕಾಲೇಜಿಗೆ ಬಂದ ಮೇಲೂ, ಹೆಣ್ಣುಮಕ್ಕಳು ಮಾತ್ರವಿರುವ ತರಗತಿಗಳಲ್ಲಿ ಕೂಡಾ ಬುರ್ಖಾ ಧರಿಸುವುದು ಮಾತ್ರವಲ್ಲ, ಕಣ್ಣು, ಮೂಗುಗಳಿಗೂ ಬಟ್ಟೆ ಕಟ್ಟಿಕೊಳ್ಳುವುದನ್ನು ಕಂಡೆ. ಅದೇ ಎಂದಿನಂತೆ ಒಂದು ಹೆಜ್ಜೆ ಮುಂದಿಟ್ಟರೆ ಎರಡು ಹೆಜ್ಜೆ ಹಿಂದಕ್ಕೆಳೆಯುವಂತಹ ಅದೇ ಪರಿಸ್ಥಿತಿ ಮುಂದುವರಿಯುತ್ತಿದೆ.

ಸಾಯಂಕಾಲ ಕುಲಪತಿಗಳು ಪದಕ ವಿಜೇತರಿಗೆ ನೀಡಿದ ಚಹಾಕೂಟದಲ್ಲಿ ಭಾಗವಹಿಸುತ್ತಿದ್ದಾಗ ಮೂವತ್ತು ವರ್ಷಗಳ ಹಿಂದೆ ಅಧ್ಯಾಪಕಿಯೊಬ್ಬಳ ಮೇಲೆ ನಡೆದ ದೌರ್ಜನ್ಯದ ಘಟನೆಯನ್ನೆತ್ತಿ ನಾಜಿಮಾ ಭಾಂಗಿಯ ಕುರಿತು ವಿಚಾರಿಸಿದೆ. ಆಗ ತಿಳಿದ ವಿಷಯದಿಂದ ನನಗೆ ಒಂದುರೀತಿ ಆಘಾತ ವಾಯಿತೆಂದೇ ಹೇಳಬಹುದು.

ನಾಜಿಮಾ ಭಾಂಗಿ ಥಿಯೇಟರಿಗೆ ಹೋಗಿ ಸಿನಿಮಾ ನೋಡಿದಳು; ಅದನ್ನು ನಿಷೇಧಿಸಿದಾಗ ಪ್ರತಿಭಟಿಸಿದಳೆಂಬ ಕಾರಣಕ್ಕಾಗಿ ಅಂಜುಮಾನ್ ಶಿಕ್ಷಣ ಸಂಸ್ಥೆ ಆಕೆಯನ್ನು ನೌಕರಿಯಿಂದ ವಜಾಗೊಳಿಸಿತ್ತು. ನೌಕರಿ ಕೈ ಜಾರಿದಾಗ ಅದು ಎಂತಹ ಆಘಾತವಾಗಬಹುದೆಂದು ಅಲ್ಲಿದ್ದ ಉಪನ್ಯಾಸಕಿಯೊಬ್ಬರೆಂದರು. ಈ ಆಘಾತವನ್ನು ತಡೆದುಕೊಳ್ಳಲಾಗದ ನಾಜಿಮಾ ತುಂಬಾ ಮಂಕಾಗಿದ್ದು ನಿಧಾನವಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡು 'ಹುಚ್ಚಿ' ಎಂಬ ಹೆಸರು ಪಡೆದುಕೊಂಡಳು! ಈಗ ಆ ಮನೆಯಲ್ಲಿ ಆಕೆಯೊಬ್ಬಳೇ ವಾಸವಾಗಿದ್ದು ಆಕೆ ದೈಹಿಕವಾಗಿಯೂ, ಮಾನಸಿಕವಾಗಿಯೂ ಬಹಳ ದುರ್ಬಲಳಾಗಿದ್ದಳು. ಬರೇ ಒಂದು ನೈಟಿ ಹಾಕಿಕೊಂಡು ಒಬ್ಬಳೇ ಏನನ್ನೋ ಗುಣಗುಣಿಸುತ್ತಾ ಕೈಯಲ್ಲಿ ಯಾವುದೋ ಸಂಜ್ಞೆ ಮಾಡುತ್ತಾ ನೆಟ್ಟಗೆ ನಡೆಯುತ್ತಾ ಬೀದಿಯ ಕೊನೆಯವರೆಗೂ ಹೋಗಿ ಹಾಗೆಯೇ ಹಿಂತಿರುಗುತ್ತಿದ್ದಳು. ದಿನಕ್ಕೆ ಒಂದೆರಡು ಬಾರಿ ಹೀಗೆ ಓಡಾಡುತ್ತಾಳೆ. ಊರಿನ ಮುಸ್ಲಿಂ ಸಮಾಜ ಬಹುಶಃ ಆಕೆಗೆ ಯಾವ ನೆರವನ್ನೂ ನೀಡದೆ ಆಕೆಯನ್ನು ಸಂಪೂರ್ಣವಾಗಿ ಕಡೆಗಣಿಸಿರಬಹುದು. ಸಮಾಜದ ಪುರುಷರು ಧರ್ಮದ ಹೆಸರಿನಲ್ಲಿ ರೂಪಿಸಿದ ನಿಯಮವನ್ನು ಪಾಲಿಸದಿದ್ದರೆ ಅಥವಾ ನಿಯಮವನ್ನು ಉಲ್ಲಂಘಿಸಿದರೆ ಅಂತಹವರಿಗೂ ಇದೇ ಗತಿಯಾಗಬಹುದು; ಆಕೆಯನ್ನು ನೋಡಿ ಎಲ್ಲ ಹೆಣ್ಣುಮಕ್ಕಳೂ ಪಾಠ ಕಲಿಯಬೇಕು ಎಂಬುದು ಮೂಲಭೂತವಾದಿಗಳ ಮನದಿಂಗಿತವಾಗಿರಬಹುದು. ಇಂದು ಇಡೀ ಊರಿನ ಮುಸ್ಲಿಂ ಹೆಣ್ಣು ಮಕ್ಕಳೆಲ್ಲರೂ ಬುರ್ಖಾ ಮಾತ್ರವಲ್ಲದೆ ಕಣ್ಣು ಮೂಗುಗಳಿಗೂ ಬಟ್ಟೆ ಕಟ್ಟಿ ಕೊಂಡೇ ಓಡಾಡುತ್ತಾರೆ. ಪಿತೃ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಎಂತೆಂತಹ ವಿಧಾನಗಳಲ್ಲಿ ನಿಯಂತ್ರಿಸುತ್ತಿದೆಯಲ್ಲಾ ಎನ್ನಿಸಿತು.

ಸ್ತ್ರೀ, ಪುರುಷನ ಮೊತ್ತಮೊದಲ ಸಾಕುಪ್ರಾಣಿ ಎಂದು ವಿದೇಶಿ ಲೇಖಕರೊಬ್ಬರು 19ನೇ ಶತಮಾನದಲ್ಲೇ ಬರೆದಿದ್ದರು. ಆ ಮಾತಿಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಾಗಿದೆಯೇ?

ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರ ಬಾಯಿಯಿಂದಲೇ ಪುರುಷರ ಇಚ್ಛೆಯಂತೆ ಹೇಳಿಕೆ ನೀಡಿಸುವುದನ್ನೂ ಸಾಧ್ಯವಾಗಿಸಿಕೊಂಡಿದೆ. ಕಳೆದ ವರ್ಷ ಮಂಗಳೂರಿನಲ್ಲಿ ಬ್ಯಾರಿ ಅಕಾಡೆಮಿ ಮಹಿಳಾ ಸಮ್ಮೇಳನವನ್ನು ಏರ್ಪಡಿಸಿತ್ತು. ಅಂದಿನ ಸಂವಾದ ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬಳು, ವೇದಿಕೆಯ ಮೇಲಿದ್ದ ಮಹಿಳೆಯರು ಮುಖ ಮುಚ್ಚಿಕೊಂಡಿಲ್ಲವೆಂದು ಅವರನ್ನು ತರಾಟೆಗೆ ತೆಗೆದುಕೊಂಡಳು. (ಹಜ್ ಯಾತ್ರೆಗೆ ಹೋಗುವ ಮಹಿಳೆಯರು ಮುಖ ಮುಚ್ಚಿಕೊಳ್ಳಬಾರದೆಂಬುದು ಕಡ್ಡಾಯ). ಇನ್ನೋರ್ವ ಮಹಿಳೆ ಭಾಷಣ ಮಾಡುತ್ತಾ, ತಲಾಖ್ ಪೀಡಿತ ಮಹಿಳೆ ತನ್ನ ಗಂಡನೊಡನೆ ರಾಜಿ ಮಾಡಿಕೊಳ್ಳಲು ಒಂದು ರಾತ್ರಿಗೆ ಬೇರೊಬ್ಬರನ್ನು ಮದುವೆಯಾಗುವುದು, ಆ ಗಂಡನಿಗೆ ನೀಡುವ ಶಿಕ್ಷೆ ಎಂಬುದನ್ನು ಸಾಬೀತುಪಡಿಸಲು ಪ್ರಯತ್ನಿಸಿದಳು. ಅಲ್ಲಿದ್ದ ಮಹಿಳೆಯರು ಯಾರೂ ಅದನ್ನು ವಿರೋಧಿಸಲಿಲ್ಲ! ತಮ್ಮ ಪುರುಷರು ಅನುಷ್ಠಾನಕ್ಕೆ ತಂದ ಆ ನಿಯಮ ಹೆಣ್ಣಿಗೆ ಎಷ್ಟೊಂದು ಅವಮಾನಕರವೆಂಬುದು ಈ ಮಹಿಳೆಯರಿಗೆ ಅರ್ಥವಾಗಲೇ ಇಲ್ಲವೇ? ಅಥವಾ ಆ ರಾತ್ರಿಯೇ ಆಕೆ ಗರ್ಭಿಣಿಯಾದರೆ ಆ ಮಹಿಳೆಯರ ಭವಿಷ್ಯವೇನು? ಧಾರ್ಮಿಕ ನಿಯಮವೆಂದು ಪುರುಷರು ಮಹಿಳೆಯರ ಮೇಲೆ ಇಂತಹ ನಿಯಮವನ್ನು ಹೇರಿದಾಗ ಅದನ್ನು ವೇದಿಕೆಯಲ್ಲಿ ಸಮರ್ಥಿಸಲೂ ಸಿದ್ಧರಾದ ಈ ಮಹಿಳೆಯರ ಮನೋಭಾವವಾದರೂ ಎಂತಹುದು? ಈ ನಿಯಮದ ಕುರಿತು ನಾನು ನನ್ನ ಆತ್ಮಚರಿತ್ರೆಯಲ್ಲಿ ಇನ್ನೊಂದು ಸತ್ಯ ಘಟನೆಯನ್ನೂ ವಿವರಿಸಿದ್ದೇನೆ.

ಹೌದು, ಸ್ತ್ರೀ ಪುರುಷರ ಸಾಕುಪ್ರಾಣಿ ಎಂಬುದಕ್ಕೆ ಅನುಮಾನವೇ ಇಲ್ಲ. ಅಕಸ್ಮಾತ್ ಮಹಿಳೆಯರು ಆ ಸ್ಥಿತಿಯನ್ನು ಮೀರಲು ಪ್ರಯತ್ನಿಸಿದರೆ 'ಕವಲು' ಅಂತಹ ಪುಸ್ತಕಗಳು ಹೊರಬರುತ್ತವೆ! ●

ಸಿದಿಲುಗುದ್ದೆ ಈಶ್ವರ ದೇವಸ್ಥಾನ ಪುರಾತನವಾದದ್ದು. ...ದಿ ಅರಸರ ಕಾಲದಲ್ಲಿ ಮಠದವರು 'ಊರಲ್ಲಿರುವ ...ಸ್ಥಾನಗಳಲ್ಲಿ ಪೂಜೆ ಮಾಡದಿದ್ದರೆ ನಿಮ್ಮ ನಾಶ ಆಗುತ್ತೆ' ...ತ ಜನರನ್ನು ಹೆದರಿಸಿ ಎಲ್ಲಾ ದೇವಸ್ಥಾನಗಳನ್ನು ಒಟ್ಟು ...ಡಿ ಬ್ರಾಹ್ಮಣರಿಗೆ ದಾನ ಮಾಡಿದ್ದರು. ಬ್ರಾಹ್ಮಣರಿಗೆಂದು ...ಹಾರಗಳನ್ನೂ ಕಟ್ಟಿಕೊಟ್ಟಿದ್ದರು. ಊರಲ್ಲಿರುವ ಜಮೀನೆಲ್ಲ ...ದಾಗಿ ಸೇರಿದ್ದು ಅಂತ ಮಠವನ್ನ ಜಹಾಗಿರಿ ಮಾಡಿದ್ದರಂತೆ. ...ಗ ಈಗಿನ ವಡೇರ ಅಜ್ಜ ಪೂಜೆಗೆ ಸೇರಿಕೊಂಡವರು ...ಂದಕ್ಕೆ ಖಾತೇಲಿ ದೇವರ ಹೆಸರು ತೆಗೆದು ತಮ್ಮ ...ನ್ನು ಬರೆಸಿಕೊಂಡರು. ಈ ರೀತಿ ಪೂಜೆ ಮಾಡುವವರೇ ...ಯರಾಗಿ, ಭಕ್ತರು ಗೇಣೀದಾರರಾದರು. ದೊಡ್ಡ ದೊಡ್ಡ ...ಸ್ಥಾನಗಳ ಪೂಜಾರಿಗಳು ಭಾರೀ ಭೂಮಾಲೀಕರಾದರು. ...ೇರು ಹೀಗೆ ಅನುಕೂಲಸ್ಥರಾದ ಮೇಲೆ ತಮ್ಮ ...ಸ್ಥಾನದಲ್ಲಿ ಪೂಜೆ ಮಾಡುವುದಕ್ಕೆ ಪುರುಸೊತ್ತು ಇಲ್ಲದೆ ...ಜಾರಿಗಳನ್ನು ನೇಮಿಸಿಕೊಂಡರು.

...ನರಸಿಂಹ ಭಟ್ಟರು ಪೂಜೆಗೆ ಅಂತ ಬಂದವರು ... ಝಾಂಡಾ ಹೂಡಿದರು. ವೇಬ್ರಶ್ರೀ ನರಸಿಂಹ ...ರು ಆಚಾರ ವಿಚಾರದಲ್ಲಿ ನೇಮ-ನಿಷ್ಠೆ ಉಳ್ಳವರು. ...ಕೆ ಕೊಡಲಿ ಬಿಡಲಿ ಹುಟ್ಟಿಸಿದವ ಹುಲ್ಲು ಮೇಯಿ...ಲ್ಲ ಅನ್ನೊ ಅಷ್ಟು ಆಧ್ಯಾತ್ಮಿ. ವಡೇರ ಮನೆ ಸಮೀಪವೇ ...ಸ್ಥಾನವಿದ್ದುದರಿಂದ ನರಸಿಂಹ ಭಟ್ಟರು ಮಂಗಳಾರತಿ ...ತೋ ಹೊತ್ತಿಗೆ ಅಮ್ಮವರು ಸ್ನಾನಮಾಡಿಕೊಂಡು ... ದೇವಸ್ಥಾನದಲ್ಲಿ ಹಾಜರಾಗುತ್ತಿದ್ದರು. ಅವತ್ತೊಂದು ... ಅಮ್ಮಾವ್ರು ಅನುಪಸ್ಥಿತಿಯಲ್ಲಿ ಗೋವಿಂದ ಬಂದು ...ಮ್ಮಾವ್ರು ಹೊರಗೆ" ಅಂತ ಹೇಳಿದ.

...ನರಸಿಂಹ ಭಟ್ಟರಿಗೆ ಯಾರಾದರು 'ಹೆಂಗುಸರು ಹೊರಗೆ' ...ದ್ರೆ ಸಾಕು ನಾಗರಹಾವಿನ ನೆನಪಾಗುತ್ತಿತ್ತು. ತನ್ನ ಕಷ್ಟವನ್ನು ...ಳಿಕೊಳ್ಳುವುದಕ್ಕೆ ಗೋವಿಂದ ಸರಿಯಾದ ವ್ಯಕ್ತಿ ಅಂತ ...ವಿನ ಪುರಾಣ ಬಿಚ್ಚಿದರು.

...ನಾಗರಹಾವು ದೇವರ ಪ್ರತ್ಯಕ್ಷ ರೂಪ. ಪುರಾಣದ ...ರ ಈ ಭೂಮಿಯನ್ನು ಸಾವಿರ ಹೆಡೆಗಳ ಮೇಲೆ ...ಶೇಷ ಹೊತ್ತುಕೊಂಡಿದ್ದಾನೆ. ಭೂಮಿಯ ಅಂತರಂಗದಲ್ಲಿ ...ಗಳು ಓಡಾಡುವ ದಾರಿ ಇದೆ. ಅದನ್ನು ನಾಗನೆಡೆ ...ಾರೆ. ಆ ನಾಗನೆಡೆಗೆ ಏನೇ ತೊಂದರೆ ಆದರೂ ...ರಹಾವು ಪ್ರತಿಭಟನಾರ್ಥವಾಗಿ ಕಾಣಿಸಿಕೊಂಡು ...ದರೆ ಕೊಡುತ್ತದೆ. ಭಟ್ಟರ ಹೆಂಡತಿ ಮುಟ್ಟಾದಾಗಲೆಲ್ಲ ...ರ ಮನೆಯಲ್ಲಿ ನಾಗರಹಾವು ಪ್ರತ್ಯಕ್ಷವಾಗುತ್ತಿತ್ತು. ನರಸಿಂಹ ...ರು ನಾಗಪ್ರತಿಷ್ಠೆ ಮಾಡಿಸಿದರು, ತೀರ್ಥ ಹಾಕಿದರು, ...ಮಣ್ಯಕ್ಕೆ ಹರಕೆ ಒಪ್ಪಿಸಿದರು. ಆದರೆ ಇದ್ಯಾವುದರಿಂದ ... ಪ್ರಯೋಜನವಾಗಲಿಲ್ಲ. ಕೊನೆಗೆ ಜ್ಯೋತಿಷಿ ಒಬ್ಬ ...ರ ಬಚ್ಚಲುಮನೆ ಕೆಳಗೆ ನಾಗನೆಡೆ ಇದೆ ಅಂತ ಹೇಳಿದ. ...ರ ಒಬ್ಬನೇ ಮಗನಿಗೆ ಮೂರು ವರುಷಗಳಾಗಿದ್ದರೂ ...ನಿಗೆ ನೆಟ್ಟಗೆ ನಿಲ್ಲಕ್ಕಾಗದೆ, ಮುಖ ನೋಡು ಅಂದ್ರೆ ...ಶ ನೋಡುವ ಪರಿಸ್ಥಿತಿ ಬಂದಿದ್ದೂ ಅದೇ ಶಾಪಕ್ಕಂತೆ. ...ಲ್ಲವನ್ನು ಹೇಳುತ್ತಾ ಹೋದ ಭಟ್ಟರು "ಯಾವ ...ರನ್ನಾದರೂ ಸಮಾಧಾನ ಮಾಡಬಹುದು. ಆದರೆ ...ನಾಗಚೇಷ್ಟೆ ಇದೆಯಲ್ಲ ಅದು ಪ್ರಾರಬ್ಧ, ನನ್ನ ಹೆಂಡತಿಗೆ ...ಿದರೆ ಗೊತ್ತಾಗೋದಿಲ್ಲ, ವಾದ ಮಾಡ್ತಳೆ..." ಅಂತ ...ರಿದರು. ಗೋವಿಂದ ಕೇಳಿಸಿಕೊಳ್ಳುತ್ತಾ ಇದ್ದ.

...ಅದೇ ಹೊತ್ತಿಗೆ ಕಾಡಿಗೆ ಹೋಗಿದ್ದ ಸಿದ್ದ ಅದೇ ...ಯಲ್ಲಿ ವಾಪಸ್ ಬರುವಾಗ ಗೋವಿಂದನನ್ನು ಕಂಡು ...ನ್ ಗೋವಿಂದಯ್ಯರು, ಪ್ರಸಾದಕ್ಕೆ ...ೆ ಬಂದೀರಿ ಅಮ್ಮಾರು ಇಲ್ಲೇನು?" ...ದ. ಸಿದ್ದ ಹೇಗೂ ದೇವಸ್ಥಾನದ ...ಾಳಿಗೆ ಬರುವಂತಿಲ್ಲವಾದ್ದರಿಂದ ...ಸ್ಥಾನದ ಆವರಣದ ಗೋಡೆಗೆ ...ೊಟ್ಟುಕೊಂಡು ನಿಂತಿದ್ದ ಗೋವಿಂದ ...ಲಿ ಏನ್ ಕಾಲಿ ಕಾಣ್ತದೆ. ಕಾಡಿಗೆ ...ೀಗಿ ಬರಿಗ್ಯೆಲಿ ಬಂದ್ಯಾ?" ಅಂದ. ...ಲ್ಲ, ಆದೆಂಥದೊ ಎರಡು ಬಳ್ಳಿ ...ಾಗಿತ್ತು ಬಂದೆ" ಅಂದ ಸಿದ್ದ. "ಏನ್ ...ಯ್ಯಾರು" ಅಂತ ನರಸಿಂಹ ಭಟ್ಟರನ್ನು ಮಾತನಾಡಿಸಿದ. ಆತ ಮಂಗನ್ನ...ಿ ಕೀಳು ಜಾತಿಯವನಾದುದರಿಂದ ಬ್ರಾಹ್ಮಣರನ್ನು ...ಿಡಿದು ಕರೆಯುವಂತಿರಲಿಲ್ಲ.

"ಎಂಥ ಇಲ್ಲ ಮಾರಾಯ. ಭಟ್ರು ಮನೆಗೆ ಹಾವು ...ೋದರ ಕಥೆ ಹೇಳ್ತಾ ಇದ್ರು. ನಾಗರಹಾವಿನ ದೆಸೆಯಿಂದ ಅವರಿಗೆ ಬರಕತ್ತೇ ಆಗಲ್ವಂತೆ" ಅಂದ ಗೋವಿಂದ. ಸಿದ್ದ "ಬ್ರಾಹ್ಮಣರಿಗೆಂತ ಮರಾಯ್ರೆ. ತಣ್ಣಗೆ ಪೂಜೆ ಮಾಡಿದ ರಾಯ್ತು. ನಮ್ಮಂಗೆ ಕಾಡಿಗೆ ಹೋಗಬೇಕಾ, ಬಿಸಿಲು ಬೆಂಕಿಲಿ ಬೇಯಬೇಕಾ ಹೇಳಿ?" ಅಂದ. "ಅದೆಂತ ಮಾತಾಡ್ತಿ ಮಾರಾಯ. ಅವರ ಹೆಂಡ್ತಿ ಮುಟ್ಟಾದಾಗೆಲ್ಲ ಈ ಹಾವ್ ಬರ್ತದೆ ಅಂತ ಅವ್ರು ಗೋಳೊಯ್ಕೊತಾರೆ, ನೀ ಒಳ್ಳೆ" ಅಂತ ಗೋವಿಂದ ಸಿಡಿಮಿಡಿಗೊಂಡ.



ಬೋನೊಳಗೆ ಒಂದು ಕಡೆ ಮಂಗಗಳು, ಇನ್ನೊಂದು ಕಡೆ ಮಂಗನಲ್ಲದ ಮನುಷ್ಯ ಇದ್ದದ್ದು ಖಾತ್ರಿಯಾಯಿತು. ಯಃಕಶ್ಚಿತ್ ಅಡಿಕೆ ಮರದ ದಬ್ಬೆಯಿಂದ ತಯಾರಿಸಿದ್ದ ಬೋನಿನ ವಿಶೇಷವೆಂದರೆ ಮಧ್ಯೆ ಒಂದು ಬಾಗಿಲಿತ್ತು. ಟಾರ್ಚ್ ಹಾಕಿ ಬೋನಿನ ಮೇಲೆ ನೋಡಿದರು. ಸನ್ನೆ ತಂತಿ ಕಟ್ಟಿರುವುದೆಲ್ಲ ಹಾಗೇ ಇತ್ತು. ಎದುರಿನ ಬಾಗಿಲು ತೆಗೆಯಲು ಪ್ರಯತ್ನಿಸಿದರು. ಸಾಧ್ಯವಾಗಲಿಲ್ಲ. ಮೇಲಿನ ತಾಳ ಬಂದ್ ಆಗಿತ್ತು. ತಾಳ ಜಾರಿಸಲು ನೋಡಿದರೆ ಅದು ಜಾರಲಿಲ್ಲ. ಸುತ್ತಮುತ್ತ, ಮೇಲೆ ಕೆಳಗೆ ಏನೇ ಮಾಡಿದರೂ ತಾಳ ಜಾರುತ್ತಿಲ್ಲ.

"ಓ ಅದಾ" ಅಂತ ತಾತ್ಸಾರ ಮಾಡಿದ ಸಿದ್ದ "ಮುಟ್ಟು-ಮೊಟ್ಟೆ ಒಂದೆಯ, ಎರಡಕ್ಕೂ ಹಾವು ಬರ್ತವೆ" ಅಂದ.

ಇದನ್ನು ಕೇಳಿ ನರಸಿಂಹ ಭಟ್ಟರಿಗೆ ಸಿಟ್ಟು ಬಂದು "ಏನೊ ಸಿದ್ದ ಮೂರ್ಖನಂಗೆ ಮಾತಾಡ್ತಿ? ಮುಟ್ಟು-ಮೊಟ್ಟೆ ಒಂದೆ ಅದ್ರೆ ನಮ್ಮನೆಲೇನು ಮೊಟ್ಟೇನಾ, ಮರಿನಾ? ನಾವೇನು ನಿನ್ನಂಗೆ ಕೋಳಿ ಇಟ್ಟುಕೊಂಡೀವ..." ಅಂತ ಜೋರು ಮಾಡಿದರು.

"ಬ್ಯಾಡ ಅಯ್ಯಾರೆ, ನಾ ಹೇಳ್ದಂಗೆ ಮಾಡುದ್ರೆ ನಿಮ್ಮನೆಗೆ ಹಾವು ಹೆಂಗೆ ಬರ್ತದೆ ನಾನ್ ನೋಡಿತಿನಿ" ಅಂದ. "ಏನು ಹೇಳು" ಅಂದರು ಭಟ್ಟರು. "ನಿಮ್ಮ ಹೆಂಡ್ತಿ ಮುಟ್ಟಾದಾಗ ಅವರನ್ನ ಊರಿಗೆ ಕಳಿಸಿ. ಹಾವು ಬಂದ್ರೆ ಆಮೇಲೆ ಹೇಳಿ" ಅಂದ. ಭಟ್ಟರಿಗೆ ನೆನಪಾಯಿತು. ಅವರ ಹೆಂಡತಿ ಗರ್ಭಿಣಿ ಆದ ಕಾಲದಲ್ಲಿ ಹಾವು ಬಂದಿರಲಿಲ್ಲ. ಆದರೆ ಅವರು ಸಿದ್ದನಂತಹ ಕ್ಷುದ್ರ ವ್ಯಕ್ತಿಯ ಮಾತನ್ನು ಹೇಗೆ ನಂಬಿಯಾರು? ನರಸಿಂಹ ಭಟ್ಟರು ನಾಗರಹಾವು ದೇವರೆಂದು, ಮಡಿಮೈಲಿಗೆ ಆಗದೆ ಅವು ಕಾಣಿಸುವುದಿಲ್ಲ ಎಂದು ವಾದ ಮಾಡಿದರು. ಆಗ ಸಿದ್ದ ಅವರಿಗೆ ಒಂದೇ ಮಾತು ಹೇಳಿದ: "ನೋಡಿ ಅಯ್ಯ ದೇವರು ಅಲ್ಲ, ದಿಂಡಿರು ಅಲ್ಲ, ನಾವಾಗಲಿ, ನೀವಾಗಲಿ, ಹಾವಾಗಲಿ ಊಟ ಸಿಗ್ತದೆ ಅಂದಲ್ಲಿಗೆ ಹೋಗಾದು ಮಾಮೂಲು. ನಿಮ್ಮನೇಲಿ ಅವುಕ್ಕೆ ಊಟ ಸಿಕ್ಕದಿದ್ದರೂ ಮೊಟ್ಟೆ ಫೌಲು (ವಾಸನೆ) ಹುಡ್ಕೊಂಡು ಬರ್ತವೆ. ನಿಮಗೆ ಹೆಂಗೆ ಹೇಳಬೇಕು ನಂಗೊತ್ತಾಗೊದಿಲ್ಲ, ನಿಮ್ಮ ಹೆಂಡ್ತಿನ ಕೇಳಿ, ಮುಟ್ಟು ಮತ್ತು ಮೊಟ್ಟೆನೂ ಒಂದೇ ಫೌಲಾ ಅಂತ. ಅಲ್ಲ ಅಂದರೆ ನೀವೆಳ್ದಂಗೆ ಕೇಳ್ತಿನಿ. ಸುಳ್ಳಾದರೆ ಜಾತಿ ಬಿಡ್ತಿನಿ" ಅಂದ.



● ಕಲ್ಕುಳಿ ವಿಠ್ಠಲ ಹೆಗ್ಡೆ

ಮಾರನೆ ದಿನ ನರಸಿಂಹ ಭಟ್ಟರು ಬಂದು ಸಿದ್ದ ಹೇಳಿದ್ದರಲ್ಲಿ ಸ್ವಲ್ಪ ಸತ್ಯ ಇದೆ ಅಂತ ಗೋವಿಂದನಿಗೆ ಹೇಳಿದರು. ಭಟ್ಟರ ಸ್ಥಿತಿ ಕಾಶೀಲಿ ಆದಿ ಶಂಕರಾಚಾರ್ಯ ಚಾಂಡಾಲನ ತರ್ಕಕ್ಕೆ ಸೋತು ಶರಣಾದಂತಾಗಿತ್ತು. ಅಂದಿನಿಂದ ಗೋವಿಂದನಿಗೆ ಸಿದ್ದನ ಮೇಲೆ ವಿಶೇಷ ಅಭಿಮಾನ.


*****

ಬೆಳಗಿನ ಜಾವ. ಮಠದ ವಾಚ್‌ಮನ್ ಮುಲ್ತಾನ್ ಸಿಂಗ್ ಬಹದ್ದೂರ್ ಎಂದಿಗಿಂತ ಮುಂಚೆ ರಾತ್ರಿ ಪಾಳಿ ಮುಗಿಸುವುದರಲ್ಲಿದ್ದ. ಯಾಕೆಂದರೆ ಬೆಳಕು ಬಿಡೋ ಮುಂಚೆ ಕೆಳಗಿನ ಪೇಟೇಲಿ ಅವನಿಗೆ ಎಕ್ಸ್‌ಟ್ರಾ ಡ್ಯೂಟಿ ಇತ್ತು. ಕೆಳಗಿನ ಪೇಟೇಲಿ ಶ್ರೀಮಂತರು, ಅಧಿಕಾರಿಗಳು ಹೊಸದಾಗಿ ಮನೆ ಕಟ್ಟಿಕೊಂಡಿದ್ದರು. ಬೆಳಗ್ಗೆ ಶ್ರೀಮಂತರಿಗೆ ಮುಖ ತೋರಿಸಿ 'ಸಾಬ್' ಅಂತ ಹೇಳಿ ಚಂದವಾಗಿ ಸೆಲ್ಯೂಟ್ ಹೊಡೆಯುತ್ತಿದ್ದ. ಅವನ ಸೆಲ್ಯೂಟನ್ನೇ ತಮ್ಮ ಪ್ರತಿಷ್ಠೆಯ ಗರಿ ಎಂದು ಅವರೆಲ್ಲ ಅಂದುಕೊಂಡಿದ್ದರು. ಅದಕ್ಕಿಂತ ಮುಖ್ಯವಾಗಿ ಬಹದ್ದೂರ್ ರಾತ್ರಿ ಇಡೀ ತಮ್ಮ ಸಂಪತ್ತನ್ನು ರಕ್ಷಿಸಿದ್ದಾನೆ ಎಂಬ ಹೆಮ್ಮೆಯಿಂದ ಅವನಿಗೆ ಉಳಿದ ಊಟ, ಬೆಳಗಿನ ತಿಂಡಿ, ಭಕ್ಷೀಸು ಕೊಡುತ್ತಿದ್ದರು.

ನೇಪಾಳ್ ದೇಶದವನಾದ ಬಹದ್ದೂರ್‌ನನ್ನು ಮಠದ ಪಾರು ಕಾಯುವುದಕ್ಕೆ ನೇಮಿಸಿಕೊಂಡಿದ್ದರು. ಊರಿನವರನ್ನು ಪಾರಕ್ಕೆ ಸೇರಿಸಿಕೊಂಡರೆ ಮಠದ ಒಳಗಿನ ವಿಚಾರವನ್ನೆಲ್ಲ ಊರು ತುಂಬಾ ಹಬ್ಬಿಸುತ್ತಾರೆ ಎಂಬುದೇ ಇದಕ್ಕೆ ಕಾರಣವಾಗಿತ್ತು. ಮಠದಲ್ಲಿ ವಾಚ್‌ಮನ್ ಕೆಲಸ ಸಿಕ್ಕಿದ ಮೇಲೆ ಪೊಲೀಸ್‌ನವರನ್ನು ಬೇಡಿ ಅವರಿಂದ ಎರಡು ಜೊತೆ ಹಳೆ ಯೂನಿಫಾರಂಗಳನ್ನು ಸಂಪಾದಿಸಿದ್ದ ಬಹದ್ದೂರ್ ಅವನ್ನೇ ಡ್ಯೂಟಿಗೆ ಬಳಸುತ್ತಿದ್ದ. ಮಠದ ಪಾರು ಕೆಲಸದಲ್ಲಿ ಅವನ ಆಯುಧಗಳೆಂದರೆ ಅವನಿಗಿಂತ ಸ್ವಲ್ಪ ಗಿಡ್ಡದಾಗಿದ್ದ ಮುಕ್ಕಾಲು ಇಂಚಿನ ಪೈಪು ಮತ್ತು ಮಠದವರು ಕೊಟ್ಟಿದ್ದ ಟಾರ್ಚು.

ಬಹದ್ದೂರ್ ತನ್ನ ಊರಿನಿಂದ ಬರುವಾಗ ತನ್ನ ರಕ್ಷಣೆಗೆಂದು ಒಂದು ಚೂರಿಯನ್ನು ತಂದಿದ್ದ. ಅದನ್ನು

ಮಂಗನ ಬ್ಯಾಟಿ



12

ಆತ ಯಾವಾಗಲೂ ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಿರುತ್ತಿದ್ದ. ಪಾರ ಕಾಯುವಾಗ ಬಹದ್ದೂರ್ ತನ್ನ ಉದ್ದದ ಪೈಪನ್ನು ಮಠದ ಚಪ್ಪಡಿ ಕಲ್ಲಿನ ಮೇಲೆ ಎಳಕೊಂಡು ಹೋಗುತ್ತಿದ್ದ. ಅದು ಕಣಕಣ ಶಬ್ದ ಮಾಡುತ್ತಿತ್ತು. ಒಂದಷ್ಟು ದೂರಕ್ಕೆ ಒಂದು ಸಾರಿ ಅದನ್ನು ನೆಲಕ್ಕೆ ಕುಟ್ಟಿ ಶಬ್ದ ಮಾಡುತ್ತಿದ್ದ. ಕಳ್ಳಕಾಕರ್‍ಯಾರಾದರೂ ಇದ್ದರೆ ತಾನು ಬರುವುದಕ್ಕೆ ಮುಂಚೆನೆ ಓಡಲಿ ಎಂಬುದು ಅವನ ಉದ್ದೇಶವಾಗಿತ್ತು.

ರಾತ್ರಿಯಿಡೀ ಬೋನೊಳಗೆ ಕಳೆದಿದ್ದ ಗೋವಿಂದನನ್ನು ಆ ಹೊತ್ತಿನಲ್ಲಿ ಇನ್ನೂ ಮಂಪರು ಕವಿದಿತ್ತು. ಅವನಿಗೆ ಬದುಕಿದ್ದೇನೊ, ಸತ್ತಿದ್ದೇನೊ, ಕನಸು ಕಾಣುತ್ತಿದ್ದೇನೊ, ಇದೆಲ್ಲ ನನಸೋ ಎಂಬುದ್ಯಾವುದೂ ಖಾತ್ರಿಯಾಗಿರಲಿಲ್ಲ. ಆದರೂ ಆತನಿಗೆ ಪೈಪಿನ ಕಣಕಣ ಚಣಚಣ ಶಬ್ದ ಕೇಳಿಸಿತು. ಸ್ವಲ್ಪ ಹೊತ್ತಿನ ನಂತರ ದೂರದಿಂದ ಅವನತ್ತ ಒಂದು ಆಕೃತಿ ಬರುತ್ತಿರುವುದನ್ನು ನೋಡಿದ. ಆತಂಕದಲ್ಲಿದ್ದ ಗೋವಿಂದನಿಗೆ ಇದು ದೆಯ್ಯ ಇರಬಹುದೇ ಎಂಬ ಗುಮಾನಿ ಕಾಡಿತು. ಮಠದಲ್ಲಿ ರಾತ್ರಿ ಅಮ್ಮನವರು ಓಡಾಡುವ ಮಾತು ಕೇಳಿದ್ದ ಗೋವಿಂದನಿಗೆ ಮಠದಲ್ಲಿ ಅದೆಷ್ಟು ದೆಯ್ಯಗಳಿರಬಹುದು ಅಂಥ ಹೆದರಿಕೆ ಆಗುತ್ತಿತ್ತು.

ತನ್ನತ್ತ ಬರುತ್ತಿರುವ ಆಕೃತಿ ದೆಯ್ಯನೋ, ಮನುಷ್ಯನೋ ಆತನಿಗೆ ಗೊತ್ತಾಗಲಿಲ್ಲ. ಹತ್ತಿರಕ್ಕೆ ಬಂದ ಬಹದ್ದೂರ್ ತನ್ನ ಕೈಯಲ್ಲಿದ್ದ ಪೈಪಿಂದ ಬೋನನ್ನು ಬಡಿದ. ಮಂಗಗಳು 'ಡ್ಯಾರ್ ಡ್ಯಾರ್' ಅಂತ ಕೂಗಿದವು. ಗೋವಿಂದ "ಅಯ್ಯೊ ದೇವರೇ, ಸಿದ್ದಾ..." ಎಂದು ಚೀರಿದ. ಇದನ್ನೆಲ್ಲ ಕೇಳಿ ಬಹದ್ದೂರ್ ಗಾಬರಿಗೊಂಡರೂ ತನ್ನ ಟಾರ್ಚ್ ಬಿಟ್ಟು ಬೋನಿನೊಳಗೆ ಒಳಗೊಂದು ಸರಿ ನೋಡಿದವನೆ ಅಲ್ಲಿಂದ ಪೈಪು ಎಳೆದುಕೊಂಡು ಓಡಿದ. ಬಹದ್ದೂರ್‌ನ ಕೆಲಸ ರಾತ್ರಿಯಾದ್ದರಿಂದ ಅವನಿಗೆ ಹಗಲಿನ 'ಆಪರೇಷನ್ ಮಂಕಿ' ಕಾರ್ಯಾಚರಣೆಯ ಪೂರ್ತಿ ವಿಚಾರ ಗೊತ್ತಿರಲಿಲ್ಲ.

ಮಠದ ಗೇಟದ್ದಲ್ಲಿಗೆ ಓಡಿಬಂದ ಬಹದ್ದೂರ್ ಅಲ್ಲಿ ಕಾಯುತ್ತಿದ್ದ ಪೊಲೀಸಿನವರಿಗೆ "ಬೋನೊಳಗೆ ಏಕ್ ಆದ್ಮಿ ಇದಾನೆ, ಮಂಗ ಐತೆ" ಅಂತ ಹೆದರಿಕೊಂಡೇ ಹೇಳಿದ. ಏನಾದರಾಗಲಿ ತಮಗೆ ಬಂದ ಪ್ರಥಮ ಮಾಹಿತಿಯನ್ನು ಮೇಲಧಿಕಾರಿಗಳಿಗೆ ತಲುಪಿಸುವುದು ತಮ್ಮ ಕರ್ತವ್ಯ ಅಂತ ಪೊಲೀಸರು ತಮ್ಮ ಹಿರಿಯರಿಗೆ ವಿಷಯ ತಿಳಿಸಿದರು. ಪೊಲೀಸ್ ಮೇಲಧಿಕಾರಿಗಳು ತಮಗೆ ಮಠದ ಒಳಗೆ ಪ್ರವೇಶವಿಲ್ಲ ಮತ್ತು ಆಪರೇಷನ್ ಮಂಕಿ ಕಾರ್ಯಾಚರಣೆ ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದೆಂದು ಈ ವಿಷಯವನ್ನು ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ತಿಳಿಸಿ ಎಂದು ಹೇಳಿ ಜಾರಿಕೊಂಡರು.

ಫಾರೆಸ್ಟ್ ಅಧಿಕಾರಿಗಳು ಆಪರೇಷನ್ ಮಂಕಿ ರೂವಾರಿ ಸಿದ್ದಯ್ಯನಾದ್ದರಿಂದ ಕೂಡಲೇ ಅವನನ್ನು ಕರೆದುಕೊಂಡು ಬಂದು ಪರಿಸ್ಥಿತಿ ನಿಭಾಯಿಸಬೇಕು ಎಂದು ಆಜ್ಞೆ ಮಾಡಿದರು. ಕೊನೆಗೆ ತಪ್ಪಿಸಿಕೊಳ್ಳಲಾಗದೆ ಸಿಕ್ಕಿ ಹಾಕಿಕೊಂಡ ಫಾರೆಸ್ಟ್‌ನವರು, ಬಹದ್ದೂರ್ ಹೇಳಿದ ಪ್ರಥಮ ಮಾಹಿತಿಯನ್ನು ಪಡೆದು ಕೊಂಚ ಹೆದರಿಕೆಯಿಂದಲೇ ಅವನೊಂದಿಗೆ ಬೋನಿದ್ದ ಸ್ಥಳಕ್ಕೆ ಹೋಗಿ ನೋಡಿದರು...

ಬೋನೊಳಗೆ ಒಂದು ಕಡೆ ಮಂಗಗಳು, ಇನ್ನೊಂದು ಕಡೆ ಮಂಗನಲ್ಲದ ಮನುಷ್ಯ ಇದ್ದದ್ದು ಖಾತ್ರಿಯಾಯಿತು. ಯಃಕಶ್ಚಿತ್ ಅಡಿಕೆ ಮರದ ದಬ್ಬೆಯಿಂದ ತಯಾರಿಸಿದ್ದ ಬೋನಿನ ವಿಶೇಷವೆಂದರೆ ಮಧ್ಯೆ ಒಂದು ಬಾಗಿಲಿತ್ತು. ಟಾರ್ಚ್ ಹಾಕಿ ಬೋನಿನ ಮೇಲೆ ನೋಡಿದರು. ಸನ್ನೆ ತಂತಿ ಕಟ್ಟಿರುವುದೆಲ್ಲ ಹಾಗೇ ಇತ್ತು. ಎದುರಿನ ಬಾಗಿಲು ತೆಗೆಯಲು ಪ್ರಯತ್ನಿಸಿದರು. ಸಾಧ್ಯವಾಗಲಿಲ್ಲ. ಮೇಲಿನ ತಾಳ ಬಂದ್ ಆಗಿತ್ತು. ತಾಳ ಜಾರಿಸಲು ನೋಡಿದರೆ ಅದು ಜಾರಲಿಲ್ಲ. ಸುತ್ತಮುತ್ತ ಮೇಲೆ ಕೆಳಗೆ ಏನೇ ಮಾಡಿದರೂ ತಾಳ ಜಾರುತ್ತಿಲ್ಲ. ಬೋನಿಗೆ ಮೂರು ಕಡೆ ತಾಳಗಳಿದ್ದು ತಮಗೆ ಗೊತ್ತಿದ್ದ ತಂತ್ರವನ್ನೆಲ್ಲ ಬಳಸಿದರೂ ಅವು ಯಾವುವೂ ಜಾರಲಿಲ್ಲ.

ಮೇಲಧಿಕಾರಿಗಳಿಗೆ ಮತ್ತೆ ವಿಷಯ ತಿಳಿಸಿದರು. ಸಿದ್ದನನ್ನು ಕರೆದುಕೊಂಡು ಬನ್ನಿ ಅಂತ ಮೇಲಧಿಕಾರಿಗಳು ಬೈದು ಫೋನಿಟ್ಟರು. ಸೋತ ಫಾರೆಸ್ಟ್ ಸಿಬ್ಬಂದಿ ಸಪ್ಪೆ ಮುಖ ಮಾಡಿಕೊಂಡು ಸಿದ್ದನ ಮನೆ ಹುಡುಕಿಕೊಂಡು ಹೊರಟರು.

(ಮುಂದುವರೆಯುವುದು)

ಪ್ರತಿಭಟನೆಯ ಗತ-ಭೂಗತ

"ನೀವು ರೈಲು ಗಾಡಿಯನ್ನು ನೋಡಿದ್ದೀರಾ?"

"ಹ್ಞಾ ..... ನೋಡಿದ್ದೇನೆ."

"ಬಸ್ಸು?"

"ಬಸ್ಸನ್ನು ನೋಡಿದ್ದೇನೆ."

"ನಾನು ಎರಡನ್ನೂ ನೋಡಿಲ್ಲ... ಕಬ್ಬಿಣವನ್ನು ನೆಲ ಅಗೆದು ತೆಗೆಯುತ್ತಾರಂತೆ. ಹಾಗಿದ್ದರೆ ಹಣವನ್ನು? ಅದೂ ಕೂಡಾ ಮಣ್ಣಿನಿಂದಲೇ ಬರುತ್ತಾ?"

"ಇಲ್ಲ ಅದನ್ನು ಉತ್ಪಾದಿಸಲಾಗುತ್ತದೆ."

"ಯಾವುದರಿಂದ?

"ಕಬ್ಬಿಣದಿಂದ.... ಕಬ್ಬಿಣದಿಂದ ತಯಾರಾದ ಮೆಷಿನ್‌ಗಳಿಂದ."

"ಮತ್ತೆ ಈ ಕನ್ನಡಕ!"


"ಅದನ್ನೂ ಮೆಷಿನ್‌ಗಳಿಂದ ತಯಾರಿಸುತ್ತಾರೆ"

"ಮೆಷಿನ್ ಎಲ್ಲವನ್ನು ತಯಾರಿಸುತ್ತದಾ?"

"ಹೌದು, ಹೆಚ್ಚುಕಡಿಮೆ ಎಲ್ಲವನ್ನೂ ತಯಾರಿಸುತ್ತದೆ."

–ಇದು ಸತ್ನಾಮ್ ಹಾಗೂ ಬಸ್ತರ್‌ನ ದಟ್ಟ ಕಾಡುಗಳಲ್ಲಿನ ಗೆರಿಲ್ಲಾ ಹೋರಾಟಗಾರ ರಾಜು ಎಂಬುವನ ಮಧ್ಯೆ ನಡೆಯುವ ಸಂಭಾಷಣೆಯ ಒಂದು ತುಣುಕು.

ನಮ್ಮ ಸಂಸ್ಥೆಯಿಂದ ಕಳೆದ ವಾರ ಬಿಡುಗಡೆಯಾದ 'ಜಂಗಲ್‌ನಾಮ' ಪುಸ್ತಕದಲ್ಲಿ ಇಂಥವು ಹಲವಾರಿವೆ. ಪಂಜಾಬಿನವರಾದ ಲೇಖಕ ಸತ್ನಾಮ್ ಕೆಲ ವರ್ಷಗಳ ಹಿಂದೆ ಬಸ್ತರ್‌ನ, ಮಾವೋವಾದಿಗಳ ಕಂಟ್ರೋಲಿನಲ್ಲಿರುವ ಪ್ರದೇಶಗಳಲ್ಲಿ



ತಿಂಗಳುಗಟ್ಟಲೆ ಇದ್ದು ಓಡಾಡಿ ಬಂದು ತಮ್ಮ ಅನುಭವಗಳನ್ನು ದಾಖಲಿಸಿದ್ದರು. ಅದೀಗ ಇಂಗ್ಲಿಷ್ ಮೂಲಕ ಕನ್ನಡಕ್ಕೂ ಬಂದಿದೆ. ಇದರಲ್ಲಿ ಬರುವ ರಾಜು, ಚಂದನ್, ಅಯಟು, ಕೋತ, ಮಾಸೆ, ಶ್ರೀಕಾಂತ್, ಡಾ. ಪವನ್, ನಾರಂಗ್ ಮುಂತಾದವರ ವ್ಯಕ್ತಿತ್ವವನ್ನು, ಬದುಕಿನ ರೀತಿಯನ್ನು ಓದುತ್ತಾ ಇರುವಾಗ ಕರ್ನಾಟಕದ ಮಾವೋವಾದಿಗಳ ನೆನಪು ಬಾರದಿರದು.

ಬಹುಶಃ ಇಷ್ಟರಲ್ಲಿ ಇದು ನಿಮ್ಮ ಗಮನಕ್ಕೂ ಬಂದಿರಬಹುದು. ಮಲೆನಾಡಿನ ಕಾಡಿನೊಳಗಿಂದ ಯಾವ ಸುದ್ದಿಯೂ ಕೇಳಿಬರುತ್ತಿಲ್ಲ.

ಅತ್ಯಂತ ಕಠಿಣವಾದ ಹೋರಾಟದ ಹಾದಿಯನ್ನು ಆರಿಸಿಕೊಂಡು ನಮ್ಮ ಸಮಾಜದ ಮುಖ್ಯ ವಾಹಿನಿಯಿಂದ ಕಣ್ಮರೆಯಾಗಿರುವ ರಮೇಶ್, ಬಿ.ಜಿ. ಕೃಷ್ಣಮೂರ್ತಿ, ಮುಂಡಗಾರು ಲತಾ, ಪ್ರಭಾ, ವಿಕ್ರಂ ಗೌಡ ಇನ್ನೂ ಮುಂತಾದ ಅನೇಕರು ಈಗ ಏನು ಮಾಡುತ್ತಿರಬಹುದು? ಮಲೆನಾಡಿನ ಯಾವ ಮೂಲೆಯಿಂದಲೂ ನಕ್ಸಲರು ಗ್ರಾಮಗಳಿಗೆ ಭೇಟಿ ನೀಡಿದ, ಕರಪತ್ರ ಹಂಚಿದ, ಪೋಸ್ಟರ್ ಅಂಟಿಸಿಹೋದರೆಂಬ ಸುದ್ದಿ ಕೇಳಿಬರುತ್ತಿಲ್ಲ, ಯಾವುದಾದರೂ ವಿದ್ಯಮಾನ ಕುರಿತಂತೆ ನಕ್ಸಲರ ಹೇಳಿಕೆಗಳು ಇಮೇಲ್ ಮೂಲಕ ಮೊದಲಿನಂತೆ ಪತ್ರಿಕಾ ಕಚೇರಿಗಳಿಗೆ ಬರುತ್ತಿಲ್ಲ, ಅಪರೂಪಕ್ಕೊಮ್ಮೆ ಕೇಳಿಬರುತ್ತಿದ್ದ ಗುಂಡಿನ ಮೊರೆತದ ಸದ್ದಂತೂ ಈಗ ಪೂರಾ ನಿಂತೇ ಹೋಗಿದೆ. ಅಲ್ಲಿ ಒಳಗಿನ ಪರಿಸ್ಥಿತಿ ಹೇಗಿದೆಯೆಂದು ಹೇಳಬಲ್ಲವರ್‍ಯಾರೂ ಹೊರಗಡೆ ಇರುವಂತಿಲ್ಲ, ಈ ಹೋರಾಟದೊಂದಿಗೆ ಇದ್ದವರೆಂದು ಪೊಲೀಸರು ಆರೋಪಿಸಿ ಅನೇಕರನ್ನು ಮೈಸೂರು ಜೈಲಿನಲ್ಲಿರಿಸಿದ್ದಾರೆ. ಈ ಸಂಘರ್ಷದ ಬೆಂಕಿ ಆಹುತಿ



ತೆಗೆದುಕೊಂಡ ಸಾಕೇತ್, ಪಾರ್ವತಿ, ಹಾಜಿಮಾ, ಮನೋಹರ್, ಗೌತಮ್‌ರ ನೆನಪುಗಳು ಕೆಲವರ ಎದೆಯಲ್ಲಿ ಬೆಂಕಿಯಾಗಿಯೂ ಜನಸಾಮಾನ್ಯರ ನೆನಪಿನಿಂದ ಮಾಸುತ್ತಲೂ ಇರಬಹುದು.


ಈ ಬಂಡಾಯ ಕುರಿತಂತೆ ಪೋಸ್ಟ್‌ಮಾರ್ಟಂ ಮಾಡುವ ಸಮಯ ಇದಲ್ಲ, ಆದರೂ ಕಳೆದ ಆರೆಂಟು ವರ್ಷಗಳಲ್ಲಿ ಆಗಿಹೋದ ಘಟನೆಗಳನ್ನೆಲ್ಲಾ ನೆನೆದರೆ ಹರಿದ ನೆತ್ತರು, ಮಡಿದವರ ದಫ್ತರುಗಳತ್ತ ಕಣ್ಣು ಹಾಯಿಸಿದರೆ ಮನಸ್ಸು ಭಾರವಾಗದಿದ್ದೀತೆ.

ಜಂಗಲ್‌ನಾಮ ಪುಸ್ತಕದಿಂದ ಆರಿಸಿ ಕೊಟ್ಟಿರುವ ಮೇಲಿನ ಸಂಭಾಷಣೆಯೇ ಒಟ್ಟಾರೆ ಆ ಹೋರಾಟದ ಸಾಧ್ಯತೆ ಮತ್ತು ಮಿತಿಗೆ ಉದಾಹರಣೆಯಂತಿದೆ. ಅತ್ಯಂತ ದೃಢಮನಸ್ಸಿನ ಆ ಗೆರಿಲ್ಲಾಗಳ ಮುಗ್ಧತೆಯೂ, ಮತ್ತವರ ನಾಯಕತ್ವದ ಉತ್ಪ್ರೇಕ್ಷಿತ ಆಶಾವಾದವೂ ಕಳವಳ ಹುಟ್ಟಿಸುವಂತಿದೆ.

ಇದು ನಕ್ಸಲರ ಇಚ್ಛಾಶಕ್ತಿಯ ಕುರಿತಾದ ಕಾಮೆಂಟ್ ಅಲ್ಲ, ಬದಲಾಗಿ ನಮ್ಮೆದುರಿನ objective realityಗೆ ಸಂಬಂಧಿಸಿದ್ದು. ಈ ಸಮಾಜವನ್ನು ಬದಲಿಸಲೇಬೇಕೆಂಬ ನಿರ್ಧಾರಕ್ಕೆ ತಲುಪುವ ಬಂಡುಕೋರ ವ್ಯಕ್ತಿಗಳನ್ನು ಸರ್ಕಾರವಾಗಲೀ, ಪೊಲೀಸರಾಗಲಿ ಮುರಿಯುವುದು ಸುಲಭದ ಮಾತಲ್ಲ, ನಾಲ್ಕಾರು ವರ್ಷ ಜೈಲಿನಲ್ಲಿದ್ದು ಬಂದವರನ್ನು, ಅನೇಕ ಆಪತ್ತಿನ ಸನ್ನಿವೇಶಗಳಲ್ಲೂ ಧೃತಿಗೆಡದೆ ಮುಂದಡಿಯಿಡುತ್ತಾ ಸಾಗುವ ಅನೇಕರನ್ನು ಪತ್ರಕರ್ತನಾಗಿ ನಾನು ನೋಡಿದ್ದೇನೆ. ಆದರೆ ಅವರೆಲ್ಲಾ ಆಶಿಸುವ, ಕನಸುವ ಬದಲಾವಣೆಯೆಂಬ ಚಲನೆ ಎಲ್ಲೋ ಒಂದು ಕಡೆ ಚಾಲೂ ಆಗದೆ ಹೋದರೆ, ಆ ಪ್ರಕ್ರಿಯೆಯಲ್ಲಿ ಅಂತವರ ಶಕ್ತಿ-ಶ್ರಮ ಬೆರೆಯದೆ ಹೋಗುವಂತಾದರೆ ಎಲ್ಲವೂ ವ್ಯರ್ಥವೆನಿಸಿಬಿಡುತ್ತದೆ. ಒಂದೆಡೆ ಕೋಟಿಗಟ್ಟಲೆ ಇರುವ ಸಂತ್ರಸ್ತ ಜನತೆ ಮತ್ತೊಂದೆಡೆ ಕೆಲವೇ ಹೋರಾಟಗಾರರು... ಇವೆರಡರ ನಡುವಿನ ಅಂತರವೂ ದೊಡ್ಡದೆ. ಅವನ್ನು ಬೆಸೆಯುವ ಸರಿ ಸೂತ್ರವೊಂದರ ಅಗತ್ಯ ಇವತ್ತಿನದು.

ಇದನ್ನು ಬರೆಯುತ್ತಿರುವಾಗಲೇ ನಕ್ಸಲ್ ಬಿ.ಜಿ. ಕೃಷ್ಣಮೂರ್ತಿ ಬರೆದ ಹಲವು ಕವನಗಳು ಸಿಕ್ಕವು. 2004 ರಲ್ಲಿ ನಾವೊಂದಿಷ್ಟು ಪತ್ರಕರ್ತರು ನಕ್ಸಲರ ಸಂದರ್ಶನಕ್ಕೆಂದು ಮಲೆನಾಡಿಗೆ ಹೋಗಿದ್ದಾಗ ಕೃಷ್ಣಮೂರ್ತಿ ಬರೆದಿದ್ದ ಈ ಕವನಗಳನ್ನು ನಾನು ತೆಗೆದುಕೊಂಡು ಬಂದಿದ್ದೆ. ಅದರಲ್ಲಿ ಒಂದನ್ನು ಇಲ್ಲಿ ಪ್ರಕಟಿಸಲಾಗಿದೆ.

ಹಾಗೆಯೇ ಸಾಕೇತನ ಬದುಕನ್ನು ಹೇಳುವ ಪುಸ್ತಕವೊಂದನ್ನು ಪ್ರಕಟಿಸುವ ಚರ್ಚೆ ನಡೆದಿದೆ. ಎಲ್ಲಾ ಅಂದುಕೊಂಡಂತೆಯೇ ಆದರೆ ಈ ವರ್ಷದ ಕೊನೆಯೊಳಗಾಗಿ ಪುಸ್ತಕ ರೆಡಿಯಾಗಬಹುದು.



ನಾನು ಅದಾಗಬೇಕೆಂದಿದ್ದೆ.... ಆದರೆ.....?

ಎಷ್ಟು ವರ್ಷಗಳಾದವು ನಾನು ಹುಟ್ಟಿ!
ನನ್ನ ಮೈಕೆರೆದುಕೊಳ್ಳುವುದೇ ಮುಗಿದಿಲ್ಲ ನನಗೆ
ಹೆಬ್ಬೆರಳ ತುದಿ ತುರಿಕೆ ಹೋಯಿತೆಂದುಕೊಂಡೆ
ಅಂಗಾಲು ತುರಿಸುತ್ತಿದೆ
ಅಂಗಾಲು ಕಲ್ಲಿಗೆ ತಿಕ್ಕಿ
ಮುಂದೆ ಹೊರಟರೆ ಹೊಟ್ಟೆಗೆ ತುರಿಕೆ ಹತ್ತಿದೆ
ಒಂದಾದಮೇಲೊಂದು... ಕೊನೆಗೆ ಬೆನ್ನಿಗೆ.....
ಈಗ ಕೆರೆಯುತ್ತಿದ್ದೇನೆ
ಅಸಲಿ ತುರಿಕೆಯ ಜಾಗ ಸಿಕ್ಕಿಲ್ಲ ಇನ್ನೂ.......!

ನನಗೆ ಬೇಸರವಾಗುತ್ತಿರುವುದೇಕೆಂದರೆ
ನಾನೊಬ್ಬ ಒಳ್ಳೆ ಕವಿಯಾಗಬೇಕೆಂದಿದ್ದೆ
ಹಸಿದ ಮನಸ ತಟ್ಟೆಯಲ್ಲೂ ಕೆಚ್ಚನ್ನದ ತುದಿ
ಉಪ್ಪಿನಕಾಯಿಯಂತೆ
ಜನರ ಹೃದಯಕ್ಕೊಂದು ಕನ್ನಡಿಯಂತೆ.
ಕಿಕ್ಕಿರಿದ ನಗರದಲ್ಲಿ ಆಟಕ್ಕೊಂದು ಚಿಕ್ಕ ಮೈದಾನದಂತೆ.
ನಿದ್ದೆಯಿಲ್ಲದೆ ದುಡಿದವನ ನಿದ್ದೆಗೊಂದು ಚಾಪೆಯಂತೆ
ಕುಸಿದು ಬಿದ್ದವನಿಗೆ ನೀರಿನಂತೆ
ಗುಂಡುಹೊಕ್ಕ ಗೆರಿಲ್ಲಾಗೆರೆಗೊಂದು ಬಾಣದ ಗುರುತಿನಂತೆ
ನಿರಾಸೆಗೊಂದು ಭರವಸೆಯಂತೆ
ಪ್ರೇಮಿಗೆ ಏಕಾಂತದಂತೆ
ಮಕ್ಕಳಿಗೆ ಹ್ಯಾರಿಪೋಟರ್‌ನಂತೆ
ಆದರೆ ಈ ತುರಿಕೆ ಮನೆ ಹಾಳಾಗ!

ನಾನೊಬ್ಬ ದೊಡ್ಡ ನಾಯಕನಾಗಬೇಕೆಂದಿದ್ದೆ
ಜನರ ಕಣ್ಣೀರೊರೆಸಲು
ಮುಂದೆ ಕರೆದುಕೊಂಡು ಹೋಗಲು
ಯುದ್ಧ ಮಾಡಲು
ಗೆಲ್ಲಲು
ಕನಿಷ್ಠಪಕ್ಷ ಹಾಗೆ ಮಾಡಲು
ಹೋಗಿ ಅರ್ಧದಾರಿಯಲ್ಲಿ ಬಿದ್ದು ಹೋಗಲು
ಆದರೆ... ಆದರೆ....


ನಾನೊಬ್ಬ ಖ್ಯಾತ ವಿಜ್ಞಾನಿಯಾಗಬೇಕೆಂದಿದ್ದೆ
ಸಂಶೋಧನೆಗೆ ಎಷ್ಟು ವಿಷಯಗಳಿವೆ
ಈ ಭೂಮಿಯಲ್ಲಿ ಈ ವ್ಯೋಮದಲ್ಲಿ
ಈ ಗೆಲಾಕ್ಸಿಯಲ್ಲಿ
ಈಗಷ್ಟೇ ಇಲ್ಲಿ ಚಿಗುರೊಡೆದ ಗರಿಕೆಯಲ್ಲಿ!
ಆದರೆ ಹಾಳಾದ್ದು.....

• ಬಿ.ಜಿ. ಕೃಷ್ಣಮೂರ್ತಿ

ತರೇವಾರಿ ರೈತರ ಫೋನ್ ನಂಬರ್‌ಗಳು

ಕಳೆದ ವಾರ ಬರೆದಿದ್ದ 'ನಾವು ಕಂಡ ತರೇವಾರಿ ರೈತರ' ಬಗ್ಗೆ ಓದಿದ ಕೆಲವರು ಅವರಲ್ಲಿಗೆ ಹೋಗಿ ಬರಲು ಅಪೇಕ್ಷಿಸಿ ಫೋನ್ ನಂಬರ್ ಕೇಳಿದ್ದಾರೆ. ಅದನ್ನಿಲ್ಲಿ ನೀಡಿದ್ದೇವೆ. ಹಾಗೆ ಭೇಟಿಗೆ ಹೋಗುವ ಮುನ್ನ ಆ ರೈತರ ಕೆಲಸ-ಬಿಡುವಿನ ಬಗ್ಗೆ ತಿಳಿದುಕೊಂಡು ಹೋದರೆ ಉತ್ತಮ

ಅಮೋಲ್ : 9900163309
ಕನಕಪುರ ಪಾಶ : 9886230280
ಕೈವಾರ ಸುಬ್ಬಾರೆಡ್ಡಿ: 9448767840



ಕುಮಾರಸ್ವಾಮಿ ಬಾಯಿಲಿ ಇನ್ಯಂಥ ಮಾತು ಬಂದತ್ಲ

ನಾಯಿಗೆ ಕೆಲಸವಿಲ್ಲದಿದ್ದರೂ ಇಡೀ ದಿನ ಸುತ್ತುವಂತೆ ...ಗಿಬಂದ ಸೀರನಿಗೆ ಅವನೆಂದೂ ಕೇಳದೆಯಿದ್ದ ...ದೊಂದು ಕಿವಿಯ ಮೇಲೆ ಬಿದ್ದು ಈ ಬಗ್ಗೆ ಉಗ್ರಿಯನ್ನು ...ಬೇಕೆಂದು ತೀರ್ಮಾನಿಸಿಕೊಂಡು ಬಂದಿದ್ದ. ಆದ್ದರಿಂದ,

"ಲೇ ಉಗ್ರಿ ಹಣ್ಣ ಅರಾಜೆ ಅಂದ್ರೆ ಅವುನ್ಯಾರ್ಲ?" ...ದ.

...ಯ ಉ ಸೀ ಮ ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

"ಹಣ್ಣ ಅರಾಜೆ ಅಲ್ಲ, ಅಣ್ಣ ಹಜಾರೆ ಅಂತ ಕಣೊ. ...ರಮಾವ ಅವುನ ಕಂಡ್ರೆ ಲಂಚ ವಡಿಯೊ ಜನ ...ರರತರೆ. ಮಹಾರಾಷ್ಟ್ರದಲ್ಲಿ ಅವುನ ಮಾತ ಸರ್ಕಾರವೆ ...ದಾಕದಿಲ್ಲ. ಅಂಗೇನಾರ ಮಾಡಿದ್ರೆ ಉಪವಾಸ ...ತುಬುಡತನೆ."

"ಅಂಗರೆ ಮಾರಾಷ್ಟ್ರದಲ್ಲಿ ಯಾರೂ ಲಂಚ ...ಕ್ಕಾಗದಿಲ್ಲ ಅನ್ನು?"

"ತಗತರೆ. ಆದ್ರೆ ಸರಕಾರ ಏನಾರ ತಪ್ಪು ಮಾಡಿದ್ರೆ ...ಣ್ಣಾ ಸುಮ್ಮನಿರದಿಲ್ಲ."

"ನಮ್ಮ ಕಾಳಣ್ಣನೂ ಅಂಗೆ ಅಲವೆ. ಊರಲ್ಲೇನಾರ ... ಮಾಡಿದ್ರೆ ಸುಮ್ಮನಿದ್ದನೆ" ಎಂದ ಸೀರ.

"ಕಾಳಮಾವನ್ನ ಅಣ್ಣ ಹಜಾರೆಗೆ ಹೋಲುಸ್ತಿಯಲ್ಲೊ. ...ವೇಗೌಡ್ರು ತೆಪ್ಪು ಮಾಡ್ಯವುರೆ ಅಂದ್ರೆ ಕಾಳಮಾವ ... ಬಾಯಿಬುಟ್ಟನೂ. ತೀರ ಕೇಳಿದ್ರೆ ಬುಡಿರ್ಲ ...ೀಗಲತ್ತಗೆ. ಯಲ್ಲಾ ಮಾಡಂಗೆ ಅವುನು ಮಾಡ್ಯವುನೆ ...ತನೆ" ಎಂದ ಉಗ್ರಿ.

"ಅದೇನೊ ನಿಜ ಕಂಡ್ರ" ಎಂದಳು ಜುಮ್ಮಿ. ಕುಳಿತ ...ದಲ್ಲೇ ಮಿಸುಕಿದ ಕಾಳಮಾವ,

"ದ್ಯಾವೇಗೌಡನೆ ಆಗ್ಲಿ ಯಾರೇ ಆಗ್ಲಿ ತೆಪ್ಪು ತೆಪ್ಪೆಯ ...ೃ. ನಾನೇನು ಅವುನ ಮನಿಗೆ ಉಣ್ಣಕ್ಕೋದನೆ" ಎಂದು ...ಕಿದ.

"ನೋಡು ಮಾವ, ನಮ್ಮೂರಲ್ಲೇ ಅವುನ್ಯಾವನೊ ...ವೇಗೌಡನ ಕಡೆ ಮುಂಡೆಮಗ ಸಿಮೆಂಟುರೋಡು ಮಾಡಿಸ್ತ ಮಾಡಿಸಿ ಮೂರು ತಿಂಗಳಿಗೇ ಕಿತಗಂಡೋಯ್ತು. ಈಗ ಜಲ್ಲಿಬುಟಗಂಡು ಊರಲ್ಲಿ ತಿರುಗಾಡದೇ ಕಷ್ಟಾಗ್ಯದೆ. ಐರುಗಾಲಿನೋರಂತೂ ನ್ಯಡಿಯಂಗೇಯಿಲ್ಲ. ಸುಮಾರು ಜನ ಮನೆಮುಂದೆ ಮಗ್ಗಾಯ್ಕಂಡು ತಿರುಗಾಡ್ತ ಅವ್ರೆ. ಆ ಮುಂಡೆಮಗನ ಕರದು ನೀನು ಮಕ್ಕುಗಿಬೇಕಾಗಿತ್ತು ಉಗಿಲಿಲ್ಲ."

"ನೀನು ಕರಕಂಡು ಬಂದಿದ್ರೆ ಉಗಿತಿದ್ದೆ ಕಂಡ್ರ. ಅವ್ನೆಲ್ಲ ನನಿಗ್ಯಂಗೊತ್ತಾದವ್ರೂ ನೀವೇ ಹೇಳಬೇಕಪ್ಪ."

"ಇವತ್ನ ಹೇಳತಿನಿ ಮಾಡ್ತಿಯಾ."

"ಹೇಳು ಅದೇನು ಮಾಡನ."

"ಏನುವಿಲ್ಲ. ಜಲ್ಲಿಬುಟಗಂಡಿರೊ ರಸ್ತೆ ಮ್ಯಾಲೆ ತಿರುಗ ಕಾಂಕ್ರೆಟ್ ಹಾಕು ಅಂತ ಊರಮುಂದೆ ಉಪಾಸ ಕುಂತಗ. ಆಗ ಇಡೀ ಊರೇ ನಿನಿಗೆ ಸಪೋರ್ಟು ಮಾಡ್ತದೆ. ಆ ಕಂಟ್ರಾಟ್ ನನ ಮಗನ್ನ ಬಗ್ಗಸಬವುದು. ಅಣ್ಣಾ ಹಜಾರೆ ಮಾಡಿದ್ದು ಅದೇ ಕ್ಯಲಸ. ನೋಡು ಇಡೀ ದೇಶನೆ ಅವನ ಮಾತಿಗೆ ಬಗ್ಗಿಬುಡುತು."

"ಅವುನೇನಂತ ಉಪಾಸ ಮಾಡಿದ್ದ."

"ಅದ ನಾನೇಳ್ತಿನಿ ದ್ವಡಪ್ಪ" ಅಂತ ವಾಟಿಸ್ಸೆ ಹಾಜರಾದ.

"ಹೇಳ್ಳ ಅದೇನು ಅಂತ."

"ರಾಜಕಾರಣಿಗಳು ಮತ್ತೆ ಅಧಿಕಾರಿಗಳು ಸೇರಿ ಇಡೀ ದೇಶನೇ ತಿಂದಾಕ್ತ ಅವ್ರೆ. ಅವುರು ತಿಂದಿರದ ದಾಖಲೆ ಸಮೇತ ದೂರು ಕೊಡ್ತಿವಿ. ತನಿಖೆ ಮಾಡಿ ತಿಂದಿರೊ ದುಡ್ಡ ವಸೂಲು ಮಾಡಿ, ಅವ್ರನ್ನ ಜೈಲಿಗಾಕಿ ಅಂತ ಅಣ್ಣಾ ಹಜಾರೆ ಆಮರಣಾಂತ ಉಪಾಸ ಕುಂತಿದ್ರು. ದ್ವಡಪ್ಪ ನಿಜ ಹೇಳ್ತಿನಿ; ಇಡೀ ದೇಸವೆ ಅವನ ಸಪೋರ್ಟಿಗೆ ನಿಂತು ಬುಡ್ತು. ನಮ್ಮ ಕರ್ನಾಟಕದಲ್ಲೂ ಯಲ್ಲಾರಿಗಿಂತ ಮದ್ಲು ಸಪೋರ್ಟು ಮಾಡಿದೋನು ಎಡೂರಪ್ಪ ಗೊತ್ತ."

"ಎಡೂರಪ್ಪ ಸಪೋರ್ಟು ಮಾಡಿದ್ನೆ?"

"ಊ ದ್ವಡಪ್ಪ, ಅದೇ ಜೋಕ್. ಅವುನ ಸಪೋರ್ಟನ್ನ ನಾವು ಯಂಗೆ ತಿಳಕಬವುದು ಅಂದ್ರೆ, ಹಸಿನೆದ್ರಿಗೆ ಹುಲಿ ನ್ಯಗದುಬಿದ್ದು ಪ್ರಾಣಬುಡ್ತು ನೋಡು ಅಂಗೆ ತಿಳಕಬವುದು."

"ಅದೇನು ಸರಿಯಾಗೇಳ್ಳ?" ಎಂದಳು ಜುಮ್ಮಿ.


"ಏ ಗೋವಿನಕತೆ ಗೊತ್ತಿಲವೇನಕ್ಕ ನಿಂಗೆ. ಹಸುಗಳನ್ನೆಲ್ಲ ತಿಂದೂ ತಿಂದೂ ಕಾಲ ಮಾಡತಿದ್ದ ಹುಲಿ, ಮಾತಿಗೆ ತಪ್ಪದೆ ತಿನ್ನು ಅಂತ ತಿರಗ ಬಂದ ಹಸು ನೆದ್ರಿಗೆ ಆತ್ಮಹತ್ಯೆ ಮಾಡಿಕತ್ತದೆ. ಈ ಎಡೂರಪ್ಪಂದು ಅದೇ ಕತೆ. ಅಧಿಕಾರಕ್ಕೆ ಬಂದಾಗ್ನಿಂದ ಅದೆಷ್ಟು ತಿಂದವುನೆ ಅಂದ್ರೆ, ಅದ ನೋಡಕ್ಯಾಗದೆ ರಾಜ್ಯಪಾಲರ್ರೆ ಇವುನು ಮ್ಯಾಲೆ ಭ್ರಷ್ಟಾಚಾರದ ಕೇಸ ಮಾಡಬವುದು ಅಂತ ರುಜು ಮಾಡ್ಯವೆ ಅಂತ ರುಜು ಮಾಡಿಸಿಗಂಡಿರೋ ಎಡೂರಪ್ಪನೆ ಅಣ್ಣ ಹಜಾರೆಗೆ ನನ್ನ ಬೆಂಬಲ ಅಂದುಬುಟ್ಟವುನೆ" ಎಂದು ವಾಟಿಸ್ಸೆ ನಕ್ಕ.

"ಅವುಂದಿರ್ಲಿ ಕುಮಾರಸ್ವಾಮಿದೇಳೊ."

"ಅವುನೊಬ್ಬ ಪೂಲಿಷ್ ಫೆಲೊ ಕಣೊ, ಅಂಗೂ ಹೇಳಿಕೆ ಕೊಡ್ತರಾ."

"ಅವುನೇನು ಹೇಳಿಕೆ ಕೊಟ್ಟುನ್ನ?" ಎಂದಳು ಜುಮ್ಮಿ.

"ಇವತ್ತು ಗಾಂಧಿ ಇದ್ರೆ ಅವುರೂ ಭ್ರಷ್ಟರಾಯಿತ್ತಿದ್ರಂತೆ.



ಅಣ್ಣ ಹಜಾರೆ ರಾಜಕಾರಣ ಮಾಡಕ್ಕೆ ಬಂದ್ರೆ ಅವುರೂ ಭ್ರಷ್ಟರಾಯ್ತರೆ ಅಂದವುನೆ ಕಣಕ್ಕ."

"ಸರಿಯಾಗೇ ಹೇಳ್ಯವುನೆ ಕಂಡ್ರ" ಎಂದ ಸೀರ.

"ಅದವುನಿಗೆ ಸರಿಯಾದ ಮಾತು ಚಿಗಪ್ಪ, ಗಾಂಧೀಜಿ ಅಪೋರ್ಸ್ ಮಾಡಿದ್ದು ರಾಜಕಾರಣನೆ ಅಲವೆ. ಅವ್ರುರೆಲ್ಲಿ ಭ್ರಷ್ಟ ಕ್ಯಲಸ ಮಾಡಿದ್ರು. ಅವುರಿದ್ರೆ ಅವತ್ತಿನ ರಾಜಕಾರಣನೆ ಇವತ್ತು ಮಾಡೋರು" ಎಂದ ವಾಟಿಸ್ಸೆ.

"ನಿಜ ಕಣೊ, ಶಾಂತವೇರಿ ಗೋಪಾಲಗೌಡ್ರು ಜನಗಳತ್ರ ಕಾಸೀಸಕೊಂಡು ಅಲ್ಲೇ ಖರ್ಚು ಮಾಡಿ ಲಕ್ಕ ಕೊಡೋರಂತೆ. ಕನಿಷ್ಠ ಐದಾರು ಸವುರ ಯಲಕ್ಷನಿಗೆ ಖರ್ಚಾಗೊದಂತೆ. ಅಂತ ಜನಗಳು ಜಾಸ್ತಿಯಾಗಿದ್ರೆ ರಾಜಕಾರಣ ಸ್ಥಟಿಗೆ ಇರದಪ್ಪ" ಎಂದ ಉಗ್ರಿ.

"ಕುಮಾರಸ್ವಾಮಿಗೇನು ಗೊತ್ತೊ ಗಾಂಧೀಜಿ. ಗಾಂಧೀನೆ ಇವತ್ತು ಇದ್ದಿದ್ರೆ ಯಲ್ಲಾ ಕ್ಯಾಂಡೇಟುಗಳು ಅಣ್ಣ ಹಜಾರೆ ತರ ಇರೋರು. ಒಂದೋಟು ಕೊಡಿ ಜ್ವತಿಗೆ ಒಂದು ರೂಪಾಯಿನೂ ಕೊಡಿ ಅನ್ನೋರು. ಮಂಗಳಾರತಿ ತಟ್ಟೆಗೆ ಕಾಸಾಕೊ ನಮ್ಮ ಜನ, ಯಲಕ್ಷನ್ ತಟ್ಟೆಗೆ ಕಾಸಾಕ್ತಿರಲಿಲ್ಲವೆ, ಅಂಗೆ ಜನಗಳ ದುಡ್ಡಲ್ಲೇ ಯಲಕ್ಷನ್ ಮಾಡತಿದ್ರು."

"ನಿಜ ಕಣೊ, ನೋಡೀಗ ನ್ಯಡದ ಮೂರು ಚುನಾವಣೆಗೆ ಒಂದೊಂದು ಕ್ಷೇತ್ರಕ್ಕೂ 30 ಕೋಟಿ ಸುರುದ್ರಂತೆ. ಅದರಲ್ಲಿ ಭಾಗಿಯಾಗಿರೊ ಕುಮಾರಣ್ಣ ಇನ್ನೆನಂದನೂ ಅದೇನಾರ ಆಗ್ಲಿ ಅಣ್ಣ ಹಜಾರೆ ಜನಲೋಕಪಾಲ ಮಸೂದೆ ಬಂದ್ರೆ ಸಾಕು ಅಮ್ಯಾಲೆ ನೋಡಿಕಬವುದು."


"ಅದ್ಯಾವ ಮಸೀದೆನ್ನ?" ಎಂದ ಸೀರ.

"ಅದೇ ಚಿಗಪ್ಪ ಅಣ್ಣಾ ಹಜಾರೆ ತಗಂಬನ್ನಿ ಅಂದರಲ್ಲಾ, ಆ ಮಸೂದೆಲಿ ಅರ್ಧ ಜನ ನಮ್ಮ ಕಾಳದೊಡ್ಡಪ್ಪನಂಥೋರು, ಇನ್ನರ್ಧ ಜನ ರಾಜಕಾರಣಿಗಳಿರತರೆ. ಅವುರು ತಿಂದಿರೊ ಜನಗಳ ಯಕ್ರತ್ತಿನ ಮ್ಯಾಲೆ ಮಿದ್ದು ಕಕ್ಕುಸ್ತರೆ. ಅದ್ಕೆ ಜನಲೋಕಪಾಲ ಮಸೂದೆ ಅಂತರೆ. ಯಾವಾಗ ಬಿಜೆಪಿಗಳು ಭ್ರಷ್ಟರು ಸೇರಿಕೊಂಡು ಚಳವಳಿ ಮಾಡಕ್ಕೆ ತಯಾರಾದ್ರೊ ಆಗ್ಲೆ ಸೋನಿಗಾಂಧಿ ಮನುಮೋಹನ ಸಿಂಗ ಪ್ಲಾನ್ ಮಾಡಿ ಒಪ್ಪಿಗಂಡು ಬುಟ್ರು. ಇಲ್ದೆಯಿದ್ರೆ ಇಲ್ಲಿ ಎಡೂರಪ್ಪ ಅಲ್ಲಿ ಉಮಾಭಾರತಿ, ಗಡಕರಿ ಕ್ವದಾರಿಗಳ್ಯಲ್ಲ ಮ್ಯರದುಬುಡೋರು." ಸೊ ಐ ಯ್ಯಾಮ್ ವೆರಿ ಹ್ಯಾಪಿ." ●

"ನೀವು ಯಾರು ಅಂತ ಕೇಳಬಹುದೆ?"

ನಾನು ಅವರನ್ನು ಗಮನಿಸಿರಲಿಲ್ಲ, ನಾನು ಆ ರೇಸ್‌ಕೋರ್ಸ್‌ನ ಗಣ್ಯ ಕುರ್ಚಿಗಳಲ್ಲಿ ಒಂದನ್ನು ...ಡಿದು (ಅಲ್ಲಿ ನಾನು ಸದಸ್ಯನಲ್ಲ, ಗೆಳೆಯರ ಮರ್ಜಿಯಿಂದ ಹೋದವನು) ಸುಮ್ಮನೇ ಕೂತಿದ್ದೆ. ...ನ್ನೆದುರು ದೈತ್ಯಾಕಾರದ ಬೋರ್ಡ್‌ಗಳ ಮೇಲೆ ಈ ರೇಸ್‌ನ ಬಾವು, ಯಾವುದಕ್ಕೆ ಕಟ್ಟಿದರೆ ಎಷ್ಟು ...ರುತ್ತೆ ಎಂದು ನೋಡುತ್ತಾ 'ಯಾವುದಕ್ಕೆ ಕಟ್ಟಿದರೆ ಎಷ್ಟು ಹೋಗುತ್ತೆ' ಎಂದು ಮುಗುಳ್ನಕ್ಕೆ ...ಷ್ಟರಲ್ಲಿ ಆ ಹೆಣ್ಣುಮಕ್ಕಳು ನನ್ನೆದುರಿನ ಸಾಲಿನಲ್ಲಿ ಕೂತಿದ್ದರು. ನಾನು ಯಾರನ್ನೂ ಗಮನಿಸುವ ...ನಃಸ್ಥಿತಿಯಲ್ಲಿರಲಿಲ್ಲ, ಒಂದೆರಡು ಗಂಟೆಗಳಾದ ಮೇಲೆ ಈ ನಾಲ್ವರು ಹೆಣ್ಣು ಮಕ್ಕಳಲ್ಲಿ ಒಬ್ಬರು ...ತ್ತ ತಿರುಗಿ, "ನೀವು.... ಲಂಕೇಶ್ ಅಲ್ವ?" ಅಂದಳು. ನಾನು ಮುಗುಳ್ನಕ್ಕು ಹೌದೆಂದು ತಲೆಯಲ್ಲಾಡಿಸಿದೆ. ...ರೆ, ಹೌದಂತೆ, ನೀವೇ ಇರಬೇಕು ಅಂತ ಬಂದಕೂಡ್ಲೆ ಅಂದ್ಕೊಂಡೆವು. ಆದರೆ...." ಅಂದಳು. ...ನು ಆದರೆ?" ಅಂದೆ. "ನೀವು ಲಕ್ವಾ ಹೊಡೆದು, ಕಣ್ಣು ಆಪರೇಷನ್ ಆಗಿ ಮಲಗೇಬಟ್ಟಿದ್ದೀರಿ, ...ಳಲಿಕ್ಕೆ ಆಗಲ್ಲ ಅಂದ್ಕೊಂಡಿದ್ದೆವು. ಇಲ್ಲಿ ನೋಡಿದರೆ.... ಎಷ್ಟು ಆರೋಗ್ಯವಾಗಿದ್ದೀರಿ!" ಅಂದಳು. ...ಹೌದ? ಆರೋಗ್ಯವಂತನಾಗಿ ಕಾಣ್ತೇನಾ?" ಅಂದೆ. "ಇಲ್ಲಿರೋ ಎಲ್ಲರಿಗಿಂತ ಜೋರಾಗಿ ಕಾಣ್ತೀರಿ. ...ವು ತುಮಕೂರಿನೋರು. ನನ್ನ ಯಜಮಾನ್ರು ಈ ರೇಸ್‌ಕೋರ್ಸ್‌ನಲ್ಲಿ ಕೆಲಸದಲ್ಲಿದ್ದಾರೆ. ಸುಮ್ಮನೇ ... ಅಂದ್ರು, ಅದಕ್ಕೆ ಬಂದಿದ್ದೆ, ಇವರೆಲ್ಲ ತುಮಕೂರಿನ ಪರಿಚಿತರು" ಅಂದಳು. ಅಷ್ಟೇ ಅಲ್ಲ ...ೋಡಿ, ನಿಮ್ಮ ಪತ್ರಿಕೆಯನ್ನು ಬುಧವಾರ ಬೆಳಗ್ಗೆ ನೋಡದಿದ್ರೆ ಹುಚ್ಚು ಹಿಡಿದಾಗಾಗುತ್ತೆ, ನಿಮಗೆ ...ಯಿಲೆ ಆದಮೇಲಂತೂ ನಮಗೆ ತುಂಬ ಆತಂಕ. ನೀವು ಸುಖವಾಗಿ ಇರುವಂತೆ ...ಗಲಿ, ಎಲ್ಲ ಕಾಯಿಲೆಗಳು ಗುಣವಾಗಲಿ!" ಅಂದು ಅವರೆಲ್ಲ ಹೋದರು.

...ೀಗೆ ಅನೇಕ ತಂಡಗಳು ಒಂದು ದಿನ ಒಬ್ಬ ತರುಣ ನಮ್ಮ ಕಚೇರಿಗೆ ಬಂದು, ...ನಾವು ಅರಸೀಕೆರೆ ಹತ್ತಿರದ ಹಳ್ಳಿಯೋರು. ನನ್ನ ತಾಯಿ, ತಂದೆ ಎಲ್ರೂ ಇಲ್ಲಿಯ ...ದುವೆಯೊಂದಕ್ಕೆ ಬಂದಿದ್ದೇವು. ನಿಮ್ಮನ್ನು ನಾನು ನೋಡಬಹುದು ಅಂತ ನಿಮ್ಮ ...ಾಯಕರು ಹೇಳಿದ್ರು, ನನ್ನ ಹೆತ್ತವರೂ ನೋಡಿದ್ರೆ ಪರವಾಗಿಲ್ವಾ" ಅಂದ. "ಪರವಾಗಿಲ್ಲ, ...ಲ್ಲೇ ಇದ್ರೆ ಕರೆದುಕೊಂಡು ಬನ್ನಿ" ಅಂದೆ. ಅವನ ತಾಯಿ, ತಂದೆ, ಪತ್ನಿ ಅವರ ಮಾತು ...ಎತ್ತ ಕೂತೆ. "ನೀವು ನಾವು ತಿಳಿದಷ್ಟು ಜೋರು ಅಲ್ಲ!" ಅಂತ ಅವರೆಂದದ್ದು ...ಪತ್ರಿಗೂ ನೆನಪಿದೆ. 'ಅಲ್ಲ, ನಾನು ಜೋರಲ್ಲ, ಕೆಲವರು ಹಾಗೆ ಕಲ್ಪಿಸಿಕೊಂಡಿರ್ತಾರೆ ...ನಿಮ್ಮಂಥ ಜನರನ್ನು ನಾನು ನೋಡುವುದೇ ಅಪರೂಪ. ಈ ಮುದುಕಿ ನೋಡಿ– ...e sweetest old woman I have seen" ಎಂದೆ. ಎಲ್ಲರೂ ನಕ್ಕರು. ಇಂಥ ...ನೇಕ ಗುಂಪುಗಳು ಮಂಗಳವಾರ, ಬುಧವಾರ ಪತ್ರಿಕೆ ನೋಡಲು ಕಾಯುತ್ತಿರುವುದೇ ...ಗೆ ಸ್ಫೂರ್ತಿ. ಒಬ್ಬ ಸಂಪಾದಕನಿಗೆ ಹುಮ್ಮಸ್ಸು ಎಲ್ಲೆಲ್ಲಿಂದ ಬರುತ್ತೆ!



ಹಸ್ತ ಶುದ್ಧವಾಗಿರಬೇಕಾದರೆ....


"ಶೇಷನ್ ಎಲೆಕ್ಷನ್ ಆನೆಸ್ಟಾಗಿ ನಡೆಸಬಹುದಾದರೆ ಈ ರಾಜಕಾರಣಿಗಳಿಗೆ ಪ್ರಾಮಾಣಿಕ ಆಡಳಿತ ಕೊಡುವುದಕ್ಕೆ ಏನು ರೋಗ?' ಎಂದು ತೇಜಸ್ವಿ ತಮ್ಮ ಮೈಸೂರಿನ ಭಾಷಣದಲ್ಲಿ ಹೇಳಿದರು. ಕಾನೂನುಕಟ್ಟಳೆ ಮಾಡಿ ರಾಜಕಾರಣಿಗಳು, ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಬಹುದೆಂಬುದು ಅವರ ಇಂಗಿತ. ನಾನು ಇದನ್ನು ವಿರೋಧಿಸಿದೆ. ಕಾನೂನುಗಳಿಂದ ಯಾರನ್ನೂ ಪ್ರಾಮಾಣಿಕ ಮಾಡಲು ಆಗುವುದಿಲ್ಲ. ಸಂಕೋಚ, ಹಿಂಜರಿಕೆ, ಆತಂಕ ಇವೆಲ್ಲ ಇದ್ದವನಿಗೆ ಪ್ರಾಮಾಣಿಕತೆಯ ಪಾಠ, ಪ್ರಾಮಾಣಿಕತೆಯ ಕಾನೂನು ನಿರ್ಬಂಧ ಅನವಶ್ಯಕ. ಇಷ್ಟೇ ಹೇಳಿ ನಿಲ್ಲಿಸಿದರೆ ಆಗುವುದಿಲ್ಲ, ಮನುಷ್ಯರು ತಾನೇತಾನಾಗಿ ಪ್ರಾಮಾಣಿಕರೂ ಹೊಣೆಯರಿತವರೂ ಆಗಿಬಿಡುತ್ತಾರೆಂಬ ಅರ್ಥ ಬರುತ್ತದೆ. ಅದು ಅಷ್ಟು ನಿಜವಿರಲಾರದು.

ಈ ನಾಡಿನಲ್ಲಿ ಎಲ್ಲವೂ ಕಷ್ಟಕರವಾಗಿ ಕಾಣುತ್ತಿದೆ. ಪ್ರಾಮಾಣಿಕತೆ ಸಾಧ್ಯವಿಲ್ಲ! ಮಾರುವ ವಸ್ತುಗಳು ಗುಣಮಟ್ಟದ ದೃಷ್ಟಿಯಿಂದ ಸರಿಯಾಗಿರುವುದು ಸಾಧ್ಯವಿಲ್ಲ! ಲಂಚವಿಲ್ಲದೆ ಕೆಲಸ ಮಾಡುವುದು, ನಮ್ಮ ಕೃತಿಗಳಲ್ಲಿ ಸ್ಪಷ್ಟವಾಗಿದ್ದು ಸಾರ್ವಜನಿಕ ಕೆಲಸವನ್ನು ಸುಲಭಗೊಳಿಸುವುದು ಸಾಧ್ಯವಿಲ್ಲ! ಇದೊಂದು ಕೊಳಕರ ದೇಶವಾಗುತ್ತಿದೆ. ಆದ್ದರಿಂದ ಇವತ್ತು ಯಾವನಾದರೂ ಲಂಚ ತೆಗೆದುಕೊಳ್ಳದೆ ಇರಬೇಕಾದರೆ ವ್ಯಕ್ತಿ ಸ್ವಾಭಿಮಾನದವನಾಗಿರಬೇಕು, ಲಜ್ಜಾವಂತನೂ ನಯವಂತನೂ ಸಂಸ್ಕೃತಿಯುಳ್ಳವನೂ ಆಗಿರಬೇಕು; ಸಾರ್ವಜನಿಕವಾಗಿ ಮುಖಭಂಗವಾಗುವಂಥ ಪರಿಸ್ಥಿತಿಗೆ ಹೆದರಿಕೊಂಡು ವರ್ತಿಸುವವನಾಗಿರಬೇಕು.... ಇತ್ಯಾದಿಯಾಗಿ ಮಾತಾಡುವವನೇ ಹಾಸ್ಯಾಸ್ಪದ ವ್ಯಕ್ತಿಯಾಗಿ ಕಾಣತೊಡಗಿದ್ದಾನೆ–ಇದು ವ್ಯಸನಕರ ವಿಷಯ.

ಏಕೆಂದರೆ ಎಲ್ಲ ಪ್ರಾಮಾಣಿಕತೆಗೂ ವ್ಯಕ್ತಿಯ ಆಳದ ಸಾತ್ವಿಕ ಸಂಪತ್ತು ಬುನಾದಿಯಾಗಿದ್ದರೆ ಚಾರಿತ್ರ್ಯ ಸುಲಭವಾಗುತ್ತದೆ. ಹಣ ಈ ಜಗತ್ತಿನಲ್ಲಿ ಎಲ್ಲವನ್ನೂ ಮಾಡುತ್ತದೆ, ಎಲ್ಲ ಬಗೆಯ ಸಾರ್ಥಕತೆಯನ್ನೂ ತರುತ್ತದೆ ಎಂಬ ತಪ್ಪು ತಿಳಿವಳಿಕೆ ನಮ್ಮ ಜನರ ಕೆಟ್ಟ ನಡವಳಿಕೆಗೆ ಸ್ಫೂರ್ತಿಯೊದಗಿಸುತ್ತದೆ. ಇದು ತಪ್ಪು, ಹಣ ಎಲ್ಲವನ್ನೂ ಮಾಡುವುದಿಲ್ಲ. ನಿಜಕ್ಕೂ ಹಣ ಪೂರ್ತಿಯಾಗಿ ಅಂಧರಾದ ಜನರನ್ನು ಸೃಷ್ಟಿಸುತ್ತದೆ. ಸಿರಿಯ ಗರ ಹೊಡೆದವನಿಗೆ ಚಂದ್ರನ ಬೆಳಕು ಕೂಡ ಅಪಥ್ಯ. ಇದನ್ನು ವಿವರಿಸಬೇಕಾದ್ದಿಲ್ಲ.

ಇದನ್ನೇ ವ್ಯವಹಾರದ ಮಾತುಗಳಲ್ಲಿ ಹೇಳುವುದಾದರೆ, ಎಲ್ಲೆಲ್ಲೂ ಪ್ರಾಮಾಣಿಕತೆ ಹಬ್ಬಬೇಕಾದರೆ ದೇಶದ ನಾಯಕನಾದವನು ಪ್ರಾಮಾಣಿಕನಾಗಿರಬೇಕು. ಅವನ ಸುತ್ತಣ ಜನ ಕಟ್ಟುನಿಟ್ಟಾಗಿ ತಮ್ಮ ನಾಯಕನನ್ನು ಅನುಸರಿಸುವವರಾಗಿರಬೇಕು. ಒಬ್ಬ ನಾಯಕ ಮತ್ತು ಅವನ ಇಪ್ಪತ್ತು ಜನರ ಮಂತ್ರಿಮಂಡಲ ಮತ್ತು ಅವರಿಗೆ ನೆರವಾಗುವ ನೂರು ಜನ ಒಳ್ಳೆಯ ಅಧಿಕಾರಿಗಳು ಇಡೀ ಒಂದು ರಾಜ್ಯವನ್ನು ಶುದ್ಧವಾಗಿಸಬಲ್ಲರು. ಶುದ್ಧ ಹಸ್ತ ಮತ್ತು ಶುದ್ಧ ಮನಸ್ಸಿನಿಂದ ಮಾತ್ರ ದಕ್ಷತೆ ಮತ್ತು ಕ್ರಿಯಾಶೀಲತೆ ಬರುತ್ತವೆ. ಈ ಬಗ್ಗೆ ನನಗೆ ಅನುಮಾನವಿಲ್ಲ.

–ಮಾರ್ಚ್ 29, 1995




ಶ್ರೀಗಳ ಗ್ರಹಚಾರ ಕೆಟ್ಟಾಗ

ಶ್ರೀವರು ಯಾವತ್ತೂ ಇಂತಹ ಯಡವಟ್ಟು ಮಾಡಿಕೊಂಡವರಲ್ಲ. ಏನು ಮಾಡಿದರೂ ಯೋಜನಾಬದ್ಧವಾಗಿ ಮಾಡುತ್ತಿದ್ದರು. ಮಾಡುವ ಕೆಲಸ, ಅದಕ್ಕೆ ಸಿಗಬೇಕಾದ ಪ್ರಚಾರ ಎಲ್ಲವೂ ಕರಾರುವಾಕ್ಕಾಗಿರುತ್ತಿತ್ತು. ಅವರ ಬುದ್ಧಿಗೆ ಅದು ಯಾವ ಸೀಮೆಮಂಕು ಬಡಿದಿತ್ತೊ ಗೊತ್ತಿಲ್ಲ. ಯಾವುದಾದರೂ ಗ್ರಹಣ ಅವರತ್ತ ಕ್ರೂರದೃಷ್ಟಿ ಬೀರಿದ್ದರ ಪರಿಣಾಮ ಇದಾಗಿರಲೂಬಹುದು. ಇಲ್ಲವಾದರೆ ಇಂತಹ ಅಚಾತುರ್ಯ ನಡೆಯಲು ಸಾಧ್ಯವೇ ಇರಲಿಲ್ಲ. ವಿಶ್ವಕಪ್ ಎಂಬ ಸಮೂಹ ಸನ್ನಿ ದೇಶವಾದ ದೇಶವನ್ನೆಲ್ಲ ಆವರಿಸಿತ್ತು. ಮಾಧ್ಯಮಗಳೆಲ್ಲ ತಮ್ಮ ಪಂಚೇಂದ್ರಿಯಗಳನ್ನು ಅದರತ್ತಲೇ ಕೇಂದ್ರೀಕರಿಸಿದ್ದವು. ಬೇರೆ ಯಾವ ಕಡೆಗೂ ಅವರ ಗಮನ ಹರಿಯಲು ಸಾಧ್ಯವೇ ಇರಲಿಲ್ಲ. ಇಂತಹ ಸಮಯವಲ್ಲದ ಸಮಯದಲ್ಲೇ ಪೇಜಾವರ ಶ್ರೀಗಳಿಗೆ ನೆರೆ ಹಾವಳಿಯಿಂದ ನರಳುತ್ತಿರುವ ಸಂತ್ರಸ್ತರ ನೆನಪಾಯಿತು. ಅವರಿಗಾಗಿ ಮರುಗಿತು ಶ್ರೀಗಳ ಮನಸ್ಸು. ನೆರೆ ಬಂದು ಎರಡು ವರ್ಷಗಳೇ ಕಳೆದಿರಬಹುದು. ತಡವಾಗಿಯಾದರೂ ಅವರ ಹೃದಯ ಕರಗಿತಲ್ಲ ಅದು ದೊಡ್ಡದು. ಅವರಿಗೆ ಮನೆ ಕಟ್ಟಿಸಿಕೊಡಲು ಮನಸ್ಸು ಮಾಡಿದರು. ಧನಸಂಗ್ರಹಕ್ಕಾಗಿ ಪಾದಯಾತ್ರೆ ಕೈಗೊಂಡರು. ಇಂತಹ ಕಲ್ಯಾಣ ಕಾರ್ಯಕ್ಕೆ ಮುಂದಾಗಿರುವುದು ವಿಶ್ವ ಕ್ರಿಕೆಟ್ ಮಂಪರಿನಲ್ಲಿ ಮಾಧ್ಯಮಗಳ ಗಮನಕ್ಕೇ ಬಾರದಾಯಿತು! ಅಕಟಕಟಾ ಏನೆಂಬೆನು ಈ ದುರಂತಕೆ....

ಎಲ್ಲಾ ಗ್ರಹಚಾರ. ಪೇಜಾವರ ಶ್ರೀಗಳ ಲೆಕ್ಕಾಚಾರ ಏರುಪೇರಾದದ್ದು ಇದು ಒಂದೇ ಸಲ ಅಲ್ಲ. ಇತ್ತೀಚೆಗೆ ಅವರು ಹಗ್ಗ ಅಂತ ಹಿಡಿದರೆ ಅದು ಹಾವಾಗುತ್ತಿದೆ. ಭಾರತದಲ್ಲಿ ಏನೇ ಸಮಸ್ಯೆ ಉದ್ಭವಿಸಿದರೂ ಅಲ್ಲಿಗೆ ಶ್ರೀಗಳು ದಯಮಾಡಿಸಿ ತಮ್ಮ ಅತ್ಯಮೂಲ್ಯವಾದ ಸಲಹೆಗಳನ್ನು ನೀಡುವುದು ಪರಿಪಾಠವೇ ಆಗಿದೆ. ಆ ಸಮಸ್ಯೆ ಈ ಸಮಸ್ಯೆ ಎಂದು ತಾರತಮ್ಯ ತೋರಿದವರೇ ಅಲ್ಲ. ಇದುವರೆವಿಗೂ ಹೇಳಿದಂತೆ ಕೇಳುತ್ತಾ ಬದ್ದಿದ್ದವುಗಳಲ್ಲಿ ಕೆಲವು ಪೋಕರಿ ಮುಂಡೇ ಮಕ್ಕಳು ಹಿಂತಿರುಗಿ ಮಾತಾಡುವಂತಾಗಿವೆ. ಅವು ಶ್ರೀಗಳು ಪ್ರಪಂಚದ ಎಲ್ಲಾ ಸಮಸ್ಯೆಗಳಿಗೂ ತಮ್ಮ ಮೂಗು ತೂರಿಸುವುದನ್ನು ನಿಲ್ಲಿಸಿ ಆಧ್ಯಾತ್ಮ ಚಿಂತನೆಯತ್ತ ಗಮನ ಹರಿಸಲಿ ಅಂತ ಶ್ರೀಗಳಾದ ಶ್ರೀಗಳಿಗೇ ಬುದ್ಧಿ ಹೇಳುತ್ತಿವೆ ಎಂದರೆ ಅದು ಯಾವುದೋ ಭೂತ ಚೇಷ್ಟೆಯೇ ಸರಿ!

ನಂದಿಕೂರು ಉಷ್ಣ ಸ್ಥಾವರ ವಿರುದ್ಧ ಜನ ಸಿಡಿದೆದ್ದಾಗ ಎಂದಿನಂತೆ ಶ್ರೀಗಳು ಮುಖಂಡತ್ವ ವಹಿಸಿದ್ದರು. ವರ್ಷಗಟುರುಳಿದರೂ ಸಮಸ್ಯೆಗೆ ಪರಿಹಾರ ದೊರಕಿರಲಿಲ್ಲ, ಕೂಲಂಕಷವಾಗಿ ಸಮಸ್ಯೆ ಅರಿಯಲು ಅಲ್ಲಿನ ಅಧಿಕಾರಿಗಳನ್ನು ಕರೆಸಿದರು. ತಿಳಿಸದೆ ನಡೆಸುತ್ತಿದ್ದ ಈ ವಿಚಾರ ವಿನಿಮಯ ಪ್ರಕ್ರಿಯೆ ರೈತರಿಗೆ 'ಸಂಚು' ಆಗಿ ಗೋಚರಿಸಿತು. 'ವರ್ಷಾನುಗಟ್ಟಲೆ ಆದರೂ ಇನ್ನೂ ವಿಷಯ ತಿಳಿಯೋದ್ರಲ್ಲೇ ಇದೀರಾ. ನೀವು ಅವರನ್ನು ಗೋಪ್ಯವಾಗಿ ಕರೆಸಿರೋದು ವ್ಯವಹಾರ ಕುದುರಿಸಲೇ ವಿನಃ ಪರಿಹಾರ ಕಂಡುಹಿಡಿಯೋಕಲ್ಲ!' ಅಂದು ಬಿಡೋದೆ ಶ್ರೀಗಳಾದ ಶ್ರೀಗಳಿಗೇ! ಇಷ್ಟು ಸಾಲದು ಎಂಬಂತೆ 'ನೀವೂ ಬೇಡ, ನಿಮ್ಮ ನಾಯಕತ್ವವೂ ಬೇಡ' ಎಂದು ಕಡ್ಡಿ ಎರಡು ತುಂಡು ಮಾಡಿದ ಹಾಗೆ ಹೇಳಿಬಿಡಬಹುದೆ. ಶ್ರೀಗಳ ನಾಯಕತ್ವವೇ ಬೇಡ ಎನ್ನಬೇಕಾದರೆ...

ಅವರಿಗೇನೋ ಕೇಡುಗಾಲ ಬಂದಿತ್ತು, ಹಾಗೆ ಅಂದೊ. ಯಾವ್ಸೋ ಪೋಕರಿ ಮುಂಡೇವು ಆಡುತ್ತವೆ ಎಂದು ಅವರ ಸಮಕ್ಕೆ ಶ್ರೀಗಳೂ ಆಡುವುದು ತರವಲ್ಲ ತಾನೆ. ಅವು ಹಾಗಂದೊ ಅಂತ ಅವರೇನು ತೆಪ್ಪಗೆ ಕೂರಲಿಲ್ಲ,



ಕಲುಷಿತ ವಾತಾವರಣ ನಿರ್ಮಿಸುತ್ತಿರುವ ಘಟಕ ಮುಚ್ಚುವವರೆವಿಗೂ ಏಕೋಪವಾಸ ಮಾಡ್ತೀನಿ ಅಂತ ಸಾರಿದರು. ಈ ಏಕೋಪವಾಸ ಅಂದರೆ ಒಪ್ಪೊತ್ತು ಊಟ ಮಾಡುವುದಂತೆ. ಅದಕ್ಕೇ ಕೆಲವು ಆಗದವು 'ಓಹೋ ಇದು ಅರ್ಧ ಗಾಂಧಿ ಉಪವಾಸ ಇದ್ದಂಗೆ. ನಮ್ಮ ದೇಶದಲ್ಲಿ ಹೀಗಂತ ಹೇಳಿಕೊಳ್ಳದೆ ಕೋಟ್ಯಂತರ ಜನ ಇರ್‍ತಾರೆ' ಅಂತ ಮೂಗು ಮುರೀತವೆ. ಅದು ಹಾಗಿರಲಿ. ಸರ್ಕಾರ ಮಧ್ಯೆ ಪ್ರವೇಶಿಸಿದರೂ ಏಕೋಕಪವಾಸ ವ್ರತ ಕೈಬಿಡಲ್ಲ ಅಂತಾನೂ ಹೇಳಿದರು.

ಏತಿ ಎಂದರೆ ಪ್ರೇತಿ ಅನ್ನೋದು ಸರ್ಕಾರದ ನೀತಿ ತಾನೆ. ಸರ್ಕಾರ ಮಧ್ಯೆ ಪ್ರವೇಶಿಸಿದರೂ ಉಪವಾಸ ನಿಲ್ಲಿಸಲ್ಲ ಅಂದಿದ್ದರಲ್ಲ ಶ್ರೀಗಳು. ಸರ್ಕಾರ ಏನು ಮಾಡಿತು, ಇವರು ಉಪವಾಸ ಸತ್ಯಾಗ್ರಹ ಬಿಡಬೇಕಾದರೆ ತಾನು ಮಧ್ಯೆ ಪ್ರವೇಶಿಸಬೇಕು ಎಂಬುದಾಗಿ ಅರ್ಥೈಸಿತು. 'ಸ್ವಾಮೀಜಿ ನಿಮ್ಮ ಜೀವ ಬಹಳ ಅಮೂಲ್ಯ, ಅದು ಹೋಗಬಾರದು. ಉಪವಾಸ ನಿಲ್ಲಿಸಿ. ಸಂಧಾನಕಾರರಾಗಿ ನಿಮ್ಮ ಬಳಿಗೆ ಡಾ. ವಿ.ಎಸ್. ಆಚಾರ್ಯ ಬರುತ್ತಾರೆ' ಎಂದು ಪತ್ರ ಬರೆಯಿತು.

ಇಲ್ಲೊಂದು ಸಮಸ್ಯೆ ಹುಟ್ಟಿಕೊಂಡಿತು. ಸ್ವಾಮೀಜಿಗಳಿಗೂ ಅಚಾರ್ಯರಿಗೂ ಎಣ್ಣೆ ಸೀಗೆಕಾಯಿ ನೆಂಟಸ್ತಿಕೆ ಅಂತೆ; 'ಸಂಧಾನ ಅಸಾಧ್ಯ' ಎಂದರು ಸ್ವಾಮೀಜಿ. ಶ್ರೀಗಳ ಏಕೋಪವಾಸವನ್ನು ಆಚಾರ್ಯರ ಗಮನಕ್ಕೆ ಯಾರೋ ತಂದಾಗ 'ಇದರಲ್ಲೇನು ಹೆಚ್ಚುಗಾರಿಕೆ ಇದೆ. ಸನ್ಯಾಸಿಗಳು ಊಟ ಮಾಡುವುದೇ ಒಂದು ಹೊತ್ತು' ಎಂದುಬಿಟ್ಟರು!

ಇನ್ನೂ ಏಕೋಪವಾಸ ಮಾಡುತ್ತಾ ಇದಾರಾ ಶ್ರೀಗಳು ಅಂದರೆ ಮಾಡುತ್ತಲೇ ಇರುತ್ತಿದ್ದರೇನೋ. ಆದರೆ ಭಕ್ತರು ಇದಕ್ಕೆ ಅವಕಾಶ ಕೊಡಬೇಕಲ್ಲ. ಸಂಧಾನ ಅಸಾಧ್ಯ ಎಂದು ಹೇಳಿದ್ದನ್ನ ಸರ್ಕಾರ ಈ ಸಂಧಾನಕಾರ ಬೇಡ ಬೇರೆಯವರನ್ನು ಕಳುಹಿಸಿ ಎಂದು ಅರ್ಥೈಸಿತು. ಮಂಗಳೂರು ಸಂಸದ ವಿನಯಕುಮಾರ ಕಟೀಲರನ್ನು ಕಳುಹಿಸಿತು. ಅವರೂ ಶ್ರೀಗಳ ಭಕ್ತರೇ ಅಂತೆ. ಸಂಧಾನ ಫಲಿಸಿತು!

ಏನೋ ಎಂತೋ. ಪೂಜ್ಯರು ಏಕೋಪವಾಸ ನಿಲ್ಲಿಸಿದರಲ್ಲ ಎನ್ನುವ ಸಂತೋಷ ಜನರಿಗೆ ಇರಬೇಡವೆ. ಉಡುಪಿಗೂ ಆ ಕಟೀಲನಿಗೂ ಯಾವ ಬಾದರಾಯಣ ಸಂಬಂಧ ಇದೆ. ಅವರೇನಿದ್ದರೂ ಮಂಗಳೂರು ಎಂಪಿ, ಉಡುಪಿಗಲ್ಲ. ಅವನ ಮಾತಿಗೆ ಒಪ್ಪಿ ಉಪವಾಸ ನಿಲ್ಲಿಸಿದಾರೆ ಅಂದರೆ ಒಳಗೆ ಏನೋ ನಡೆದಿದೆ ಎಂದೇ ಅರ್ಥ ಅಂತಾವೆ. ಉಪವಾಸ ನಿಲ್ಲಿಸದೆ ಹಾಗಾದರೂ ಸಾಯಲಿ ಅಂತ ಬಯಸುತ್ತಾವೋ ಏನೋ ಪಾಪಿ ಮುಂಡೇವು....


ದೇವರ ಹಣ

ಧೋನಿ ಪಡೆ ವಿಶ್ವಕಪ್ ಪಡೆಯಲು ಹೇಗೆ ಸಾಧ್ಯವಾಯಿತು ಎಂಬ ವಿಷಯ ಕುರಿತು ಆಳವಾದ ಸಂಶೋಧನೆಯಿಂದ ಹೊರಬಿದ್ದ ಕುತೂಹಲಕಾರಿ ಅಂಶಗಳು ಹೀಗಿವೆ.

ವಿಜಯದ ಉನ್ಮಾದದಲ್ಲಿದ್ದ ಧೋನಿ ಹುಡುಗರು ಹೋಟೆಲಿನ ಕೊಠಡಿಯಲ್ಲಿ ಶಾಂಪೇನ್ ಹರಿಸಿ ಸಂತೋಷದಲ್ಲಿ ಮುಳುಗಿದ್ದಾಗ ಧೋನಿ ಅದರಲ್ಲಿ ಪಾಲ್ಗೊಂಡಿರಲಿಲ್ಲ. ಅದಕ್ಕಿಂತಲೂ ಪವಿತ್ರ ಕಾರ್ಯದಲ್ಲಿ ತಲ್ಲೀನನಾಗಿದ್ದ. ತಾನು ನಂಬಿ ಹರಕೆ ಹೊತ್ತಿದ್ದ ದೇವತೆಯ ಪೂಜಾರಿಯ ಆಣತಿಯೇ ಹಾಗಿತ್ತು. ಆತನು ಆ ದಿನ ಪವಿತ್ರ ಗಳಿಗೆಯನ್ನು ಸೂಚಿಸಿದ್ದ. ಆ ಗಳಿಗೆಯಲ್ಲಿ ಕೇಶಮುಂಡನ ಮಾಡಿಸಿಕೊಂಡಲ್ಲಿ ಇಷ್ಟಾರ್ಥಗಳು ಸಿದ್ಧಿಸುತ್ತವೆ ಎಂಬ ಸೂಚನೆ ನೀಡಿದ್ದ. ಅವನು ಇಟ್ಟುಕೊಟ್ಟಿದ್ದ ಮುಹೂರ್ತಕ್ಕನುಗುಣವಾಗಿ ಧೋನಿ ಬೆಳಗಿನ ಜಾವ 2.45 ರಿಂದ ಮೂರು ಗಂಟೆಯ ಒಳಗೆ ಕೇಶ ಮುಂಡನ ಮಾಡಿಕೊಳ್ಳುವುದರಲ್ಲಿ ತಲ್ಲೀನನಾಗಿದ್ದ!

ಧೋನಿ ಈ ರೀತಿ ತಾನು ನಂಬಿದ ದೇವತೆಗೆ ಸುಮುಹೂರ್ತದಲ್ಲಿ ಕೂದಲು ಅರ್ಪಿಸುವ ಹರಕೆ ಹೊತ್ತಿದ್ದರೆ ಶ್ರೀಶಾಂತ್ ವಿಷಯವೇ ಬೇರೆ ತರಹದ್ದು. ಇಂಡಿಯಾ ವಿಶ್ವಕಪ್ ಗೆಲ್ಲಲಿ ಎಂದು, ದ್ರೌಪದಿ ಮುಡಿ ಕಟ್ಟುವುದಿಲ್ಲ ಎಂದು ಶಪಥ ಕೈಗೊಂಡಂತೆ ಈ ಹುಡುಗ ಕೂದಲು ಕತ್ತರಿಸುವುದಿಲ್ಲ ಎಂದು ಹಠ ಹೊತ್ತಿದ್ದ! ಇನ್ನೇನು ಗೆದ್ದು ಆಯಿತಲ್ಲ ಈಗ ತಿರುಪತಿಗೆ ಹೋಗಿ ವೆಂಕಟೇಶ್ವರನಿಗೆ ಮುಡಿ ಒಪ್ಪಿಸುತ್ತಾನಂತೆ!

ಎಚ್.ಎಲ್. ಕೇಶವಮೂರ್ತಿ



ಅಣಕ

ಇದು ಧಾರ್ಮಿಕ ಹಿಂದೂ ಹುಡುಗರ ಹರಕೆ ರೀತಿ ಆದರೆ ಇತರೆ ಧರ್ಮದವರೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಹರಭಜನ್ ಸಿಂಗ್ 'ನಮ್ಮ ಗೆಲುವಿಗೆ ಸದ್ಗುರು ಹನ್ನಾಲಿವಾಲಾ, ಗುರುನಾನಕ್ ದೇವ್, ರಾಮದಾಸ್‌ಜೀ ಅವರ ಕೃಪಾಶೀರ್ವಾದವೇ ಕಾರಣ. ದೇವರ ದಯೆ ಇಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ' ಎಂದ. ಇದಕ್ಕೆ ಪೂರಕವೋ ಎಂಬಂತೆ ಸೆಮಿಫೈನಲ್‌ಗೆ ಮುಂಚೆ ಬೆಂಗಳೂರಿನ ಶನೇಶ್ವರ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿದ್ದ. ಇದೇ ರೀತಿ ಯುವರಾಜ್ ಸಿಂಗ್ ಗುರುದ್ವಾರಗಳಿಗೆ ಭೇಟಿ ಇತ್ತಾಗ ಅಲ್ಲಿ 'ನೀನು ಶಾಂತಿಯಿಂದಿರು ಯಾವುದರಿಂದಲೂ ಪ್ರಚೋದನೆಗೆ ಒಳಗಾಗಬೇಡ' ಎಂಬ ಹಿತವಚನ ಕೇಳಿದನಂತೆ. ಗುರುವಚನ ಪಾಲನೆಯೇ ತಮ್ಮ ಯಶಸ್ಸಿಗೆ ಕಾರಣ ಎಂದಿದ್ದಾನೆ.

ಜಹೀರ್ ಖಾನ್, ಯೂಸುಫ್ ಪಠಾಣ್ ಅವರು ದರ್ಗಾಕ್ಕೆ ಭೇಟಿ ನೀಡಿ ತಮ್ಮ ನಮನ ಸಲ್ಲಿಸಿದರು.


ಲಿಟಲ್ ಮಾಸ್ಟರ್ ಸಚಿನ್ ತೆಂಡೂಲ್ಕರ್‌ಗೆ ಸರ್ಪ ದೋಷ ಇತ್ತು. ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ದೇವರನ್ನು ಪೂಜಿಸಿ ದೋಷ ನಿವಾರಿಸಿಕೊಂಡ. ಅದು ಆದನಂತರ ವಿಶ್ವಕಪ್ ಭಾರತದ ಮಡಿಲಿಗೆ ಬತ್ತು!

ಅಂದರೆ ಭಾರತಕ್ಕೆ ವಿಶ್ವಕಪ್ ಬರಲು ದೇವರು ಕಾರಣ ಎಂದ ಹಾಗಾಯಿತು. ಇದನ್ನು ಧಾರ್ಮಿಕ ಕ್ರಿಕೆಟಿಗರು ನಂಬಿದ್ದಾರೆ. ಆದರೆ ಒಂದು, ಈ ಕ್ರಿಕೆಟಿಗರಿಗೆ ಕೋಟಿಕೋಟಿ ಹಣ ಹರಿದು ಬರುತ್ತಾ ಇದೆ. ಸುಳಿವು ಅರಿತ ದೇವರ ಅರ್ಚಕರು ಈ ಹಣ ಸೇರಬೇಕಾದ್ದು ನಿಮಗಲ್ಲ ದೇವರಿಗೆ ಅಂತ ತಕರಾರು ಹೂಡಿದರೆ....

ದೇವರನ್ನು ಭ್ರಷ್ಟನನ್ನಾಗಿಸುವ ನಮ್ಮ ವ್ಯವಸ್ಥೆ


ಅಣ್ಣ ಹಜಾರೆಯವರ ವ್ಯಕ್ತಿಗತ ನಿರಶನ ಮತ್ತು ಭಾರತದ ವ್ಯವಸ್ಥಿತ ಭ್ರಷ್ಟಾಚಾರದ ಬಗ್ಗೆ ಶಿವಸುಂದರ್ ಹೇಳಿದ್ದು ಸರಿ- "ಎಲ್ಲಿಯತನಕ ಭ್ರಷ್ಟಾಚಾರದ ಮೂಲಗಳನ್ನು ವ್ಯವಸ್ಥೆಯಲ್ಲಿ ಹುಡುಕುವುದನ್ನು ಬಿಟ್ಟು ವ್ಯಕ್ತಿಗಳಲ್ಲಿ ಮಾತ್ರ ಹುಡುಕುತ್ತಿರುತ್ತೇವೆಯೋ ಅಲ್ಲಿಯತನಕ ಸಾಮಾನ್ಯ ಪುಡಿಗಳ್ಳರು ಸಾವಿರಾರು ಸಿಗುತ್ತಾರೆ. ಆದರೆ ದರೋಡೆಕೋರರು ಮಾತ್ರ ರಾಜಕಾರಣಿಗಳಾಗಿ ಅಥವಾ ಕಾರ್ಪೊರೇಟ್ ಅಧಿಪತಿಗಳಾಗಿ ಮೆರೆಯುತ್ತಿರುತ್ತಾರೆ."

ಇಂದಿನ ನಮ್ಮ ರಾಜಕೀಯ ವ್ಯವಸ್ಥೆ ಎಂತಹುದೆಂದರೆ ಕೇವಲ ಒಬ್ಬ ನಿರ್ಲಜ್ಜ ಭ್ರಷ್ಟ ಮಾತ್ರ ರಾಜಕಾರಣಿಯಾಗಬಲ್ಲ, ಪ್ರಾಮಾಣಿಕ ಕೇವಲ ರಾಜಕಾರಣಿಯ ಕಾರಿನ ಡ್ರೈವರ್ ಮಾತ್ರ ಆಗಬಲ್ಲ."ಹೌದು ನಾನು ಶತಭ್ರಷ್ಟ. ನೀನೇನ್ ಮಾಡ್ತೋತಿಯೋ ಮಾಡ್ಕೋ ಹೋಗು" ಎನ್ನುವಷ್ಟು ಭಂಡತನ, ದಪ್ಪ ಚರ್ಮ ಎಲ್ಲೆಡೆ ಬೆಳೆದುಬಿಟ್ಟಿದೆ. ಯಾರಾದರೂ ಪ್ರಾಮಾಣಿಕನೊಬ್ಬ ಧೈರ್ಯವಾಗಿ ಭ್ರಷ್ಟಾಚಾರಿಗಳ ವಿರುದ್ಧ ದೂರು ಕೊಟ್ಟರೂ ಕೊನೆಗೆ ಅವನೇ ಸೋಲುವುದು ಹಾಗೂ ಸೇಡಿಗೆ ಬಲಿಯಾಗುವುದು.



ಈ ಹಳೇ ಉಕ್ತಿ ಭಾರತಕ್ಕೆ ಈಗ ತುಂಬಾ ಅನ್ವಯ-"ಸರ್ವಾಧಿಕಾರವೆಂದರೆ ಓರ್ವನೇ ದುಷ್ಟ-ಭ್ರಷ್ಟನ ನಿರಂಕುಶ ಆಡಳಿತ. ಆದರೆ ಪ್ರಜಾಪ್ರಭುತ್ವವೆಂದರೆ ಸಾವಿರಾರು ಭ್ರಷ್ಟ-ದುಷ್ಟರ ತ್ರಿಶಂಕು ಆಡಳಿತ". ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹದ ಯಶಸ್ಸಿನ ಬಗ್ಗೆ ಹಲವರು ಆಶಾಭರಿತರಾಗಿದ್ದಾರೆ. ಆದರೆ ಹೆಚ್ಚಿನವರು ಹೇಳುತ್ತಿರುವುದು "ಹಜಾರೊಂ ಅಣ್ಣಾ ಹಜಾರೇ ಆಯೇ, ಭಾರತ್ ಭ್ರಷ್ಟಾಚಾರ್‌ಸೆ ಮುಕ್ತ ನಹೀ ಹೋಗಾ" (ಸಾವಿರಾರು ಅಣ್ಣಾ ಹಜಾರೆ ಬಂದರೂ ಭಾರತದಿಂದ ಭ್ರಷ್ಟಾಚಾರವನ್ನು ಓಡಿಸುವುದು ಸಾಧ್ಯವೇ ಇಲ್ಲ)

ಇದಕ್ಕೆ ಕಾರಣ ಭ್ರಷ್ಟಾಚಾರವೆನ್ನುವುದು ಈಗ ಭಾರತೀಯರ ರಕ್ತದಲ್ಲೇ ಕೂಡಿದೆ ಹಾಗೂ ಧರ್ಮದಲ್ಲೂ ಕೂಡಿಕೊಂಡಿದೆ. ಹೇಗೆಂದರೆ ಭ್ರಷ್ಟಾಚಾರದಿಂದ ಕಮಾಯಿಸಿದ ಹಣದಲ್ಲಿ ಸ್ವಲ್ಪಭಾಗ ದೇವರ ಪೂಜೆ-ಹೋಮಗಳಿಗೆ ಖರ್ಚು ಮಾಡಿದರೆ, ಮಠಾಧೀಶ-ಸ್ವಾಮಿಗಳ ಪಾದಪೂಜೆ ಮಾಡಿದರೆ ಸಾಕು. ದೇವರೂ ಭ್ರಷ್ಟಾಚಾರಿಗಳನ್ನು ಸಂರಕ್ಷಿಸುತ್ತಾನೆ ಎಂಬ ನಂಬಿಕೆ ಬೇರು ಬಿಟ್ಟಿದೆ. (ಅಂದರೆ ದೇವರೂ ಭ್ರಷ್ಟಾಚಾರಿ ಎಂದಾಯಿತು!)



ಭ್ರಷ್ಟಾಚಾರಕ್ಕೆ ಎಲ್ಲಾ ಭಾರತೀಯರೂ ಮಾನಸಿಕವಾಗಿ ಅಡ್ಜಸ್ಟ್ ಆಗಿಬಿಟ್ಟಿದ್ದಾರೆ. ಮೇಲಾಗಿ ಭ್ರಷ್ಟಾಚಾರವೇ ಪ್ರಜಾಪ್ರಭುತ್ವದ ಪ್ರಾಣವಾಯು. ಕಾರಣ ಚುನಾವಣಾ ರಾಜಕೀಯಕ್ಕೆ, ಪಾರ್ಟಿ ಫಂಡ್‌ಗೆ ಹಣ ಬೇಕು ತಾನೇ. ಅದು ಕೇವಲ ಭ್ರಷ್ಟ ಮೂಲಗಳಿಂದ ಮಾತ್ರ ಹುಟ್ಟಲು ಸಾಧ್ಯ. ಇದರರ್ಥ ಭ್ರಷ್ಟಾಚಾರ ಮತ್ತು ಪ್ರಜಾಪ್ರಭುತ್ವ ಬೇರ್ಪಡಿಸಲಾಗದ ಸಯಾಮಿ ಟ್ವಿನ್ಸ್. ಜನರ ಮಾನಸಿಕತೆ ಈಗ ಎಂತಹದ್ದೆಂದರೆ-"ನೋಡಿ ಅಲ್ಲೊಬ್ಬ ಪ್ರಾಮಾಣಿಕನಿದ್ದಾನೆ" ಎಂದು ನೀವು ಹೇಳಿದರೆ ಜನ ನಿಮ್ಮನ್ನು ನಂಬುವುದೇ ಇಲ್ಲ!

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಏಪ್ರಿಲ್ 13ರ ಸಂಚಿಕೆಯಲ್ಲಿ ಪಾರ್ವತೀಶರು ಬರೆದ 'ನಾವು ಕಂಡ ತರೇವಾರಿ ರೈತರು' ಓದಿ ನಮ್ಮ ಅಪರೂಪದ ರೈತರ ಬಗ್ಗೆ ಹೆಮ್ಮೆ ಅನಿಸಿತು.

ಮುಖ್ಯವಾಗಿ : ಕೃಷಿಪತ್ರಿಕೆ (ಮಾಸಿಕ) ಮಾಡುವ ಐಡಿಯಾ ನನ್ನನ್ನು ಬಹಳ ಕಾಡಿತು. ಯಾಕೆಂದರೆ ಇವತ್ತು ಅನೇಕ ಪತ್ರಿಕೆಗಳಿಗೆ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಬರುತ್ತಿರುವ ಕೃಷಿಯ ಬಗೆಗಿನ ಕಾರ್ಯಕ್ರಮಗಳು ಎಷ್ಟು ಅಧ್ವಾನವಾಗಿರುತ್ತವೆಯೆಂದರೆ, ನಮ್ಮ ಅಳಿದುಳಿದ ಕೃಷಿಯ ತಿಥಿ ಮಾಡುವಂತಿರುತ್ತದೆ. ಇನ್ನು ಸರಕಾರದ ಕೃಷಿ ಕಟಾಕ್ಷಮರದಲ್ಲಿರುವ ದೂರದರ್ಶನ- ಆಕಾಶವಾಣಿಗಳು ಭಾರತದ ಪ್ರತಿ ರೈತನೂ ಬೆಂಜ್ ಕಾರಲ್ಲೇ ಓಡಾಡುತ್ತಿರುತ್ತಾನೆಂಬಂತೆ ನಮ್ಮ ಕಿವಿಗಳಿಗೆ ಸತತವಾಗಿ ಹೂವು ಮುಡಿಸುತ್ತಲಿವೆ.

ಹಾಗಾಗಿ ಸಣ್ಣ ರೈತನೊಬ್ಬನ ಅಗತ್ಯಗಳೇನು? ಅವ ಸಮಸ್ಯೆಗಳೇನು? ಮತ್ತು ಅವನ ಅಗತ್ಯಗಳನ್ನು ಪೂರೈಸಿ, ಸಮಸ್ಯೆಗಳನ್ನು ಪರಿಹರಿಸಲು ಇರಬಹುದಾದ ಸರಳವಾದ ಆದರೆ ಪ್ರಾಕ್ಟಿಕಲ್ ಆದ ಮಾರ್ಗಗಳೇನು? ಎಂಬುದನ್ನು ಸಾಮಾನ್ಯ ರೈತರಿಗೂ ಅರ್ಥವಾಗುವ ರೀತಿಯಲ್ಲಿ ಚರ್ಚಿಸಬಹುದಾದಂತಹ ಒಂದು ಪುಟ್ಟ ಪತ್ರಿಕೆಯನ್ನು ತಂದರೆ ಸಾವಿರಾರು ರೈತರಿಗೆ ಅನುಕೂಲವಾಗುತ್ತದೆ ಅನ್ನುವುದು ನನ್ನ ಅನಿಸಿಕೆ.

ಪತ್ರಿಕೆ ಪ್ರಾರಂಭವಾಗುತ್ತದೆಯೋ, ಬಿಡುತ್ತದೆಯೋ ಅದು ಬೇರೆ ವಿಷಯ. ಆದರೆ ಈ ಬಗ್ಗೆ ಚರ್ಚೆಯಾಗುವುದು ಅಗತ್ಯ.


-ತರೀಕೆರೆ ಮಧುಸೂದನ್, ತರೀಕೆರೆ

ಮಾರ್ಚ್ 13ರ ಸಂಚಿಕೆಯಲ್ಲಿ ಪ್ರಕಟಗೊಂಡ 'ಬಾದಾಮಿ ಸಾಹಿತ್ಯ ಸಮ್ಮೇಳನವೆಂಬ ಕೇಸರಿ ಕಥಕ್ಕಳಿ!' ಎಂಬ ವರದಿಗೆ ಈ ಪ್ರತಿಕ್ರಿಯೆ. ಪತ್ರಿಕೆ ವರದಿಗಾರ ವಿ.ಪಿ.ಮೇಘರಾಜ್ ಅವರ ವರದಿ ವಾಸ್ತವಿಕ ಸಂಗತಿಗೆ ಕೈಗನ್ನಡಿಯಂತಿದೆ. ಬಾಗಲಕೋಟೆಯ ಜಿಲ್ಲಾ 3ನೇ ಸಮ್ಮೇಳನ ಕೇಸರೀಕರಣ ಪುರೋಹಿತಶಾಹಿಗಳ ದರ್ಬಾರಿನಲ್ಲಿ ಬಾದಾಮಿಯಲ್ಲಿ ನಡೆದಿರುವುದು ಸತ್ಯ. ಪತ್ರಿಕೆ ವರದಿಯಲ್ಲಿ ಇನ್ನು ಕೆಲವು ಅಪಸವ್ಯಗಳು ಪ್ರಕಟವಾಗಿಲ್ಲ. ಕಸಾಪ ಅಧ್ಯಕ್ಷ ವೆಂಕಟೇಶ್ ಇನಾಮದಾರನೆಂಬ ಭ್ರಷ್ಟ ಬ್ರಾಹ್ಮಣ ಜಾತಿಪ್ರೇಮದಿಂದ ಸ್ವಜಾತಿ ಲೇಖಕಿ ಕಸ್ತೂರಿ ಬಾಯರಿ ಎಂಬ ಬಲಪಂಥಿ ನಿಲುವಿನ ಲೇಖಕಿಯ 'ಅಕ್ಕ' ಎನ್ನುವ ಕಾವ್ಯ ಸಂಕಲನವನ್ನು ಸಮ್ಮೇಳನದ ದುಡ್ಡಿನಲ್ಲೇ ಹೊರತಂದಿದ್ದಾನೆ. ಅಪ್ಪಟ ಜಾತಿವಾದಿ ಲೇಖಕಿ ಬಾಯರಿಯ ಪುಸ್ತಕ ಹೊರತರುವ ಮೂಲಕ ಅಪ್ಪಟ ಜಾತಿ ಬ್ರಾಹ್ಮಣಿಕೆ ಮೆರೆದಿರುವುದು ಕನ್ನಡ ಸಾರಸ್ವತ ಲೋಕದ ದುರಂತವಲ್ಲದೇ ಮತ್ತೇನು?

-ಜೆ.ಬಿ. ಹೊಸಮನಿ, ಬಾದಾಮಿ

'ಕಮಿಟ್‌ಮೆಂಟ್' ಕರ್ಮಕಾಂಡ ನೇಹಾಯಣ





ಗಂಗು

ೕಮ್ಯಾಯಣದ ಬಿಸಿ ಆರುವ ಮುನ್ನವೇ ಈಗ ಯಣ ಆರಂಭವಾಗಿದೆ!

ರ್ದೇಶಕ 'ದಾಡಿ' ಮಹೇಶ್‌ರ ದುರಾದೃಷ್ಟವೋ ? ಈತ ಕಾಲಿಟ್ಟಲ್ಲೆಲ್ಲಾ ವಿವಾದಗಳೇ ಜನ್ಮತಾಳುತ್ತಿವೆ. ವರ್ಷ ಗಣೇಶ್ ನಟನೆಯ 'ಕೂಲ್' ಸಿನಿಮಾಕ್ಕೆ ಶಕನಾಗಿದ್ದ ಮಹೇಶ್ ಆನಂತರ ನಿರ್ಮಾಪಕಿ ಶಿಲ್ಪಾ ಶ್ ಜೊತೆ ಯರ್ರಾಬಿರ್ರಿ ಜಗಳಾಡಿಕೊಂಡು ಬಿದ್ದಿದ್ದರು. ಈಗ ಜಗ್ಗೇಶ್ ಮಗ ಗುರುರಾಜ ಹೀರೋ ಟಿಸುತ್ತಿರುವ 'ಸಂಕ್ರಾಂತಿ' ಚಿತ್ರವನ್ನು ನಿರ್ದೇಶಿಸುತ್ತಿರುವ ಶ್ ಆ ಚಿತ್ರದ ನಾಯಕಿ ನೇಹಾ ಪಾಟೀಲ್‌ಗೆ

ಜಗ್ಗೇಶ್ ಮಗ ಗುರು



ಪಾಸ್ ನೀಡಿ ಸುದ್ದಿಯಾಗಿದ್ದಾರೆ.

ಂಕ್ರಾಂತಿ'ಯಿಂದ ಎತ್ತಂಗಡಿಯಾಗಿರುವ ನೇಹಾ ಲ್ ಹುಬ್ಬಳ್ಳಿ ಮೂಲದವಳು. "ಆ ಹುಡ್ಗೀಗೆ ಮಾಡೋದಕ್ಕೇ ಬರೋದಿಲ್ಲ, ಇವಳು ಒಂದು ಓಕೆ ಮಾಡೋವಷ್ಟರಲ್ಲಿ ಕ್ಯಾಮೆರಾ ಕ್ಯಾನುಗಟ್ಟಲೇ ನುಂಗುತ್ತದೆ" ಎಂದು ಮಹೇಶ್ ಆರೋಪಿಸಿ ನ್ನು ಚಿತ್ರತಂಡದಿಂದ ಹೊರಕ್ಕೆ ಬಿಸಾಕಿದ್ದಾರೆ.

ದರೆ ನೇಹಾ ಪಾಟೀಲ್ ಮಾತ್ರ ಚಾನೆಲ್ಲುಗಳ ಲ್ಲಿ ಕೂತು "ಅಯ್ಯೋ, ನನ್ನನ್ನು ಮತ್ತು ನಮ್ಮಮ್ಮನನ್ನು ನಿಮಾದ ನಿರ್ಮಾಪಕ, ಮೇಕಪ್ ಮ್ಯಾನ್ ಮತ್ತು ಕ್ಷನ್ ಮ್ಯಾನೇಜರ್ ಮಂಚಕ್ಕೆ ಕರೆದರು" ಎಂದು ನೇರವಾಗಿ ಆರೋಪಿಸಿದ್ದಾಳೆ. ಅದು ನಿಜವಾ?

ಸಿನಿಮಾ ಇಂಡಸ್ಟ್ರಿಯಲ್ಲಿ ನಿರ್ಮಾಪಕರು, ಪ್ರೊಡಕ್ಷನ್ ಮ್ಯಾನೇಜರುಗಳು, ಕೋಆರ್ಡಿನೇಟರುಗಳು, ಇತರರು ಹೀಗೆ ಹುಡುಗಿಯರನ್ನು "ಕರೆದವರು" ಬಹಳಷ್ಟು ಜನ ಇದ್ದಾರೆ. ಈಗ ನೇಹಾ ಇಂತಹದ್ದೊಂದು ಆರೋಪ ಮಾಡುತ್ತಿರಬಹುದು. ಆದರೆ ಬಹಳಷ್ಟು ಹುಡುಗಿಯರು ಇದರ ಬಗ್ಗೆ ಸೊಲ್ಲೆತ್ತದೆ ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಿರುತ್ತಾರೆ. ಇದು ಚಿತ್ರರಂಗದ ಒಂದು ದುರಂತ.


ಸಿನಿಮಾವೊಂದು ಸೆಟ್ಟೇರುವ ಮುನ್ನ ಕಲಾವಿದರ ಆಯ್ಕೆ ನಡೆಯುತ್ತದೆ. ಇಂಥ ಸಂದರ್ಭದಲ್ಲಿ ಹೊಸ ಹೀರೋಯಿನ್ ಸೇರಿದಂತೆ ಪೋಷಕ ಕಲಾವಿದರಿಗೆ ಛಾನ್ಸು ಕೊಡುವಾಗ ಬಹುಪಾಲು ಪ್ರೊಡಕ್ಷನ್ ಮ್ಯಾನೇಜರ್‌ಗಳು "ಕಮಿಟ್ ಮೆಂಟ್ ಇರುತ್ತೆ, ಓಕೇನಾ?" ಎನ್ನುತ್ತಾರೆ. ಗಾಂಧಿನಗರದ ಪರಿಭಾಷೆಯಲ್ಲಿ 'ಕಮಿಟ್‌ಮೆಂಟ್' ಎಂದರೆ 'ಮಲಗೋಕೆ ರೆಡಿನಾ?' ಎಂದು. ಒಂದು ವೇಳೆ ನಾಯಕಿ ಅಥವಾ ಇನ್ಯಾವುದೇ ಸಹ ಕಲಾವಿದೆ 'ಓಕೆ' ಎಂದರೆ ಅವರಿಗೆ ಛಾನ್ಸು, ಇಲ್ಲದಿದ್ದರೆ ಅವರು ರಿಜೆಕ್ಟ್!

ಚಿತ್ರರಂಗದಲ್ಲಿ ಗಾಡ್‌ಫಾದರ್‌ಗಳಿದ್ದರೆ ಅಥವಾ ಬೇರೆ ವಲಯದ ಪ್ರಭಾವಿಗಳ ರಕ್ಷಣೆ ಇದ್ದರೆ ಅಥವಾ ನಿಜವಾಗಲೂ ಸಂಭಾವಿತರಾದ ನಿರ್ಮಾಪಕ ಮತ್ತು ನಿರ್ದೇಶಕರ ಚಿತ್ರದಲ್ಲಿ ಅದೃಷ್ಟವಶಾತ್ ಅವಕಾಶ ಸಿಕ್ಕರೆ ಹೊಸ ನಟಿಯರು ಇಂತಹ 'ಕಮಿಟ್‌ಮೆಂಟ್'ಗಳಿಂದ ವಿನಾಯ್ತಿ ಪಡೆಯುತ್ತಾರೆ. ಆದರೆ ಸಿನಿಮಾ ನಟಿಯಾಗಬೇಕೆಂದು ಊರು ಬಿಟ್ಟು ಬಂದವರು, ಹೀರೋಯಿನ್ ಆಗಿ ದೊಡ್ಡ ಹೆಸರು ಮಾಡಬೇಕು ಎಂದು ಕನಸು ಹೊತ್ತವರು ಚಿತ್ರರಂಗದ ಹಲವು ದುಷ್ಟರಿಗೆ ಬಲಿಯಾಗುತ್ತಾರೆ.

ಹೀಗೆ ಸಿನಿಮಾದಲ್ಲಿ ಛಾನ್ಸು ಅರಸಿ ಬರುವ ಹುಡುಗಿಯರನ್ನು ಮುಕ್ಕುವ ಲಫಂಗರಿಗೇನೂ ಗಾಂಧಿನಗರದಲ್ಲಿ ಕೊರತೆ ಇಲ್ಲ, ಅಂಥವರ ಪೈಕಿ ಗಂಗು ಎಂಬ ಪ್ರೊಡಕ್ಷನ್ ಮ್ಯಾನೇಜರನದು ಎತ್ತಿದ ಕೈ! 'ಮಾದೇಶ' ಸಿನಿಮಾದ ಪ್ರೊಡ್ಯೂಸರ್ ಗೋವರ್ಧನ ಮೂರ್ತಿಗೆ ಹುಡುಗಿಯರ ರುಚಿ ತೋರಿಸಿ ಆತನನ್ನು ಕುಲಗೆಡಿಸಿದವನು ಇದೇ ಗಂಗು. ಕಡೆಗೆ ಅದೇ ಗೋವರ್ಧನ ಮೂರ್ತಿಯನ್ನು ಭರ್ಜರಿಯಾಗಿ ಬೋಳಿಸಿ ಆತನಿಂದ ರುಬ್ಬಿಸಿಕೊಂಡವನೂ ಇವನೇ. ಗಾಂಧಿನಗರದಲ್ಲಿ ಈತ 'ಚಪ್ಪರ್ ಗಂಗು' ಎಂದೇ ಫೇಮಸ್ಸು!

ಹಿಂದೆ ಜಯಶ್ರೀದೇವಿ ನಿರ್ಮಾಣದ ಬಹುತೇಕ ಸಿನಿಮಾಗಳಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಆಗಿದ್ದ ಗಂಗು ಆಕೆಯನ್ನು ಮುಂಡಾ ಮೋಚಿದ್ದ, ಆನಂತರ ಗಂಗು 'ಗವರ್ನಮೆಂಟ್' ಅನ್ನೋ ಸಿನಿಮಾವೊಂದನ್ನು ನಿರ್ಮಿಸಿದ್ದ. ಈತನ 'ಗವರ್ನಮೆಂಟು' ಗಬ್ಬೆದ್ದು ಹೋದನಂತರ ಮತ್ತೆ ಪ್ರೊಡಕ್ಷನ್ ಮ್ಯಾನೇಜರ್ ಕೆಲಸಕ್ಕೆ ತಗುಲಿಕೊಂಡ ಗಂಗು ನುಂಗಿಹಾಕಿದ್ದು ಒಬ್ಬಿಬ್ಬರು ಹುಡುಗಿಯರನ್ನಲ್ಲ.

ಆರೆಸ್ಸ್ ಗೌಡ



ಎಲ್ಲ ವಿಚಾರ-ವ್ಯವಹಾರಗಳನ್ನು ನೇರವಾಗಿ ಮಾತಾಡಿ ಹುಡುಗಿಯರನ್ನು ನಿರ್ಮಾಪಕರಿಗೆ 'ಅಡ್ಜಸ್ಟ್' ಮಾಡಿಕೊಡುವ ಗಂಗು ತನ್ನ ಧಣಿಗಳಿಗೂ ಮುನ್ನ ಸ್ವಕಾರ್ಯಗಳನ್ನು ಮುಗಿಸಿಕೊಳ್ಳುವ ಕಿಲಾಡಿ! ಹೀಗೆ ಹುಡುಗಿಯರಿಗೆ 'ಅವಕಾಶ' ಕೊಡಿಸುವ ಗಂಗು ಅವರಿಂದ 'ಆರ್ಟಿಸ್ಟ್ ಕಮಿಷನ್' ಪಡೆಯುವುದರಲ್ಲೂ ನಿಸ್ಸೀಮ. ಇಂಥ ಅನಾಮತ್ತು ಸಂಪಾದನೆಯಿಂದಲೇ ಗಂಗು ಮೈತುಂಬ ಲೋಹ ಮೆತ್ತಿಕೊಂಡು ಮಿರಮಿರ ಮಿಂಚುತ್ತಿರುತ್ತಾನೆ.

ನೇಹಾ ಪಾಟೀಲ್ ಮತ್ತು ಆಕೆಯ ತಾಯಿಯನ್ನು 'ಬನ್ನಿ' ಎಂದು ಕರೆದವನೂ ಇದೇ ಗಂಗು. ಹೀಗಾಗಿ ನೇಹಾ ಪಾಟೀಲ್ ಮಾಡುತ್ತಿರುವ ಆರೋಪ ನಿಜ ಎಂಬುದರ ಬಗ್ಗೆ ಯಾವುದೇ ಡೌಟಿಲ್ಲ. "ಎಲ್ಲರೊಂದಿಗೂ ಅಡ್ಜಸ್ಟ್ ಆಗು" ಎಂದು ಹಟ ಮಾಡುತ್ತಿದ್ದ ಗಂಗು "ಛಾನ್ಸು ಕೊಡ್ಸಿದ್ದೋದಕ್ಕೆ ದುಡ್ಡು ಕೊಡು" ಎಂದು ಆಕೆಯನ್ನು ಪೀಡಿಸಿದ್ದನಂತೆ. ಮೇಕಪ್ ಚಂದ್ರು ವಿರುದ್ಧವೂ ನೇಹಾ ಆರೋಪ ಮಾಡಿದ್ದಾಳೆ. ಈ ಚಂದ್ರು ಕೂಡ ಕಡಿಮೆ ಆಸಾಮಿಯೇನಲ್ಲ, ಇತ್ತೀಚೆಗೆ 'ಲಂಕೇಶ್' ನಟಿಯರಿಗೆ ಕಾಟ ಕೊಡುತ್ತಿರುವ ಪಿಂಪ್‌ಗಳ ಬಗ್ಗೆ ಬರೆದಾಗ ಚಂದ್ರನ ಹೆಸರನ್ನು ನಮೂದಿಸಿತ್ತು, ಈಗದು ಸಾಬೀತಾಗಿದೆ.

ಸ್ಕ್ರೀನ್ ಟೆಸ್ಟ್ ನಂತರವೂ ಗೇಟ್‌ಪಾಸ್!

ಅದೆಲ್ಲ ಏನೇ ಇರಲಿ, ಪ್ರಸ್ತುತ ವಿವಾದಕ್ಕೆ ಮೂಲ ಕಾರಣ 'ಸಂಕ್ರಾಂತಿ' ಚಿತ್ರದ ನಾಯಕಿ ನೇಹಾಳನ್ನು ಏಕಾಏಕಿ ತೆಗೆದು ಹಾಕಿರುವುದು. "ಆಕೆಗೆ ಆಕ್ಟಿಂಗು ಬರಲ್ಲ, ನೋಡೋಕೂ ಚೆನ್ನಾಗಿಲ್ಲ, ನಟನೆ ಬರದವರನ್ನು ಹಾಕಿಕೊಂಡರೆ ಅತೀವ ನಷ್ಟ ಎದುರಿಸಬೇಕಾಗುತ್ತದೆ. ನಿರ್ಮಾಪಕರ ಹಣ ಸುಖಾಸುಮ್ಮನೆ ಮಣ್ಣು ಪಾಲಾಗುತ್ತದೆ" ಎಂದೆಲ್ಲ ನಿರ್ದೇಶಕ ಮಹೇಶ್ ಮತ್ತು ನಿರ್ಮಾಪಕ ಆರ್.ಎಸ್. ಗೌಡ ಮೂದಲಿಸುತ್ತಿದ್ದಾರೆ. ಆದರೆ ಇವರಿಬ್ಬರೂ ನೇಹಾಳನ್ನು ಸ್ಕ್ರೀನ್ ಟೆಸ್ಟ್ ಮಾಡಿದ ನಂತರವೇ ಆಯ್ಕೆ ಮಾಡಿಕೊಂಡಿದ್ದರು. ಸಿನಿಮಾ ಆರಂಭಗೊಂಡು ಮೂರು ದಿನಗಳ ಚಿತ್ರೀಕರಣವೂ ನಡೆದಿತ್ತು, ಇಷ್ಟೆಲ್ಲ ಆದಮೇಲೆ ನೇಹಾಳನ್ನು ತೆಗೆದುಹಾಕುವ ಅಗತ್ಯವೇನಿತ್ತು? ಈ ಪ್ರಶ್ನೆಗಳಿಗೆ ಅವರೇ ಉತ್ತರ ಕೊಡಬೇಕು.

ನೇಹಾಳಿಗೂ ಕೆಲಪ್ರಶ್ನೆಗಳು

ನೇಹಾ ಪಾಟೀಲ್‌ಗೆ ಇದು ಮೊದಲ ಚಿತ್ರವಾದ್ದರಿಂದ ಆಕೆಗೆ ನಾಲ್ಕಾಣೆಯ ಸಂಭಾವನೆಯನ್ನೂ ಕೊಟ್ಟಿಲ್ಲ, ಆದರೆ ಇಪ್ಪತ್ತು ಜತೆ ಚಪ್ಪಲಿ, ಅಲಂಕಾರಿಕ ಉಡುಪು, ಮೇಕಪ್‌ಗೆ ಬೇಕಾದ ಇಪ್ಪತ್ತೈದು ಸಾವಿರ ಮೌಲ್ಯದ ಕಿಟ್‌ಅನ್ನು ತನ್ನ ವೆಚ್ಚದಲ್ಲೇ ಖರೀದಿಸಿದ್ದೇನೆ ಎನ್ನುತ್ತಿದ್ದಾಳೆ ನೇಹಾ. "ಯಾಕಮ್ಮಾ ನಿಂಗೆ ಈ ಉಸಾಬರಿ? ಕೈಯಿಂದ ಹಣ ಖರ್ಚು ಮಾಡಿ ಸಿನಿಮಾದಲ್ಲಿ ನಟಿಸುವಂಥ ಅವಶ್ಯವೇನು?" ಎಂದು ಕೇಳಿದರೆ "ಚಿತ್ರರಂಗದಿಂದ ಹಣಮಾಡಬೇಕೆಂಬ ಆಶೆ ನನಗಿಲ್ಲ, ನನಗಿರುವ ಕ್ವಾಲಿಫಿಕೇಷನ್ನಿಗೆ ತಿಂಗಳಿಗೆ ನಾಲ್ಕು ಲಕ್ಷ ದುಡಿಯಬಲ್ಲೆ, ನನ್ನ ಮನೆಯಲ್ಲೂ ಹಣಕ್ಕೇನು ಕೊರತೆ ಇಲ್ಲ, ಚಿತ್ರರಂಗದಲ್ಲಿ ಹೆಸರು ಮಾಡಬೇಕೆಂದಿದ್ದೇನೆ. ಚಿತ್ರರಂಗ ನನಗೆ ತುಂಬಾ ಇಷ್ಟವಾದ ಕ್ಷೇತ್ರ" ಎಂದೆಲ್ಲ ಭಾಷಣ ಹೊಡೆಯುತ್ತಾಳೆ.

ನಿಜ ಏನೆಂದು ನೇಹಾಳಿಗೂ ಮತ್ತು ಈಗ ಆಕೆಯನ್ನು ಹೊರದೂಡಿದವರಿಗೆ ಗೊತ್ತು, ಇದರ ಬಗ್ಗೆ ಚೇಂಬರ್ ವಿಚಾರಣೆ ನಡೆಸುತ್ತದೆಯೇ?

ಅದೇನೇ ಇರಲಿ, ನೇಹಾಳಿಗಾಗಿದ್ದನ್ನು ನೋಡಿ ಸಿನಿಮಾದಲ್ಲಿ ನಟಿಸುವ ಆಸೆ ಹೊಂದಿರುವ ಹೆಣ್ಣು ಮಕ್ಕಳು ಇನ್ನಾದರೂ ಹುಷಾರಾಗಿದ್ದರೆ ಅವರಿಗೇ ಒಳ್ಳೆಯದು.

• ಅರುಣೋದಯ

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 27-4-2011



ಅಪರೂಪದ ಅಪ್ಪಟ ಕಲಾವಿದ ಅವಿನಾಶ್

ಕನ್ನಡ ಚಿತ್ರರಂಗದ ನಟನಟಿಯರಿಗಿಂತ ನಮ್ಮ ಖಳ ನಟರು ಮತ್ತು ಪೋಷಕ ನಟರು ಪರಭಾಷೆಯ ಚಿತ್ರರಂಗಗಳಲ್ಲಿ ವಿಜೃಂಭಿಸಿದ್ದೇ ಹೆಚ್ಚು. ಹೀಗೆಂದಾಕ್ಷಣ ನಮಗೆ ತಕ್ಷಣ ನೆನಪಿಗೆ ಬರುವುದು ಪ್ರಕಾಶ್ ರೈ ಹೆಸರು. ಈಗ ರೈ ಮಾದರಿಯಲ್ಲೇ ಆತನ ಗೆಳೆಯ ಅವಿನಾಶ್ ಕೂಡಾ ತಮಿಳು ಚಿತ್ರರಂಗದಲ್ಲಿ ನಿಧಾನವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದಾರೆ.

'ಚಂದ್ರಮುಖಿ' ಚಿತ್ರದ ತಮಿಳು ಅವತರಣಿಕೆಯಲ್ಲಿ ರಜನೀಕಾಂತ್ ಜೊತೆ ನಟಿಸಿದ ನಂತರ ಅವಿನಾಶ್ ಅದೃಷ್ಟ ಖುಲಾಯಿಸಿದೆ. ಕನ್ನಡದಲ್ಲಿ 'ಆಪ್ತಮಿತ್ರ' ಚಿತ್ರವನ್ನು ನೋಡಿದ ರಜನಿ 'ಚಂದ್ರಮುಖಿ'ಯಲ್ಲೂ ಮಂತ್ರವಾದಿ ಪಾತ್ರವನ್ನು ಅವಿನಾಶ್ ಮಾಡಬೇಕು ಎಂದು ಪಟ್ಟುಹಿಡಿದರಂತೆ. ಅಲ್ಲಿಂದ ಅವಿನಾಶ್ ಅವರ ತಮಿಳುಚಿತ್ರರಂಗದ ಹೊಸ ಅಧ್ಯಾಯ ಪ್ರಾರಂಭವಾಯಿತು.

ಇದೀಗ ಸನ್ ಟಿವಿಯವರು ನಿರ್ಮಿಸುತ್ತಿರುವ 'ಏಳಂ ಅರಿವ್' (seventh sense) ಎಂಬ ಚಿತ್ರದಲ್ಲಿ ಅವಿನಾಶ್‌ಗೆ ಬಹಳ ಮುಖ್ಯವಾದ ಪಾತ್ರವೊಂದು ದೊರಕಿದೆಯಂತೆ. ತಮಿಳಿನ ಸೂಪರ್‌ಸ್ಟಾರ್ ಸೂರ್ಯ ಈ ಚಿತ್ರದ ನಾಯಕ. ಸೂರ್ಯನ ತಂದೆಯ ಪಾತ್ರದಲ್ಲಿ ಅವಿನಾಶ್ ನಟಿಸುತ್ತಿದ್ದಾರೆ. ಈ ಚಿತ್ರವನ್ನು ಬರುವ ಮೇ ತಿಂಗಳಿನಲ್ಲಿ ಬಿಡುಗಡೆ ಮಾಡಲು ಅದರ ನಿರ್ಮಾಪಕ ಸ್ಟಾಲಿನ್ ಯೋಚಿಸಿದ್ದಾರೆ.

ಈ ಚಿತ್ರಕ್ಕಾಗಿ ಈಗಾಗಲೇ ಸುಮಾರು 85 ಕೋಟಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆ. ರಜನಿಕಾಂತ್ ನಟಿಸಿದ್ದ 'ಯಂದಿರನ್' ಚಿತ್ರದ ಗ್ರಾಫಿಕ್ಸ್‌ಗಳನ್ನು ತಯಾರಿಸಿದ್ದ ಅಮೆರಿಕದ ತಂತ್ರಜ್ಞರೇ ಇಲ್ಲೂ ತಮ್ಮ ಗ್ರಾಫಿಕ್ ಚಮತ್ಕಾರವನ್ನು ತೋರಿಸುತ್ತಿದ್ದಾರಂತೆ. ಅಂದಹಾಗೆ 'ಗಜನಿ' ಖ್ಯಾತಿಯ ಮುರುಘದಾಸನ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಇಂತಹ ಒಂದು ಅದ್ದೂರಿ ಚಿತ್ರದಲ್ಲಿ ಕನ್ನಡದ ಪೋಷಕ ನಟನೊಬ್ಬ ಬಹಳ ಮುಖ್ಯವಾದ ಪಾತ್ರವೊಂದನ್ನು ನಿರ್ವಹಿಸುತ್ತಿರುವುದು ನಿಜಕ್ಕೂ ಸಂತೋಷದ ವಿಷಯ.

ಸುಮಾರು 25-26 ವರ್ಷಗಳ ಹಿಂದೆ ನಿರ್ದೇಶಕ ಜಿ.ವಿ.ಅಯ್ಯರ್ ಅವರ 'ಮಧ್ವಾಚಾರ್ಯ' ಚಿತ್ರದಲ್ಲಿ ಒಂದು ಪಾತ್ರದಲ್ಲಿ ಕಾಣಿಸಿಕೊಂಡ ಅವಿನಾಶ್‌ಗೆ ಆ ಚಿತ್ರವೇ ಕಮರ್ಷಿಯಲ್ ಚಿತ್ರಗಳ ಪ್ರವೇಶಕ್ಕೆ ದಾರಿಮಾಡಿಕೊಟ್ಟಿತ್ತು. ಈ ಚಿತ್ರವನ್ನು ನೋಡಿದ ನಂತರ "ಈ ನಟನನ್ನು ನಮ್ಮ ಶಿವಣ್ಣನ 'ಸಂಯುಕ್ತ' ಚಿತ್ರದಲ್ಲಿ ಯಾಕೆ ನಟಿಸಲು ಕರೆಸಬಾರದು?" ಎಂದು ಡಾ.ರಾಜ್ ಉದ್ಗರಿಸಿದ್ದರಂತೆ. ಇದರ ಫಲವಾಗಿಯೇ ಅವಿನಾಶ್‌ಗೆ ಕಮರ್ಷಿಯಲ್ ಚಿತ್ರಗಳಲ್ಲಿ ಒಂದು ಒಳ್ಳೆಯ ಆರಂಭ ಸಿಕ್ಕಿತು.

ಅವಿನಾಶ್ ಕನ್ನಡದಿಂದ ತಮಿಳಿಗೆ ಹಾರಿಹೋಗಲು ಮುಖ್ಯಕಾರಣ ಅವರ ಪತ್ನಿ ಮಾಳವಿಕಾಳಿಗೆ ತಮಿಳು ಚಿತ್ರರಂಗದೊಂದಿಗೆ ಇರುವ ಕಾಂಟ್ಯಾಕ್ಟ್ ಮತ್ತು ಜನಪ್ರಿಯತೆ ಎಂದು ಹೇಳುವವರೂ ಇದ್ದಾರೆ. ಅವಿನಾಶ್ ತಮಿಳಿಗೆ ಹೋಗುವ ಮೊದಲೇ ಮಾಳವಿಕಾ ನಿರ್ದೇಶಕ ಕೆ.ಬಾಲಚಂದರ್ ಅವರ ಮೆಗಾ ಸೀರಿಯಲ್‌ನಲ್ಲಿ ನಟಿಸಿ ತಮಿಳುನಾಡಿಲ್ಲಿ ಮನೆಮಾತಾಗಿದ್ದಳು. ಆಗ ಒಬ್ಬ ಸಿನಿಮಾ ನಾಯಕಿಗೆ ತರುವಷ್ಟೇ ಜನಪ್ರಿಯತೆ ಆ ಧಾರಾವಾಹಿ ಮಾಳವಿಕಾಳಿಗೆ ತಂದುಕೊಟ್ಟಿತ್ತು, ಒಂದು ಹಂತದಲ್ಲಂತೂ ಆಕೆ ಅಣ್ಣಾ ಡಿಎಂಕೆಯ ಅಭ್ಯರ್ಥಿಯಾಗಿ ತಮಿಳುನಾಡಿನಲ್ಲಿ ಚುನಾವಣೆಗೆ ಸ್ಪರ್ಧಿಸುತ್ತಾಳೆಂಬ ಗಾಳಿಸುದ್ದಿಯೂ ಹರಡಿತ್ತು.

ಈ ಹಿನ್ನೆಲೆಯಲ್ಲಿ ಮಾಳವಿಕಾ ತನ್ನ ಪತಿಯನ್ನು ತಮಿಳು ಚಿತ್ರರಂಗಕ್ಕೆ ಪರಿಚಯಿಸಿದ್ದರೂ ಅದೇನೂ ಪ್ರಮಾದವಲ್ಲ. ಆದರೆ ಅವಿನಾಶ್ ಪ್ರತಿಭೆಗೆ ನಿಜವಾದ ಲಿಫ್ಟ್ ಸಿಕ್ಕಿದ್ದು ರಜನೀಕಾಂತ್ ಅವರಿಂದ ಎಂಬುದರ ಬಗ್ಗೆ ದೂಸರಾ ಮಾತೇ ಇಲ್ಲ. ರಜನಿ ಜೊತೆ ನಟಿಸಿದ ನಂತರ ಒಮ್ಮೆ ಅವಿನಾಶ್ ನೀಡಿದ ಪ್ರತಿಕ್ರಿಯೆ ಇಲ್ಲಿ ಉಲ್ಲೇಖಿಸಲೇಬೇಕು.



"ರಜನಿ ಜೊತೆ ಒಂದು ಚಿತ್ರದಲ್ಲಿ ನಟಿಸುವುದು 30 ಬೇರೆ ಬೇರೆ ಚಿತ್ರಗಳಲ್ಲಿ ನಟಿಸುವುದಕ್ಕೆ ಸಮ" ಎಂದು ಹೇಳಿದ್ದರು. ಅವಿನಾಶ್ ಅದೃಷ್ಟವೋ ಏನೋ ಇಂತಹ ಅಪ್ರಿಯ ಸತ್ಯದ ಹೇಳಿಕೆ ಅದೃಷ್ಟವಶಾತ್ ಅಷ್ಟೊಂದು ವಿವಾದವಾಗಿ ಬೆಳೆಯಲಿಲ್ಲ.

ಕನ್ನಡದ ಡಾ.ರಾಜ್‌ರಿಂದ ತಮಿಳಿನ ರಜನೀಕಾಂತ್ ತನಕ ಅವಿನಾಶ್ ಅವರನ್ನು ಕರೆದು ತಮ್ಮ ಚಿತ್ರಗಳಲ್ಲಿ ಅವಕಾಶ ಮಾಡಿಕೊಟ್ಟಿರುವುದು ಅವಿನಾಶ್ ಪ್ರತಿಭಾಶಾಲಿ ಎಂಬುದನ್ನು ಸಾಬೀತುಪಡಿಸುತ್ತದೆ. ಯಾವುದೇ ಗಾಡ್ ಫಾದರ್‌ಗಳ ನೆರವಿಲ್ಲದೆ ತನ್ನ ಪ್ರತಿಭೆಯನ್ನೇ ಆಧಾರವಾಗಿಟ್ಟುಕೊಂಡು ಅವಿನಾಶ್ ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ.

ಅಷ್ಟು ಸಾಲದೆಂಬಂತೆ ಈಗ ಅವಿನಾಶ್ ಮಲೆಯಾಳಂನ ಸೂಪರ್‌ಸ್ಟಾರ್ ಮಮ್ಮುಟ್ಟಿ ಅಭಿನಯದ ಮಲೆಯಾಳಂ ಚಿತ್ರದಲ್ಲೂ ನಟಿಸುತ್ತಿದ್ದಾರೆ. ಅಷ್ಟೇ ಆಗಿದ್ದರೆ ಅದೇನೂ ಅಂತ ಸುದ್ದಿ ಅಲ್ಲ; ಆದರೆ ಕಷ್ಟಪಟ್ಟು ಮಲೆಯಾಳಂ ಭಾಷೆ ಕಲಿತು ತನ್ನ ಪಾತ್ರಕ್ಕೆ ತಾನೇ ಕಂಠದಾನ ಮಾಡುವ ಮುಖಾಂತರ ಅವಿನಾಶ್ ಮಲೆಯಾಳಿ ಚಿತ್ರರಂಗದವರನ್ನು ಅಚ್ಚರಿಪಡಿಸಿದ್ದಾರೆ. ಚಿತ್ರ ಬಿಡುಗಡೆಯಾದ ನಂತರ ಅಲ್ಲಿಯ ಪ್ರೇಕ್ಷಕರೂ ಈ ಹೊಸ 'ಮಲೆಯಾಳಿ'ಯನ್ನು ಹೇಗೆ ಸ್ವೀಕರಿಸುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ.

ಹಿಂದೊಮ್ಮೆ ಕಾಲೇಜೊಂದರಲ್ಲಿ ಇಂಗ್ಲಿಷ್ ಮೇಷ್ಟ್ರಾಗಿದ್ದ ಅವಿನಾಶ್ ರಂಗಭೂಮಿಯಲ್ಲಿ ಆಗಾಗ ನಟಿಸುತ್ತಿದ್ದರು. ಅನಂತರ ಕಲಾತ್ಮಕ ಚಿತ್ರಗಳಲ್ಲಿ ನಟಿಸುವ ಮುಖಾಂತರ ಚಿತ್ರರಂಗಕ್ಕೆ ಕಾಲಿಟ್ಟರು. ಆದರೂ ಅನಿಶ್ಚಿತತೆಗೆ ಹೆಸರಾದ ಚಿತ್ರರಂಗವನ್ನು ಅವರು ಎರಡೂ ಕೈಗಳಿಂದ ಅಪ್ಪಿಕೊಳ್ಳಲೇ ಇಲ್ಲ, ಹೀಗಾಗಿ ಅದೆಷ್ಟೋ ವರ್ಷಗಳ ತನಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಾ ಬಿಡುವಿನ ಸಮಯದಲ್ಲಿ ಸಿನಿಮಾಗಳಲ್ಲಿ ನಟಿಸುತ್ತಿದ್ದರು. ಕೈತುಂಬ ಅವಕಾಶ ಕೂಡಿ ಬಂದನಂತರವೇ ಅವಿನಾಶ್ ಪಾಠ ಹೇಳುವ ಕೆಲಸಕ್ಕೆ ಟಾಟಾ ಹೇಳಿ ಫುಲ್‌ಟೈಂ ನಟನಾವೃತ್ತಿಯನ್ನು ಸ್ವೀಕರಿಸಿದರು.

ಇಂತಹ ನಟ ಇಂದು ದಕ್ಷಿಣ ಭಾರತ ಬಹುತೇಕ ಸೂಪರ್‌ಸ್ಟಾರ್‌ಗಳ ಮೆಚ್ಚುಗೆ ಪಡೆಯುತ್ತಿರುವುದು ಅತ್ಯಂತ ಸಂತೋಷದ ವಿಷಯ. ಇಂಗ್ಲಿಷ್ ಮೇಷ್ಟ್ರಾಗಿದ್ದು ಈಗ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದ್ದಲ್ಲದೆ ಈಗ ದಕ್ಷಿಣ ಭಾರತದ ನಾಲ್ಕು ಭಾಷೆಗಳಲ್ಲೂ ನಟಿಸುತ್ತಾ ಅವಿನಾಶ್ 'ಚತುರ್ಭಾಷಾ ತಾರೆ' ಎಂದೆನಿಸಿಕೊಂಡಿರುವುದು ಸೋಜಿಗ ಮಾತ್ರವಲ್ಲ; ಹೆಮ್ಮೆಯ ವಿಷಯವೂ ಹೌದು.

ಇಷ್ಟಾದರೂ ಈ ಅವಿನಾಶ್ ಇಂದಿಗೂ ಅದೇ ಸಂಕೋಚ ಮನೋಭಾವ ವ್ಯಕ್ತಿಯಾಗಿ ಇದ್ದಾರೆಯೇ ವಿನಃ ಈ ತಾರಾ ವರ್ಚಸ್ಸು ಅಥವಾ ಬೇಡಿಕೆಗಳು ಅವರನ್ನು ಬದಲಾಯಿಸಿಲ್ಲ, ಅದೇ ಮೃದುಮಾತು, ಅದೇ ಸರಳತೆಯ ಈ ವ್ಯಕ್ತಿ ಬೆಳ್ಳಿ ಪರದೆ ಮೇಲೆ ಮಾತ್ರ ಹಿಂದಿಗಿಂತಲೂ ಈಗ ಹೆಚ್ಚು ಅಬ್ಬರಿಸುತ್ತಿದ್ದಾರೆ.

• ಶೆಣೈ

ಪೂಜಾ ನಿವೃತ್ತಿ!

ಮೊನ್ನೆ ಮೊನ್ನೆಯಷ್ಟೇ ರಮ್ಯಾಳ ಜೊತೆಜೊತೆಗೆ ವಿವಾದದ ಕೇಂದ್ರಬಿಂದುವಾಗಿದ್ದ ನಾಯಕಿ ಪೂಜಾ ಗಾಂಧಿ ಈಗ ಮತ್ತೊಮ್ಮೆ ಸುದ್ದಿಯ ಕೇಂದ್ರಬಿಂದುವಾಗಿದ್ದಾಳೆ.

"ಸದ್ಯಕ್ಕೆ ನಾನು ನಟನೆಗೆ ತಾತ್ಕಾಲಿಕವಾಗಿ ವಿರಾಮ ಘೋಷಿಸಿದ್ದು ಈ ವಿರಾಮದ ವೇಳೆಯಲ್ಲಿ ಒಂದು ಚಿತ್ರದ ನಿರ್ಮಾಣಕ್ಕೆ ಕೈಹಾಕಿದ್ದೇನೆ" ಎಂದು ಹೇಳುವ ಮುಖಾಂತರ ಪೂಜಾ ಚಿತ್ರರಂಗದ ನಾಯಕಿಯರೆಲ್ಲ ಹುಬ್ಬೇರಿಸುವಂತೆ ಮಾಡಿದ್ದಾರೆ.



ಸಾಮಾನ್ಯವಾಗಿ ನಾಯಕಿಯೊಬ್ಬಳು ಚಿತ್ರ ನಿರ್ಮಾಣವನ್ನು ಕೈಗೆತ್ತಿಕೊಂಡಿದ್ದಾಳೆಂದರೆ ಅವಳ ನಟನಾವೃತ್ತಿಯ ಅಧ್ಯಾಯ ಮುಗಿದಂತೆ ಎಂದೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಪೂಜಾ ವಿಷಯದಲ್ಲೂ ಹಾಗೆಯೇ ಅರ್ಥೈಸಲಾಗುತ್ತಿದೆ. ಚಿತ್ರರಂಗದ ಕೆಲವರು "ಈಕೆ ಬ್ರೇಕ್ ಅನೌನ್ಸ್ ಮಾಡುವ ಮೊದಲೇ ಚಿತ್ರರಂಗದ ನಿರ್ಮಾಪಕರೇ ಈಕೆಗೆ ಬ್ರೇಕ್ ಮತ್ತು ಕೊಕ್ ನೀಡಿದ್ದಾರೆ" ಎಂದು ಕುಹಕ ಆಡುತ್ತಿದ್ದಾರೆ. ಸಾಮಾನ್ಯವಾಗಿ ನಟಿಯೊಬ್ಬಳು ಚಿತ್ರವೊಂದರ ನಿರ್ಮಾಣ ಮಾಡುವುದೆಂದರೆ ಅದು ಕಲಾತ್ಮಕ ಚಿತ್ರವಾಗಿರುತ್ತದೆ ಮತ್ತು ಪ್ರಶಸ್ತಿಯನ್ನು ಪಡೆಯುವ ಉದ್ದೇಶದಿಂದಲೇ ಅವರು ಅಂತಹ ಚಿತ್ರಕ್ಕೆ ಕೈಹಾಕಿರುತ್ತಾರೆ. ಇದಕ್ಕೆ ಉದಾಹರಣೆಯೆಂದರೆ ತಾರಾ, ಸೌಂದರ್ಯಾ, ಜಯಮಾಲ ಮತ್ತು ಪ್ರಮೀಳಾ ಜೋಷಾಯ್. ಇವರೆಲ್ಲಾ ಕಲಾವಿದೆಯರಾಗಿ ಸಂಪಾದಿಸಿದ ಹಣವನ್ನು ಒಂದು ಚಿತ್ರವನ್ನು ನಿರ್ಮಿಸಲು ಹೂಡಿ ಆ ಮೂಲಕ ಪ್ರಶಸ್ತಿ ಪಡೆದು ಮಿಂಚಿದವರೇ.

ಆದರೆ ಪೂಜಾ ಗಾಂಧಿ ಅಂತಹ ಸಂಪ್ರದಾಯಕ್ಕೆ ತಲೆಬಾಗದೆ ಒಂದು ಅಪ್ಪಟ ಕಮರ್ಷಿಯಲ್ ಚಿತ್ರ ಮಾಡಲು ಹೊರಟಿದ್ದಾರೆ. ಆಕೆಯ ಬೆನ್ನ ಹಿಂದೆ ಕರ್ನಾಟಕದ ಮತ್ತು ದೆಹಲಿಯ ಕೆಲವು ಶ್ರೀಮಂತರಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಮೊನ್ನೆ ತಾನೇ ಅಂಬರೀಷ್ ನೇತೃತ್ವದಲ್ಲಿ ನಡೆದ ಸಂಧಾನ ಪ್ರಕ್ರಿಯೆಯಲ್ಲಿ ಪೂಜಾ ಗಾಂಧಿಗೆ ನಿರ್ಮಾಪಕರಿಂದ ಬರಬೇಕಿದ್ದ ಹಣವನ್ನು ಕೊಡಿಸುವ ಬದಲು ಆಕೆಗೆ ಒಂದು ಏರಿಯಾವನ್ನು ನೀಡಿ, ಅಲ್ಲಿ ಚಿತ್ರ ಬಿಡುಗಡೆ ಮಾಡಿ ತನ್ನ ಹಣವನ್ನು ವಾಪಸ್ ಪಡೆದುಕೊಳ್ಳಬೇಕು ಎಂಬ ತೀರ್ಮಾನ ನೀಡಲಾಗಿತ್ತು, ಆ ಚಿತ್ರದ ಹಂಚಿಕೆದಾರಿಣಿಯಾಗಿ ಪೂಜಾಗೆ ಒಂದೇ ಒಂದು ಪೈಸೆ ಸಿಗದಿದ್ದರೂ ಆಕೆ ಈಗ ನೇರವಾಗಿ ಚಿತ್ರ ನಿರ್ಮಾಣಕ್ಕೆ ಕೈಹಾಕಿರುವುದು ವಿಶೇಷವೇ ಸರಿ.



ಕುಳ್ಳ ಬರೆದ ಲವ್ ಲೆಟರ್!

ಚಿತ್ರರಂಗದ ಕುಳ್ಳ ಎಂದೇ ಖ್ಯಾತಿ ಪಡೆದಿರುವ ದ್ವಾರಕೀಶ್ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ಸಚಿವೆ ಅಂಬಿಕಾ ಸೋನಿ ಅವರಿಗೆ ಒಂದು 'ಲವ್ ಲೆಟರ್' ಬರೆದಿದ್ದಾರಂತೆ! ಇದನ್ನು ಓದಿ ನೀವೆಲ್ಲಾ ಇದೇನು ಈ ವಯಸ್ಸಿನಲ್ಲಿ ಲವ್‌ಲೆಟರಾ? ಎಂದು ಆಶ್ಚರ್ಯಪಡಬೇಕಾಗಿಲ್ಲ.

ದ್ವಾರಕೀಶ್ ಬರೆದ ಪತ್ರದಲ್ಲಿ ಮುಖ್ಯವಾಗಿ ಪ್ರಸ್ತಾಪಿಸಿದ್ದು 'ವಿಷ್ಣುವರ್ಧನ' ಚಿತ್ರದ ಟೈಟಲ್ ಬಗ್ಗೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹೇಗೆ ತನಗೆ ಈ ಟೈಟಲ್ ನೀಡದೇ ಸತಾಯಿಸುತ್ತಿದೆ ಎಂದು ದ್ವಾರಕೀಶ್ ಅಂಬಿಕಾ ಸೋನಿಯವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರಂತೆ. ಅಂತೂಇಂತೂ ಗಾಂಧಿನಗರದ ಒಂದು ಸಣ್ಣ ಮನಸ್ತಾಪ ಕೇಂದ್ರ ಸರ್ಕಾರದ ವಾರ್ತಾ ಮಂತ್ರಿಯವರ ಕಚೇರಿಯನ್ನು ತಲುಪಿದಂತಾಯಿತು. "ನಾನು ಯಾವುದೇ ಕಾರಣಕ್ಕೂ 'ವಿಷ್ಣುವರ್ಧನ' ಟೈಟಲನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ" ಎಂದು ದ್ವಾರಕೀಶ್ ಸಮಯ ಸಿಕ್ಕಾಗಲೆಲ್ಲಾ ಅಬ್ಬರಿಸುತ್ತಲೇ ಇದ್ದಾರೆ. "ವಿಷ್ಣುವರ್ಧನ ಹೆಸರಿನಲ್ಲಿ ಅವರ ಬಳಿ ಪಾಸ್‌ಪೋರ್ಟ್ ಇದೆಯಾ? ರೇಷನ್‌ಕಾರ್ಡ್ ಇದೆಯಾ? ಅಥವಾ ವಿಷ್ಣುವರ್ಧನ ಹೆಸರಿನಲ್ಲಿ ಆದಾಯ ತೆರಿಗೆ ಕಟ್ಟಿದ ದಾಖಲೆ ಪತ್ರಗಳಿವೆಯಾ?" ಎಂದು ಭಾರತಿ ವಿಷ್ಣುವರ್ಧನ್ ಅವರನ್ನು ಪರೋಕ್ಷವಾಗಿ ಈ ಕುಳ್ಳ ಪ್ರಶ್ನಿಸುತ್ತಿರುವುದು ನಿಮಗೆಲ್ಲಾ ಗೊತ್ತಿರುವ ವಿಷಯವೇ.

ಇತ್ತೀಚೆಗೆ ಬಂದ ಸುದ್ದಿಯ ಪ್ರಕಾರ ಈ ಚಿತ್ರದ ನಾಯಕ ಸುದೀಪನಿಗೆ 'ವಿಷ್ಣುವರ್ಧನ' ಎಂದೂ, ನಾಯಕಿ ಭಾವನಾಳಿಗೆ 'ಭಾರತಿ' ಎಂದೂ ಹೆಸರಿಟ್ಟಿದ್ದಾರಂತೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44

K